ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 21 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 302 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಎಂ ಜಾತಿ ಅಸ್ತ್ರ ಪ್ರಯೋಗ

ವಿಪಕ್ಷ–ಸ್ವಪಕ್ಷದ ವಿರೋಧಿಗಳಿಗೆ ಸಿದ್ದರಾಮಯ್ಯ ಎಚ್ಚರಿಕೆ ಸಂದೇಶ...!?

ಬೆಂಗಳೂರು, ಫೆ.20– ಕುರಿ ಕಾಯುತ್ತಿದ್ದವನು ರಾಜ್ಯದ ಮುಖ್ಯಮಂತ್ರಿ ಹುದ್ದೆಗೆ ಏರಿದ್ದು, ದಾಖಲೆಯ ಬಜೆಟ್ ಮಂಡಿಸಿದ್ದು ಹಲವರ ಕಣ್ಣು ಕೆಂಪಾಗಲು ಕಾರಣವಾಗಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ವಿಪಕ್ಷದ ವಿರೋಧಿಗಳು ಹಾಗೂ ಸ್ವಪಕ್ಷದ ಪ್ರತಿಸ್ಪರ್ಧಿಗಳಿಗೆ ಜಾತಿಯ 'ಅಸ್ತ್ರ' ಪ್ರಯೋಗಿಸಿ ಎಚ್ಚರಿಕೆ ಸಂದೇಶ ನೀಡಿದ್ದಾರೆ.

ಸಾಮಾಜಿಕ ನ್ಯಾಯ ದಿನಾಚರಣೆ ದಿನವಾದ ಇಂದು ಮುಖ್ಯಮಂತ್ರಿಗಳ ಈ ಹೇಳಿಕೆ ಭಾರೀ ಮಹತ್ವ ಪಡೆದುಕೊಂಡಿದೆ. ಕುರಿ ಕಾಯುತ್ತಿದ್ದವನು ರಾಜ್ಯದ ಮುಖ್ಯಮಂತ್ರಿಯಾದ, ಆರ್ಥಿಕ ತಜ್ಞರಿಗೆ ಸರಿಸಮನಾಗಿ ನಿಂತು ಸಾಲು–ಸಾಲು ಬಜೆಟ್ ಮಂಡಿಸಿ, ಶಹಬ್ಬಾಸ್‌ಗಿರಿ ಗಳಿಸುತ್ತಿದ್ದಾನಲ್ಲಾ ಎನ್ನುವ ಅಸಹನೆ, ಅವರೊಳಗೆ ದ್ವೇಷ, ಅಸೂಯೆ ಕುದಿಯುತ್ತಿದೆ. ಇವನೊಬ್ಬನನ್ನು ರಾಜಕೀಯವಾಗಿ ಮುಗಿಸಿಬಿಟ್ಟರೆ, ಅದರ ನಂತರ ನಮ್ಮೆಲ್ಲರ ಹಾದಿ ಸುಲಭವಾಗುತ್ತದೆ ಎನ್ನುವ ರಾಜಕೀಯ ದುರುದ್ದೇಶದ ಲೆಕ್ಕಾಚಾರ ಹಲವರ ಮನಸ್ಸಿನಲ್ಲಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ (ಎಕ್ಸ್)ಪೋಸ್ಟ್ ಮಾಡಿದ್ದಾರೆ.

ಮುಖ್ಯಮಂತ್ರಿಗಳು ತಮ್ಮ ಟ್ವೀಟ್‌ನಲ್ಲಿ ಎಲ್ಲೂ ಬಿಜೆಪಿಯನ್ನಾಗಲಿ, ಜೆಡಿಎಸ್ ನಾಯಕರನ್ನಾಗಿ ನೇರ ಟಾರ್ಗೆಟ್ ಮಾಡಿಲ್ಲ. ಬದಲಿಗೆ, ಜಾತಿ ಅಸ್ತ್ರವನ್ನು ಪ್ರಬಲವಾಗಿ ಬಳಸಿದ್ದಾರೆ. ನನ್ನ ಮೇಲೆ ಬರುತ್ತಿರುವ ಸಾಲು–ಸಾಲು ಆರೋಪಗಳಿಗೆ, ನಾನು ಹುಟ್ಟಿದ ಜಾತಿಯೂ ಕಾರಣ ಎಂದು ಹೇಳಿದ್ದಾರೆ.



ನನ್ನನ್ನು ರಾಜಕೀಯವಾಗಿ ಮೂಲೆಗೆ ತಳ್ಳಿದರೆ, ನಮ್ಮೆಲ್ಲರ ಹಾದಿ ಸುಗಮವಾಗುತ್ತದೆ ಎನ್ನುವ ಲೆಕ್ಕಾಚಾರ ಇವರ ಮನಸ್ಸಿನಲ್ಲಿದೆ. ಸಾಮಾಜಿಕ ನ್ಯಾಯಕ್ಕೆ ಕೈಹಾಕಿದವರೆಲ್ಲರಿಗೂ ನಮ್ಮ ಇತಿಹಾಸದಲ್ಲಿ ಇದೇ ರೀತಿ ಆಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಇದಕ್ಕೆ ಬುದ್ಧ, ಬಸವಣ್ಣ, ಡಾ. ಅಂಬೇಡ್ಕರ್, ಪೆರಿಯಾರ್, ನಾರಾಯಣಗುರು ಮತ್ತು ಕನಕದಾಸರ ಉದಾಹರಣೆಯನ್ನು ಸಹ ನೀಡಿದ್ದಾರೆ.

ನನ್ನ ನಾಲ್ಕು ದಶಕಗಳ ರಾಜಕೀಯ ಜೀವನ ಎಂದಿಗೂ ಹೂವಿನ ಹಾಸಿಗೆಯಾಗಿರಲಿಲ್ಲ. ಅದು ಕಲ್ಲು–ಮುಳ್ಳುಗಳ ಹಾದಿಯಾಗಿತ್ತು. ನನ್ನನ್ನು ರಾಜಕೀಯವಾಗಿ ಮುಗಿಸಲು ಹಲವಾರು ದೊಡ್ಡ ದೊಡ್ಡ ನಾಯಕರು ಹಲವು ಬಗೆಯ ಕುಟಿಲ ಕಾರಸ್ತಾನಗಳನ್ನು ಮಾಡಿದ್ದಾರೆ. ಅವುಗಳೆಲ್ಲವನ್ನು ಜನತೆಯ ಆಶೀರ್ವಾದದಿಂದ ಗೆದ್ದು ಬಂದಿದ್ದೇನೆ. ಇದು ನನ್ನ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳಲ್ಲ. ಇದು ನನ್ನನ್ನು ನಂಬಿರುವ, ಪ್ರೀತಿಸುತ್ತಿರುವ, ನನಗೆ ನಿರಂತರವಾಗಿ ಆಶೀರ್ವಾದ ಮಾಡಿ ಬೆಂಬಲಿಸುತ್ತಿರುವ ನಿಮ್ಮ ವಿರುದ್ಧವಾಗಿ ನಡೆಯುತ್ತಿರುವ ಷಡ್ಯಂತ್ರ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ನನ್ನ ಉಸಿರು ಇರುವವರೆಗೂ ಈ ರಾಜಕೀಯ ಷಡ್ಯಂತ್ರ ದ್ವೇಷ, ಅಸೂಯೆ ರಾಜಕಾರಣದ ವಿರುದ್ಧ ಹೋರಾಡುತ್ತೇನೆ. ಇದು ಸತ್ಯ, ನ್ಯಾಯ, ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟ. ನಿಮ್ಮೆಲ್ಲರ ಬೆಂಬಲದೊಂದಿಗೆ ಈ ಹೋರಾಟವನ್ನ ■ 6ನೇ ಪುಟಕ್ಕೆ

> ▶ ಕಣ್ಣು ಕೆಂಪಾಗಿರುವುದು ನಿಮ್ಮ ಸರ್ಕಾರದ ಭ್ರಷ್ಟಾಚಾರಗಳಿಂದಾಗಿಯೇ ಹೊರತು ನಿಮ್ಮ ಜಾತಿಯಿಂದಲ್ಲ. ಕುರಿಗಾಹಿಯೊಬ್ಬನು ರಾಜ್ಯದ ಸಿಎಂ ಆಗುತ್ತಾರೆ ಎಂದರೆ ಅದು ನಮ್ಮ ಸುಂದರ ಸಂವಿಧಾನ. ಬೆಲೆ ಏರಿಕೆ, ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ, ಜಾತಿ ಅಸ್ತ್ರ ಪ್ರಯೋಗಿಸುವುದನ್ನು ಬಿಟ್ಟು ಬಿಡಿ. ಜನರು ಅದನ್ನು ನಂಬುವ ಕಾಲ ಹೋಗಿದೆ.
>
> – ಆರ್.ಅಶೋಕ್, ವಿಪಕ್ಷ ನಾಯಕ

ಬೆಂಗಳೂರಲ್ಲಿ ಸ್ನೇಹಮಯಿ ಕೃಷ್ಣ ಬಂಧನ

ಬೆಂಗಳೂರು ಸಿಸಿಬಿ ಪೊಲೀಸರಿಂದ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ವಶಕ್ಕೆ

ಬೆಂಗಳೂರು: ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದ ವಿರುದ್ಧ ಗಂಭೀರ ಆರೋಪ ಮಾಡಿದ್ದ, ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನ ಬೆಂಗಳೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮುಡಾದ ಮಾಜಿ ಆಯುಕ್ತ ಡಿ.ಬಿ. ನಟೇಶ್ ನೀಡಿದ ದೂರಿನ ಮೇರೆಗೆ ಇವರನ್ನು ಬಂಧಿಸಲಾಗಿದೆ.



ಸ್ನೇಹಮಯಿ ಕೃಷ್ಣ

ಸ್ನೇಹಮಯಿ ಕೃಷ್ಣ ಅವರು ಇಂದು ಕೆಲಸದ ನಿಮಿತ್ತ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ಗೆ ಆಗಮಿಸಿದ್ದರು. ಈ ಬಗ್ಗೆ ಮೊದಲೇ ಮಾಹಿತಿ ಪಡೆದಿದ್ದ ಸಿಸಿಬಿ ಪೊಲೀಸರು, ಕೋರ್ಟ್ ಆವರಣದ ಬಳಿಯೇ ಅವರನ್ನು ಸುತ್ತುವರಿದು ವಶಕ್ಕೆ ಪಡೆದಿದ್ದಾರೆ ಈ ಹಠಾತ್ ಬೆಳವಣಿಗೆಯಿಂದ ಕೋರ್ಟ್ ಆವರಣದಲ್ಲಿ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ನಟೇಶ್ ನೀಡಿದ ದೂರೇನು: ಇತ್ತೀಚೆಗಷ್ಟೇ ಸ್ನೇಹಮಯಿ ಕೃಷ್ಣ, ನಟೇಶ್ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ 1.60 ಕೋಟಿ ಹಣ ನೀಡಿ, ನಟೇಶ್ ಮುಂಬಡ್ತಿ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದ್ದರು.

ಈ ಸಂಬಂಧ ಮುಡಾ ಮಾಜಿ ಆಯುಕ್ತ ನಟೇಶ್, ನಾನು ಯಾವುದೇ ಹಣ ನೀಡಿಲ್ಲ. ಕೃಷ್ಣ ಅವರು ಮಾಡಿರುವ ಆರೋಪಗಳು ಸಂಪೂರ್ಣ ಸುಳ್ಳು ಮತ್ತು ಆಧಾರ ರಹಿತ. ಈ ರೀತಿ ಸುಳ್ಳು ಹೇಳಿಕೆಗಳು, ಆರೋಪಗಳನ್ನು ಮಾಡುವ ಮೂಲಕ ತಮ್ಮ ವ್ಯಕ್ತಿತ್ವಕ್ಕೆ ಕಳಂಕ ತರಲಾಗುತ್ತಿದೆ ಎಂದು ಬೆಂಗಳೂರು ಪೊಲೀಸ್ ಕಮೀಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದರು. ದೂರಿನ ಅನ್ವಯ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ■ 6ನೇ ಪುಟಕ್ಕೆ

ಕೃಷ್ಣ ಬಂಧನ ದುರಾಡಳಿತಕ್ಕೆ ಸಾಕ್ಷಿ

ಬೆಂಗಳೂರು: ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಬಂಧನಕ್ಕೆ ವಿಪಕ್ಷ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ.



ವಿಧಾನ ಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಸ್ನೇಹಮಯಿ ಕೃಷ್ಣ ಬಂಧನ ಇದು ದುರಾಡಳಿತದ ಪರಮಾವಧಿ. ಕರ್ನಾಟಕದಲ್ಲಿ ಎಮರ್ಜೆನ್ಸಿಯನ್ನು ಈ ಸರ್ಕಾರ ತಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಡಾ ಕೇಸ್ ವಿರುದ್ದ ಸ್ನೇಹಮಯಿ ಕೃಷ್ಣ ಹೋರಾಟ ಮಾಡಿದ್ದರು. ನಾವು ಕೂಡಾ ಪಾದಯಾತ್ರೆ ಮಾಡಿದ್ದೆವು. ಇದನ್ನ ಇವರಿಗೆ ಸಹಿಸೋಕೆ ಆಗಿಲ್ಲ. ಹೀಗಾಗಿ ಕೋರ್ಟ್‌ನಿಂದಲೇ ನ್ಯಾಯಕ್ಕಾಗಿ ಹೋರಾಟ ಮಾಡುವವರ ಬಂಧನ ಮಾಡಿದ್ದಾರೆ. ಗಾಂಧಿ ಆದರ್ಶದ ವಿರುದ್ಧ ಈ ಸರ್ಕಾರ ನಡೆದುಕೊಳ್ಳುತ್ತಿದೆ. ನ್ಯಾಯದ ಕತ್ತು ಹಿಸುಕೋ ಕೆಲಸ ಮಾಡುತ್ತಿದೆ ಈ ಸರ್ಕಾರ ಎಂದು ಕಿಡಿಕಾರಿದರು.

ಪದೇ ಪದೆ ಬಂಧನದಿಂದ ಭಯವಾಗ್ತಿದೆ...

ಸ್ನೇಹಮಯಿ ಕೃಷ್ಣ ಪತ್ನಿ ಜಿ.ಎನ್.ವಿನೋದಾ ಆತಂಕ



ಮೈಸೂರು, ಫೆ.20(ಪಿಎಂ)– ಅನ್ಯಾಯದ ವಿರುದ್ಧ ನನ್ನ ಪತಿ ಸ್ನೇಹಮಯಿ ಕೃಷ್ಣ ಹೋರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಸಿಕ್ಕಿಸಬೇಕೆಂದು ಅವರು ಇಲ್ಲದ ಸಮಯದಲ್ಲಿ ಶೋಧ ಕಾರ್ಯ ನಡೆಸಲಾಗಿದೆ ಎಂದು ಸ್ನೇಹಮಯಿ ಕೃಷ್ಣ ಅವರ ಪತ್ನಿ ಜಿ.ಎನ್.ವಿನೋದಾ ದೂರಿದರು.


ಶೋಧ ಕಾರ್ಯ ಪೂರ್ಣಗೊಂಡ ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಮಧ್ಯಾಹ್ನ 2.40ಕ್ಕೆ ನಮ್ಮ ಮನೆಗೆ ಭೇಟಿ ನೀಡಿದ ಪೊಲೀಸರು ನಿಮ್ಮ ಪತಿ ಸ್ನೇಹಮಯಿ ಕೃಷ್ಣ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಸಂಬಂಧ ಶೋಧ ಕಾರ್ಯ ನಡೆಸಬೇಕಿದೆ ಎಂದು ತಿಳಿಸಿದರು. ಪತಿ ಬೆಂಗಳೂರಿಗೆ ■ 6ನೇ ಪುಟಕ್ಕೆ

ಸ್ನೇಹಮಯಿ ಕೃಷ್ಣ ಮೈಸೂರು ನಿವಾಸದಲ್ಲಿ ತೀವ್ರ ಶೋಧ

ಮೈಸೂರು,ಫೆ.20(ಪಿಎಂ)– ಈ ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಹಗರಣದ ದೂರುದಾರ ಹಾಗೂ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಬೆಂಗಳೂರು ನಗರ ಸಿಸಿಬಿ ಪೊಲೀಸರು, ಬೆಂಗಳೂರಿನಲ್ಲಿ ಶುಕ್ರವಾರ ವಶಕ್ಕೆ ಪಡೆದಿದ್ದು, ಇದರ ಬೆನ್ನಲ್ಲೇ ಮೈಸೂರಿನ ಸ್ನೇಹಮಯಿ ಕೃಷ್ಣ ಅವರ ಮನೆ ಮತ್ತು ಕಚೇರಿಯಲ್ಲಿ ಬೆಂಗಳೂರು ಸಿಸಿಬಿ ಪೊಲೀಸರು, ಶೋಧ ಕಾರ್ಯ ನಡೆಸಿದರು.

ಗೌರಿಶಂಕರನಗರದ ಭೈರವೇಶ್ವರನಗರದಲ್ಲಿರುವ ಸ್ನೇಹಮಯಿ ಕೃಷ್ಣ ಅವರ ಮನೆ, ಕಚೇರಿ ಹಾಗೂ ಇವರ ■ 6ನೇ ಪುಟಕ್ಕೆ

ಮಾರ್ಚ್‌ನಿಂದ ಅಧಿಕ ಬಿಸಿಲು



ಬೆಂಗಳೂರು, ಫೆ20– ಕರ್ನಾಟಕದಲ್ಲಿ ಫೆಬ್ರವರಿ ತಿಂಗಳಲ್ಲೇ ತಾಪಮಾನ ಹೆಚ್ಚಾಗಿದ್ದು, ಈ ನಡುವೆ ಮಾರ್ಚ್‌ನಿಂದ ಮೇ ತಿಂಗಳವರೆಗೆ ರಾಜ್ಯದಲ್ಲಿ ಬಿಸಿಲಿನ ಬೇಗೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (IMD) ಎಚ್ಚರಿಕೆ ನೀಡಿದೆ. 2026ರ ಮಾರ್ಚ್‌ನಿಂದ ಮೇ ಅವಧಿಯಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ ■ 6ನೇ ಪುಟಕ್ಕೆ

ಬಂಡೀಪುರ, ನಾಗರಹೊಳೆಯಲ್ಲಿ ಇಂದಿನಿಂದ ಸಫಾರಿ ಪುನರಾರಂಭ

● ಅರಣ್ಯ ಸಚಿವ ಈಶ್ವರ ಖಂಡ್ರೆ ಘೋಷಣೆ ● ಹೊಸ ನಿಯಮದನ್ವಯ ಶೇ.50 ವಾಹನ, ಸಿಬ್ಬಂದಿ ಬಳಕೆ



ಮೈಸೂರು, ಫೆ.20(ಎಂಟಿವೈ)– ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಾಲ್ಕು ತಿಂಗಳಿಂದ ಸ್ಥಗಿತಗೊಂಡಿದ್ದ ಸಫಾರಿಯನ್ನು ನಾಳೆ(ಫೆ.21)ಯಿಂದಲೇ ಹೊಸ ನಿಯಮದನ್ವಯ ಪುನರಾರಂಭಿಸುವಂತೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸೂಚಿಸಿದ್ದಾರೆ.

ಮೈಸೂರು ಅರಣ್ಯ ಭವನದಲ್ಲಿ ಶುಕ್ರವಾರ ಮೈಸೂರು, ಕೊಡಗು ಮತ್ತು ಚಾಮರಾಜನಗರ ವಿಭಾಗದ ಅರಣ್ಯ ಇಲಾಖಾ ಹಿರಿಯ ಅಧಿಕಾರಿಗಳು ಹಾಗೂ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಮಾನವ–ವನ್ಯಜೀವಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ ನ.7ರಂದು ಸಫಾರಿ ಸ್ಥಗಿತಗೊಳಿಸಲಾಗಿತ್ತು. ತಜ್ಞರ ಸಮಿತಿ ನೀಡಿದ ವರದಿ ಅನುಸಾರ ಕೆಲವು ಮಾರ್ಪಾಡಿನೊಂದಿಗೆ ಸಫಾರಿಯನ್ನು ಪುನರಾರಂಭಿಸಲು ಆದೇಶಿಸಲಾಗಿದೆ. ನಾಳೆ(ಫೆ.21) ಯಿಂದಲೇ ಷರತ್ತುಬದ್ಧ ಸಫಾರಿ ಪುನರಾರಂಭಿಸಲು ಕ್ರಮ ಕೈಗೊಳ್ಳಬೇಕು. ಹೊಸದಾಗಿ ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಉಲ್ಲಂಘನೆಯಾದರೆ ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದರು.



ಮೈಸೂರಿನ ಅರಣ್ಯ ಇಲಾಖೆಯಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅರಣ್ಯಾಧಿಕಾರಿಗಳ ಸಭೆ ನಡೆಸಿದರು.

ಶೇ.50 ಕಡಿತ: ನ.7ಕ್ಕೆ ಮೊದಲು ಬಳಕೆಯಾಗುತ್ತಿದ್ದ ಸಫಾರಿ ವಾಹನಗಳಲ್ಲಿ ಶೇ.50ರಷ್ಟು ಬಳಕೆ ಮಾಡಬೇಕು. ಜೀಪ್ ಮತ್ತು ಕ್ಯಾಂಪರ್‌ಗಿಂತ ಬಸ್‌ಗಳನ್ನು ಹೆಚ್ಚಾಗಿ ಬಳಸಬೇಕು. ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದರು.

ವನ್ಯಜೀವಿಗಳು ಕಾಡಿನಿಂದ ಹೊರ ಬರದಂತೆ ಎಚ್ಚರ: ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷ ಇರುವ ಪ್ರದೇಶವನ್ನು ಗುರುತಿಸಬೇಕು. ಆ ಪ್ರದೇಶದಲ್ಲಿ ಗಸ್ತು ಹೆಚ್ಚಿಸಬೇಕು. ವನ್ಯಜೀವಿಗಳು ವಸತಿ ಪ್ರದೇಶಕ್ಕೆ ಬಾರದಂತೆ, ಜೀವಹಾನಿ, ಬೆಳೆ ಹಾನಿ ಮಾಡದಂತೆ ಎಚ್ಚರಿಕೆ ವಹಿಸಬೇಕು. ಬಂಡೀಪುರ ಅರಣ್ಯದ ಗಡಿಯಲ್ಲಿ 100 ಕಿ.ಮೀ. ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಇಲ್ಲಿ 5 ಕಿ.ಮೀ.ಗೆ ಒಂದರಂತೆ 25 ಶಿಬಿರ ನಿರ್ಮಿಸಿ ಪ್ರತಿ ಶಿಬಿರದಲ್ಲಿ ಸ್ಥಳೀಯರನ್ನು 'ಕಾಡಿನ ಮಿತ್ರ'ರಾಗಿ ನೇಮಕ ಮಾಡಿ ಕೊಂಡು ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಥರ್ಮಲ್ ಡ್ರೋನ್, ವಾಹನ ಇತ್ಯಾದಿ ಯಾವುದೇ ಸೌಲಭ್ಯ ಬೇಕಿದ್ದರೂ ಪ್ರಸ್ತಾವನೆ ಸಲ್ಲಿಸಿ ಎಂದು ಸೂಚಿಸಿದರು. ■ 6ನೇ ಪುಟಕ್ಕೆ

ಅಗ್ರಹಾರ ವೃತ್ತದಲ್ಲಿ ಸರ್ವಜ್ಞ ಜಯಂತಿ ಆಚರಣೆ




ಮೈಸೂರು, ಫೆ. 20– ಮೈಸೂರಿನ ಶ್ರೀ ಚಾಮುಂಡೇಶ್ವರಿ ಅರಳಿಕಟ್ಟೆ ಸೇವಾ ಟ್ರಸ್ಟ್ ವತಿಯಿಂದ ಅಗ್ರಹಾರ ವೃತ್ತದಲ್ಲಿ ಸರ್ವಜ್ಞ ಜಯಂತಿ ಅಂಗವಾಗಿ ಸರ್ವಜ್ಞ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ ಸಿಹಿ ವಿತರಿಸಲಾಯಿತು.

ಬಳಿಕ ಮಾತನಾಡಿದ ಶ್ರೀ ಚಾಮುಂಡೇಶ್ವರಿ ಅರಳಿಕಟ್ಟೆ ಅಧ್ಯಕ್ಷ ಯದುನಂದನ್, ಜಗತ್ತಿನ ಮಹಾಜ್ಞಾನಿಗಳಲ್ಲಿ ಒಬ್ಬರಾದ ಸರ್ವಜ್ಞರು ಯಾವ ಜಾತಿ ಧರ್ಮಕ್ಕೂ ಸೀಮಿತರಾಗದೆ ವಿಶ್ವ ಮಾನವರಾದರು. ತಮ್ಮ ತ್ರಿಪದಿಗಳ ಮೂಲಕ ನೇರವಾಗಿ ಮಾನವ ಸಂಕುಲಕ್ಕೆ ಬೇಕಾದ ಎಲ್ಲಾ ವಿಷಯಗಳನ್ನು ತಿಳಿಸಿದ್ದಾರೆ. ತ್ರಿಪದಿಗಳನ್ನು ಓದುವುದರಿಂದ ನಮ್ಮ ಜ್ಞಾನ ಭಂಡಾರ ಹೆಚ್ಚುತ್ತದೆ ಎಂದು ತಿಳಿಸಿದರು. ಸರ್ವಜ್ಞರ ವಚನಗಳನ್ನು ದಿನಕ್ಕೊಂದರಂತೆ ಮಕ್ಕಳಿಗೆ ಬೋಧಿಸಬೇಕು, ಪತ್ರಿಕೆಗಳಲ್ಲೂ ಸಹ ದಿನಕ್ಕೊಂದು ಸರ್ವಜ್ಞರ ವಚನ ಬಿತ್ತರಗೊಳ್ಳಬೇಕು ಎಂದು ಕರೆ ನೀಡಿದರು.

ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಕೆ ಆರ್ ಬ್ಯಾಂಕ್ ಅಧ್ಯಕ್ಷ ಬಸವ ರಾಜ ಬಸಪ್ಪ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯ ದರ್ಶನ್, ಕಾಂಗ್ರೆಸ್ ಯುವ ಮುಖಂಡ ಜಿ ರಾಘವೇಂದ್ರ, ಕೃಷ್ಣರಾಜ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕೆ.ಎಂ. ನಿಶಾಂತ್, ಯಶ್ವಂತ್, ನಾಗರಾಜ್, ಮಹದೇವಸ್ವಾಮಿ, ಉದ್ಯಮಿ ಕುಮಾರ ಆರಾಧ್ಯ, ಇನ್ನಿತರರು ಹಾಜರಿದ್ದರು.

ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿಗೆ ರಂಗಕರ್ಮಿ, ನಟ ಪ್ರಕಾಶ್ ಬೆಳವಾಡಿ ಆಯ್ಕೆ



ಮೈಸೂರು, ಫೆ 20–ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನವು ನೀಡುವ 2026ನೇ ಸಾಲಿನ ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿಗೆ ಹೆಸರಾಂತ ರಂಗಕರ್ಮಿ, ನಟ, ನಿರ್ದೇಶಕ ಮತ್ತು ಬರಹಗಾರ ಪ್ರಕಾಶ್ ಬೆಳವಾಡಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ಒಂದು ಲಕ್ಷ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ನಾಳೆ (ಫೆ. 21) ಸಂಜೆ 5.30ಕ್ಕೆ ಬೆಂಗಳೂರಿನ ಬನಶಂಕರಿ 2ನೇ ಹಂತದಲ್ಲಿರುವ ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಸಭಾಂಗಣದಲ್ಲಿ ಈ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಬಹುಭಾಷಾ ಪಂಡಿತರಾದ ಪ್ರಧಾನ್ ಗುರುದತ್ತ ಅಧ್ಯಕ್ಷತೆ ವಹಿಸಲಿದ್ದು, ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ನಟ, ನಿರ್ದೇಶಕ ಮತ್ತು ನಾಟಕಕಾರರೂ ಆದ ಎಸ್. ಎನ್.ಸೇತುರಾಂ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಎಸ್.ಬಿ. ಉದಯಶಂಕರ್, ಗೌರವ ಕಾರ್ಯದರ್ಶಿ ಜಿ. ಎಲ್.ಶೇಖರ್ ಮತ್ತು ಟ್ರಸ್ಟಿಗಳು ಹಾಜರಿರುತ್ತಾರೆ.

ಮುದ್ರಣ ಮಾಧ್ಯಮಕ್ಕೆ ಪದವಿ ಜೊತೆಗೆ ಕೌಶಲ್ಯ ಬಹುಮುಖ್ಯ

ಊಟಿ ರಸ್ತೆಯ ಜೆಎಸ್ಎಸ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ



ಮೈಸೂರು ಊಟಿ ರಸ್ತೆಯ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಶುಕ್ರವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಗಣ್ಯರೊಂದಿಗೆ ವಿದ್ಯಾರ್ಥಿಗಳು.

ಮೈಸೂರು, ಫೆ. 20–ಮುದ್ರಣ ಮಾಧ್ಯಮದಲ್ಲಿ ಉದ್ಯೋಗ ಪಡೆಯಲು ಪದವಿಗಳು ಎಷ್ಟು ಮುಖ್ಯವೋ, ಕೌಶಲ್ಯಗಳೂ ಅತ್ಯಂತ ಅತ್ಯಾವಶ್ಯಕ ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹೇಳಿದರು.

ನಗರದ ಊಟಿ ರಸ್ತೆಯ ಜೆಎಸ್ಎಸ್ ಕಲಾ, ವಾಣಿಜ್ಯ, ಮತ್ತು ವಿಜ್ಞಾನ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಶುಕ್ರವಾರ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮುದ್ರಣ ಮಾಧ್ಯಮದಲ್ಲಿ ಉದ್ಯೋಗಾವಕಾಶಗಳು' ಕುರಿತು ಅವರು ಮಾತನಾಡಿದರು.

ಇಂದಿನ ಪತ್ರಿಕೋದ್ಯಮವು ಭೂಮಿಯಿಂದ ಆಕಾಶದೆತ್ತರಕ್ಕೂ ವಿಸ್ತಾರವಾಗಿರುವ ಕ್ಷೇತ್ರವಾಗಿದೆ, ಇದರಲ್ಲಿ ಉದ್ಯೋಗಾವಕಾಶಕ್ಕಾಗಿ ಕೇವಲ ಪದವಿಗಳಷ್ಟೇ ಸಾಲುವುದಿಲ್ಲ, ಉತ್ತಮ ಭಾಷಾ ಕೌಶಲ್ಯ, ಉತ್ತಮ ಬರವಣಿಗೆ, ಭಾಷಾಂತರಿಸುವಿಕೆ, ಡಿಜಿಟಲ್ ಸಾಕ್ಷರತೆ, ಹಾಗೂ ನಿರಂತರ ಕಲಿಯುವಿಕೆ– ಹೀಗೆ ಹಲವು ಕೌಶಲ್ಯಗಳನ್ನು ರೂಢಿಸಿಕೊಳ್ಳುವುದು ಕೂಡ ಬಹುಮುಖ್ಯ ಎಂದರು.

ಮುದ್ರಣ ಮಾಧ್ಯಮವನ್ನು ಅವಸರದ ಸಾಹಿತ್ಯ ಎಂದು ಕರೆದರೂ ಸಹಾ ಇಂದಿಗೂ ಮಾಧ್ಯಮ ಕ್ಷೇತ್ರದಲ್ಲಿ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿ ಕೊಂಡಿರುವ, ಎಲ್ಲರ ನಂಬಿಕೆಗೆ ಪಾತ್ರ ವಾಗಿರುವ ಮಾಧ್ಯಮ ಅಂದರೆ ಅದು ಪತ್ರಿಕಾ ಮಾಧ್ಯಮ ಎಂದು ಅಭಿಪ್ರಾಯಪಟ್ಟರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಆಶಾ, ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ವಿಭಾಗದ ಮುಖ್ಯಸ್ಥೆ ಫಿಲೋಮಿನಾ, ವಿಭಾಗದ ಸಹಾಯಕ ಪ್ರಾಧ್ಯಾಪಕಿ ಶ್ರೀವಲ್ಲಿ ರಟ್ಟೇಹಳ್ಳಿ, ವಿಭಾಗದ ವಿದ್ಯಾರ್ಥಿಗಳು ಇದ್ದರು.


ನಾಳೆ ಆರಾಧನ ಮಹೋತ್ಸವ

ಮೈಸೂರು, ಫೆ.20– ಮೈಸೂರು ತಾಲೂಕು ವರುಣ ಹೋಬಳಿ ರಾಯನಹುಂಡಿ ಉದ್ಭವ ಲಿಂಗ ಶ್ರೀಸೋಮಲಿಂಗೇಶ್ವರಸ್ವಾಮಿ, ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಳಿಯಿಂದ ಫೆ.22ರಂದು 46ನೇ ವರ್ಷದ ಆರಾಧನಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಅಂದು ಮುಂಜಾನೆ ಶುಭ' ಮುಹೂರ್ತದಲ್ಲಿ ಶ್ರೀಸೋಮಲಿಂಗೇಶ್ವರಸ್ವಾಮಿಗೆ ರುದ್ರಾಭಿಷೇಕ, ದೇವತಾ ಪ್ರಾರ್ಥನೆ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಕಡಕೊಳದ ಬೀರೇಶ್ವರಸ್ವಾಮಿ ಮಜ್ಜನ ಉತ್ಸವ ನಡೆಯಲಿದೆ. ಈ ವೇಳೆ ಸಜ್ಜೆಹುಂಡಿ ಗುಡ್ಡಪ್ಪ ತಿರುಮಲೇಗೌಡರ ತಂಡದಿಂದ ವೀರಗಾಸೆ, ರಾಯನ 'ಹುಂಡಿ ಮಲೆ ಮಹದೇಶ್ವರ ಕಂಸಾಳೆ ತಂಡದಿಂದ ಕಂಸಾಳೆ ಏರ್ಪಡಿಸಲಾಗಿದೆ. ಅಂತೆಯೇ ಮಧ್ಯಾಹ್ನ 2 ರಿಂದ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಲಿದೆ.

ಸಂಜೆ 6ರಿಂದ ರಾತ್ರಿ 8.30ರವರೆಗೆ ಬನ್ನಿಮರ ವಾಹನದಲ್ಲಿ ಶ್ರೀಶನೇಶ್ವರ 'ಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ನಡೆಯಲಿದೆ. ರಾತ್ರಿ 9.30ಕ್ಕೆ ದೊಡ್ಡ ಹುಂಡಿ ಗ್ರಾಮದವರಿಂದ 'ಶನಿಪ್ರಭಾವ ಅಥವಾ ರಾಜಾ ವಿಕ್ರಮ' ಪೌರಾಣಿಕ ನಾಟಕ ಏರ್ಪಡಿಸಲಾಗಿದೆ ಎಂದು ಗುಡ್ಡಪ್ಪ ಮಹದೇವಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ:98446–60190 ಸಂಪರ್ಕಿಸಬಹುದು.

ಹೆಚ್. ರಾಜಪ್ಪ ನಿಧನ



ಮೈಸೂರು, ಫೆ 20–ಮೈಸೂರಿನ ಇಲವಾಲ ನಿವಾಸಿ ಹಾಗೂ ನಿವೃತ್ತ ಮುಖ್ಯೋಪಾಧ್ಯಾಯ ಹೆಚ್. ರಾಜಪ್ಪ (74) ಶುಕ್ರವಾರ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆ ಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ಪಿರಿಯಾಪಟ್ಟಣ ತಾಲೂಕು, ಬೆಟ್ಟದಪುರ ಸಮೀಪದ ಹರದೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಕೆ.ದೇವಮ್ಮ



ಮೈಸೂರು,ಫೆ.20– ನಂಜನಗೂಡು ಪಟ್ಟಣದ ದೇವಿರಮ್ಮನಹಳ್ಳಿ ಬಳಿಯ ಗೌತಮ ಬಡಾವಣೆ ನಿವಾಸಿ ಕೆ.ದೇವಮ್ಮ (68) ಅನಾರೋಗ್ಯದಿಂದ ಶುಕ್ರವಾರ ಬೆಳಿಗ್ಗೆ ನಿಧನರಾದರು. ಮೃತರು ಪತಿ ನಿವೃತ್ತ ಕೃಷಿಅಧಿಕಾರಿ ಗೋಪಾಲಸ್ವಾಮಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಂಜನ ಗೂಡಿನ ಶ್ರೀರಾಮಪುರದ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರಿಂದ ಅರೆಬೆತ್ತಲೆ ಪ್ರತಿಭಟನೆ



ನವದೆಹಲಿ, ಫೆ.20– ರಾಜಧಾನಿಯ ಭಾರತ್ ಮಂಟಪದಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಇಂಪ್ಯಾಕ್ಟ್ 2026ರ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಶರ್ಟ್ ಬಿಚ್ಚಿ ಪ್ರತಿಭಟನೆ ನಡೆಸಿದರು. ಈ ಘಟನೆಗೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ತೀವ್ರವಾಗಿ ಖಂಡಿಸಿದ್ದಾರೆ.

ಸುಮಾರು 10 ಯುವ ಕಾಂಗ್ರೆಸ್ ಕಾರ್ಯಕರ್ತರು ಶೃಂಗಸಭೆಯ ಸ್ಥಳದೊಳಗೆ ತಮ್ಮ ಶರ್ಟ್‌ಗಳನ್ನು ತೆಗೆದು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಭಾರತ–ಯುಎಸ್ ಒಪ್ಪಂದದ ಮೂಲಕ ಸರ್ಕಾರವು ರಾಷ್ಟ್ರೀಯ ಹಿತಾಸಕ್ತಿಗಳನ್ನು ರಾಜಿ ಮಾಡಿಕೊಳ್ಳುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಕೆಲವು ವ್ಯಕ್ತಿಗಳನ್ನು ಬಂಧಿಸಿದ್ದಾರೆ. ತಿಲಕ್ ಮಾರ್ಗ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಈ ಗದ್ದಲದ ನಡುವೆ, ಕೇಂದ್ರ ಸಚಿವ ಪಿಯೂಷ್ ಗೋಯಲ್ ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡು, ದೇಶ ಮುಂದುವರೆಯುವುದು ಕೆಲವರಿಗೆ ಇಷ್ಟವಿಲ್ಲ ಎಂದು ಹೇಳಿದರು. ಭಾರತ ಈಗ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಅಂತಹ ಅಂತರರಾಷ್ಟ್ರೀಯ ಕಾರ್ಯಕ್ರಮಗಳನ್ನು ಅಡ್ಡಿಪಡಿಸುವುದು ಪ್ರಗತಿಯನ್ನು ತಡೆಯುವ ಪ್ರಯತ್ನವಾಗಿದೆ ಎಂದು ಅವರು ಒತ್ತಿ ಹೇಳಿದರು.

ಪಿಯೂಷ್ ಗೋಯಲ್ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ರಾಹುಲ್ ಗಾಂಧಿಯನ್ನು ಗುರಿಯಾಗಿಸಿಕೊಂಡರು. ಭಾರತ್ ಮಂಟಪದಲ್ಲಿ ನಡೆದ ಯುವ ಕಾಂಗ್ರೆಸ್ ಪ್ರತಿಭಟನೆಯನ್ನು ಅವರು ಕಾಂಗ್ರೆಸ್‌ನ ದುರಹಂಕಾರ ಮತ್ತು ಹತಾಶೆ ಎಂದು ಬಣ್ಣಿಸಿದರು. ರಾಹುಲ್ ಗಾಂಧಿ, ಭಾರತವನ್ನು ಅವಮಾನಿಸುವುದು ಮತ್ತು ಸರ್ಕಾರದ ಮೇಲೆ ದಾಳಿ ಮಾಡುವುದು ನಿಮ್ಮ ವಿರೋಧದ ಕಲ್ಪನೆ! ಇತ್ತೀಚಿನ ವ್ಯಾಪಾರ ಒಪ್ಪಂದದ ಬಗ್ಗೆ ಸುಳ್ಳುಗಳನ್ನು ಹರಡುವ ಮೂಲಕ ನೀವು ಭಾರತದ ಅಭಿವೃದ್ಧಿಯನ್ನು ತಡೆಯಲು ಬಯಸುತ್ತೀರಿ. ಎಐ ಶೃಂಗಸಭೆಯಲ್ಲಿ ಶರ್ಟ್ ಧರಿಸದೆ ಪ್ರತಿಭಟನೆ ನಡೆಸುತ್ತಿರುವ ನಿಮ್ಮ ಯುವ ಕಾಂಗ್ರೆಸ್ ಭಾರತದ 1.4 ಶತಕೋಟಿ ಜನರಿಗೆ ಮಾಡಿದ ಅವಮಾನ. ಇಂತಹ ತಂತ್ರಗಳು ನಿಮ್ಮ ಮತ್ತು ನಿಮ್ಮ ಪಕ್ಷದ ದೂರದೃಷ್ಟಿಯ ಕೊರತೆಯನ್ನು ಪ್ರತಿಬಿಂಬಿಸುತ್ತವೆ ಎಂದು ಬರೆದುಕೊಂಡಿದ್ದಾರೆ.

ಯುವ ಕಾಂಗ್ರೆಸ್ ಪ್ರತಿಭಟನೆಯ ಬಗ್ಗೆ, ದೆಹಲಿ ಸಚಿವ ಮಂಜಿಂದರ್ ಸಿಂಗ್ ಸಿರ್ಸಾ, ಎಐ ಶೃಂಗಸಭೆಯಲ್ಲಿ ಪ್ರತಿಭಟನೆ ನಡೆಸಲು ಭಾರತೀಯ ರಾಷ್ಟ್ರೀಯ ಯುವ ಕಾಂಗ್ರೆಸ್ ಅನ್ನು ರಾಹುಲ್ ಗಾಂಧಿ ಪ್ರಚೋದಿಸುವುದು ನಾಚಿಕೆಗೇಡಿನ ಸಂಗತಿ ಎಂದು ಹೇಳಿದರು. ಎಐ ಇಂಪ್ಯಾಕ್ಟ್ ಶೃಂಗಸಭೆಗಾಗಿ ನೆರೆದಿದ್ದ ವಿದೇಶಿ ಅತಿಥಿಗಳು ಮತ್ತು ಪ್ರಪಂಚ ದಾದ್ಯಂತದ ಪ್ರತಿನಿಧಿಗಳ ಮುಂದೆ ಇಂತಹ ವರ್ತನೆಯು ಕಾಂಗ್ರೆಸ್ ಪಕ್ಷ ಎಷ್ಟು ಕೆಳಮಟ್ಟಕ್ಕೆ ಇಳಿದಿದೆ ಎಂಬುದನ್ನು ತೋರಿಸುತ್ತದೆ. ಪ್ರತಿಭಟನೆ ಮಾಡುವುದಕ್ಕೂ ಮತ್ತು ಅಂತರರಾಷ್ಟ್ರೀಯ ಅತಿಥಿಗಳ ಮುಂದೆ ದೇಶವನ್ನು ನಕಾರಾತ್ಮಕವಾಗಿ ಚಿತ್ರಿಸುವುದಕ್ಕೂ ವ್ಯತ್ಯಾಸವಿದೆ. ದುರದೃಷ್ಟವಶಾತ್, ಇದು ಪ್ರಸ್ತುತ ಕಾಂಗ್ರೆಸ್ ನಾಯಕತ್ವದ ವಿಧಾನವೆಂದು ತೋರುತ್ತದೆ. ಈ ರೀತಿಯ ಪ್ರತಿಭಟನೆಯನ್ನು ನಾನು ಖಂಡಿಸುತ್ತೇನೆ ಎಂದರು.

ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಒದ್ದು ಓಡಿಸಿದ ಸಾರ್ವಜನಿಕರು!

ನವದೆಹಲಿ: ದೆಹಲಿಯ ಇಂಡಿಯಾ ಎಐ ಇಂಪ್ಯಾಕ್ಟ್ 2026ರ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಶರ್ಟ್ ಬಿಚ್ಚಿ ಪ್ರತಿಭಟನೆ ನಡೆಸಿದ್ದಕ್ಕೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಘಟನೆಯಿಂದ ಹೌಹಾರಿದ ಶೃಂಗಸಭೆಗೆ ಬಂದಿದ್ದ ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಕಾಲಿನಿಂದ ಒದ್ದು, ಅಟ್ಟಾಡಿಸಿ ಭಾರತ್ ಮಂಟಪದ ಆವರಣದಿಂದ ಹೊರಕ್ಕೆ ಓಡಿಸಿದ್ದಾರೆ.

ಈ ವಿಷಯವು AI ಶೃಂಗಸಭೆಯಲ್ಲಿ ಭದ್ರತಾ ಲೋಪಕ್ಕೂ ಸಂಬಂಧಿಸಿದೆ. ಪ್ರತಿಭಟನಾಕಾರರು QR–ಕೋಡೆಡ್ ಪಾಸ್‌ಗಳನ್ನು ಬಳಸಿಕೊಂಡು ಸ್ಥಳಕ್ಕೆ ಪ್ರವೇಶಿಸಿದ್ದಾರೆ ಎಂದು ವರದಿಯಾಗಿದೆ. ಇದು ಭದ್ರತಾ ವ್ಯವಸ್ಥೆಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತದೆ. ಇನ್ನು ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಕೆಲವು ವ್ಯಕ್ತಿಗಳನ್ನು ಬಂಧಿಸಿದ್ದಾರೆ. ತಿಲಕ್ ಮಾರ್ಗ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗಿದೆ.

ದೆಹಲಿಯ ಎಐ ಸಮ್ಮೇಳನ ಶ್ಲಾಘಿಸಿದ ಕಾಂಗ್ರೆಸ್ ನಾಯಕ ಶಶಿ ತರೂರ್!

ನವದೆಹಲಿ, ಫೆ.20– ಎಐ ಇಂಪ್ಯಾಕ್ಟ್ ಶೃಂಗಸಭೆ ವಿಚಾರವಾಗಿ ಕಾಂಗ್ರೆಸ್ ನಾಯಕರು ಕೇಂದ್ರ ಸರ್ಕಾರವನ್ನು ವ್ಯಾಪಕ ಟೀಕಿಸುತ್ತಿರುವಂತೆಯೇ ಅದೇ ಪಕ್ಷದ ಸಂಸದ ಶಶಿತರೂರ್, ಶೃಂಗಸಭೆಯನ್ನು ಬೆಂಬಲಿಸಿ ಮಾತನಾಡಿದ್ದಾರೆ. ಕಾಂಗ್ರೆಸ್ ನಾಯಕ ಶಶಿ ತರೂರ್ ಗುರುವಾರ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಶ್ಲಾಘಿಸಿದ್ದು, ಮೊದಲ ಎರಡು ದಿನಗಳು 'ಅತ್ಯಂತ ಚೆನ್ನಾಗಿ' ನಡೆದವು ಮತ್ತು ಕೆಲವು ದೋಷಗಳು ಯಾವುದೇ ದೊಡ್ಡ ಕಾರ್ಯಕ್ರಮದಲ್ಲಿ ಸಂಭವಿಸಬಹುದು ಎಂದು ಹೇಳಿದ್ದಾರೆ.

ನಾರಾಯಣ ಗುರುಗಳ ಕುರಿತಾದ ತಮ್ಮ ಹೊಸ ಪುಸ್ತಕ ಬಿಡುಗಡೆ ಕಾರ್ಯಕ್ರಮದ ನಂತರ ವರದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ತರೂರ್, ಈ ಕಾರ್ಯಕ್ರಮ ಅತ್ಯಂತ ಚೆನ್ನಾಗಿ ನಡೆದಿದೆ. ಯಾವುದೇ ದೊಡ್ಡ ಕಾರ್ಯಕ್ರಮದಲ್ಲಿ ಕೆಲವು ಲೋಪಗಳು ಸಂಭವಿಸುತ್ತದೆ ಎಂದು ಹೇಳಿದ್ದಾರೆ.

AI ಅಭಿವೃದ್ಧಿಯಲ್ಲಿ ಹೊಸದಾಗಿ ಏಕೀಕೃತವಾದ ವಿಶ್ವವನ್ನು ಕಾಣಬೇಕೆಂಬ ಬಲವಾದ ಸಂದೇಶದೊಂದಿಗೆ ಅಧ್ಯಕ್ಷರು, ಪ್ರಧಾನಮಂತ್ರಿಗಳು ಹಾಗೂ ವಿಶ್ವದ ನಾಯಕರು ಒಟ್ಟುಗೂಡಿರುವುದು ಅತ್ಯಂತ ಗಮನಾರ್ಹವಾಗಿದೆ. ಅವ್ಯವಸ್ಥೆಗಳ ಬಗ್ಗೆ ಪ್ರತಿಕ್ರಿಯಿಸಿದ ಶಶಿ ತರೂರ್, ದೊಡ್ಡ ಕಾರ್ಯಕ್ರಮಗಳಲ್ಲಿ ಇಂತಹ ಸಮಸ್ಯೆಗಳು ಸಂಭವಿಸುವುದು ಸಹಜ ಎಂದರು.

ವಿದ್ಯಾರ್ಥಿಗಳಿಗೆ ಸಾಮಾಜಿಕ ಪರಿಕಲ್ಪನೆ ಪರಿಚಯಿಸಲು ರಂಗಭೂಮಿ ಉತ್ತಮ ವೇದಿಕೆ

ಡಿಡಿಪಿಐ ಸಿ.ಆರ್.ನಾಗರಾಜಯ್ಯ ಅಭಿಮತ



ಸೂತ್ರ ಫೌಂಡೇಶನ್ ರಂಗಶಾಲೆಯ ಮಕ್ಕಳು ಅಭಿನಯದ ವಾರಾಂತ್ಯ ನಾಟಕ 'ಪಂಜರ ಶಾಲೆ' ಪ್ರದರ್ಶನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡುತ್ತಿರುವುದು.

ಮೈಸೂರು,ಫೆ.20(ಎಸ್‌ಪಿಎನ್)–ವಿದ್ಯಾರ್ಥಿಗಳಿಗೆ ಸಾಮಾಜಿಕ ಪರಿಕಲ್ಪನೆಯ ಸಮಾಜವನ್ನು ಪರಿಚಯಿಸಲು ರಂಗಭೂಮಿ ಉತ್ತಮ ವೇದಿಕೆ ಎಂದು ಮೈಸೂರು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ(ಅಭಿವೃದ್ಧಿ) ಸಿ.ಆರ್. ನಾಗರಾಜಯ್ಯ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸೂತ್ರ ಫೌಂಡೇಶನ್ ರಂಗಶಾಲೆಯ ಮಕ್ಕಳು ಅಭಿನಯದ ವಾರಾಂತ್ಯ ನಾಟಕ 'ಪಂಜರ ಶಾಲೆ' ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ತಂದೆ–ತಾಯಿ, ಬಳಿಕ ಶಾಲಾ ವಾತಾ ವರಣ ಪರಿಚಯವಾಗುತ್ತದೆ. ತದನಂತರ ಸಮಾಜದ ಮನಸ್ಥಿತಿಯನ್ನು ಮಕ್ಕಳಿಗೆ ಪರಿಚಯಿಸಬೇಕಾದರೆ, ರಂಗಭೂಮಿ ಉತ್ತಮ ವೇದಿಕೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ನಾಟಕ, ಕಲೆ, ಸಾಹಿತ್ಯ, ಚಿತ್ರಕಲೆ ಸೇರಿದಂತೆ ಇತರೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಮಕ್ಕಳಿಗೆ ಪರಿಪೂರ್ಣ ವ್ಯಕ್ತಿತ್ವ ಪರಿಚಯಿಸಬೇಕಾದರೆ, ರಂಗಭೂಮಿ ಉತ್ತಮ ವೇದಿಕೆ. ಇಲ್ಲಿ ಸಂಗೀತ, ಜಾನಪದ, ಗದ್ಯ–ಪದ್ಯ, ವಾದ್ಯ ಪರಿಕರಗಳ ಪರಿಚಯ ಹಾಗೂ ಚಿತ್ರಕಲೆಗೂ ಅವಕಾಶವಿರುತ್ತದೆ. ಮಕ್ಕಳ ಎಲ್ಲಾ ಕಲಾ ಪ್ರಾಕಾರಗಳು ಪರಿಚಯವಾಗುತ್ತದೆ. ಹಾಗೂ ರಂಗಭೂಮಿ ಶಿಕ್ಷಣಕ್ಕೆ ನಮ್ಮ ಇಲಾಖೆ ಅಳವಡಿಸಿ ಕೊಂಡಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಮಕ್ಕಳಿಗೆ ಸಂಬಂಧಿತ ನಾಟಕಗಳು ಹೆಚ್ಚು ಹೆಚ್ಚು ಪ್ರದರ್ಶನವಾಗಬೇಕು. ಸೂತ್ರ ಫೌಂಡೇಶನ್ ಈ ದಿಸೆಯಲ್ಲಿ ಕೆಲಸ ಮಾಡುತ್ತಿರುವುದು ಸಂತೋಷದಾಯಕ ಎಂದರು.

ವೇದಿಕೆಯಲ್ಲಿ ರಂಗನಿರ್ದೇಶಕ ದಿನೇಶ್ ಚಮ್ಮಾಳಿಗೆ, ಸೂತ್ರ ಫೌಂಡೇಷನ್‌ನ ಕಾರ್ಯದರ್ಶಿ ಜಿ.ಜಗದೀಶ್ ಕುಮಾರ್, ಹಿರಿಯ ರಂಗಕರ್ಮಿ ಕೃಷ್ಣ ಮೂರ್ತಿ ತಲಕಾಡು ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಸೂತ್ರ ಫೌಂಡೇಶನ್ ರಂಗಶಾಲೆಯ ಮಕ್ಕಳು ವಾರಾಂತ್ಯ ನಾಟಕ 'ಪಂಜರಶಾಲೆ' ಪ್ರದರ್ಶಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.2.2026 ಶನಿವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನ ಕೆರೆ :** ಗುರು ವೈಭವೋತ್ಸವ–2026, ಧಾರ್ಮಿಕ ಕಾರ್ಯಕ್ರಮಗಳು, ಬೆಳಗ್ಗೆ 7ಕ್ಕೆ ಶ್ರೀ ಪವಮಾನ ಹೋಮ (ಸರ್ವ ಪಾಪ ಪರಿಹಾರ), ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನ ಕೆರೆ.
- **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ–ಪುರಂದರ ಆರಾಧನಾ ಮಹೋತ್ಸವ, ಸ್ಥಳ: ಶ್ರೀ ಪ್ರಸನ್ನ ಪಾರ್ವತೀ ಕಲ್ಯಾಣ ಮಂಟಪ, ಕಾಳಿದಾಸ ರಸ್ತೆ, ಬೆಳಗ್ಗೆ 8.30ಕ್ಕೆ.
- **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿಸನ್ ಕಾಯಿಲೆ, ಮೈಗ್ರೇನ್, ಕಣ್ಣು–ಮೂಗಿನ ಅಲರ್ಜಿ ಮತ್ತು ಕೊಲೆಸ್ಟ್ರಾಲ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಮೈಸೂರು ಶಾಖೆ :** ಬಜೆಟ್ 2026 : ಭಾರತದ ಭವಿಷ್ಯಕ್ಕಾಗಿ ಒಂದು ಸ್ಥಿರ ನೀಲಿನಕ್ಷೆ ಕುರಿತು ಉಪನ್ಯಾಸ, ಭಾಷಣಕಾರರು : ಜಿ.ಎಸ್. ಪ್ರಶಾಂತ್, ಎಸ್.ಬಿ. ನವನೀತ್, ವಿ. ಅಭಿಷೇಕ್, ಗೌರವ್ ಷಾ, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ವಿದ್ಯಾರಣ್ಯಪುರಂ, ಬೆಳಗ್ಗೆ 9.30 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಸೋರಿಯಾಸಿಸ್(ಕಿಟಿಬಾ ಕುಷ್ಠ), ಶ್ರವಣ ಮತ್ತು ಕಿವಿಯ ಆರೈಕೆ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ದಲಿತ ಸಾಹಿತ್ಯ ಪರಿಷತ್, ಜಿಲ್ಲಾ ಮತ್ತು ರಾಜ್ಯ ಘಟಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಲಿತ ವಿದ್ಯಾರ್ಥಿ ಪರಿಷತ್, ಮೈಸೂರು ವಿವಿ :** ಜನಕವಿ ಡಾ.ಸಿದ್ದಲಿಂಗಯ್ಯ ಅವರ ಜನ್ಮ ದಿನದ ಅಂಗವಾಗಿ ಹೊಲೆಮಾದಿಗರ ಹಾಡು ಕೃತಿಯ 50ರ ಸಂಭ್ರಮ ಮತ್ತು ದಲಿತ ಸಾಹಿತ್ಯ ಪರಿಷತ್‌ನ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮ, ಸಾನ್ನಿಧ್ಯ : ಡಾ. ಜ್ಞಾನ ಸ್ವರೂಪಾನಂದ ಸ್ವಾಮೀಜಿ, ಉದ್ಘಾಟನೆ : ಮಾವಳ್ಳಿ ಶಂಕರ್, ಉಪಸ್ಥಿತರು : ಶಾಸಕರಾದ ದರ್ಶನ್ ಧ್ರುವನಾರಾಯಣ್, ಜಿ.ಟಿ. ದೇವೇಗೌಡ, ರಮಾಸಿದ್ದಲಿಂಗಯ್ಯ, ಡಾ. ಚಂದ್ರಗುಪ್ತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಬಿಜೆಪಿ ಮುಖಂಡ ಕವೀಶ್‌ಗೌಡ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.
- **ರಂಗಾಂತರಂಗ, ಮೈಸೂರು :** ಮಹಿಳಾ ರಂಗ ತರಬೇತಿ ಶಿಬಿರ, ಉದ್ಘಾಟನೆ : ರಂಗ ನಿರ್ದೇಶಕರಾದ ಕೆ.ಆರ್. ಸುಮತಿ, ಅಧ್ಯಕ್ಷತೆ : ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ.ಎಸ್. ಅನಿತಾ, ಪ್ರಾಸ್ತಾವಿಕ ನುಡಿ : ಯುವ ರಂಗ ನಿರ್ದೇಶಕ ಕೆ.ಎಂ. ಕೀರ್ತಿರಾಜ್, ಮುಖ್ಯ ಅತಿಥಿಗಳು : ಲೇಖಕ ನಾ. ದಿವಾಕರ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ನಾಟಕಕಾರ ವೆಂಕಟೇಶ ಈಡಿಗರ ನೀನಾಸಂ, ಡಾ. ಕೆ.ಎಸ್. ಭಾಸ್ಕರ್, ಡಾ. ಟಿ. ನಾಗವೇಣಿ, ಕು. ವೈ. ಹರ್ಷಿದಾ, ಕು. ಎನ್.ಎಂ. ವೈಷ್ಣವಿ, ಸ್ಥಳ: ಮಹಾರಾಣಿ ಮಹಿಳಾ ಕಲಾ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಜಾನಪದ ಕಲಾವಿದರ ಒಕ್ಕೂಟ, ಮೈಸೂರು ವಿಭಾಗ :** ರಾಜ್ಯ ಮಟ್ಟದ ಜಾನಪದ ಕಲಾರತ್ನ ಪ್ರಶಸ್ತಿ ಮತ್ತು ರಾಜ್ಯ ಮಟ್ಟದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ಸಾಹಿತಿ ಟಿ. ಸತೀಶ್ ಜವರೇಗೌಡ, ಡಿ. ನಾಗರಾಜು, ಮಾನುಷಿ ಫೌಂಡೇಷನ್ ಸಂಸ್ಥಾಪಕ ಕಾರ್ಯದರ್ಶಿ ಕು. ಪ್ರಮೀಳಾ ಭಾಗ್ಯರಾಮ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 920, ಕಥೆ ಹೇಳುವವರು: ಗಣೇಶಪ್ರಸಾದ್ ಕೆ, ಸಂಗ್ರಹಣಾ ವ್ಯವಸ್ಥಾಪಕರು, ಎಲ್ & ಟಿ ಟೆಕ್ನಾಲಜಿ ಸರ್ವಿಸಸ್, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5.30 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಡಾ. ಪಿ.ಎಸ್. ಮುರಳೀಧರ್, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ :ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಸಮಾಜಶಾಸ್ತ್ರ, ಭಾಗವಹಿಸುತ್ತಾರೆ ಮೈಸೂರು ಜಿಲ್ಲೆಯ ಬನ್ನೂರು ಹೋಬಳಿಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಮಹದೇವಸ್ವಾಮಿ .ಕೆ, ಪ್ರಸ್ತುತಿ– ದಿಗ್ವಿಜಯ್ .ಬಿ., 9.15 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಸಿ. ಎಂ. ಮಧುರನಾಥ್–ಕೊಳಲು ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಸ್ನೇಹಾ ಎಚ್.ಎಸ್ ಮತ್ತು ಸಹನಾ ಎಚ್. ಎಸ್ ಯುಗಳ ಗಾಯನ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ –ಹಕ್ಕಿಗೂಡು, ಪ್ರಸ್ತುತಿ–ಬಿ. ಜಿ. ಕವಿತಾ, 4.00 ನಾಟಕ– ರೂಪಾಯಿ ನಿನ್ನ ನುಂಗಿತ್ತಾ?, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಾವಯವ ತರಕಾರಿ ಬೇಸಾಯ ಕುರಿತು ಸಂವಾದ ಭಾಗವಹಿಸುತ್ತಾರೆ– ನಾಗಮಂಗಲ ತಾಲೂಕು, ಬಿಂಡಿಗನವಿಲೆ ಹೋಬಳಿ, ಸಾತೇನಹಳ್ಳಿಯ ಕುಮಾರಸ್ವಾಮಿ ಮತ್ತು ನಂಜನಗೂಡು ತಾಲೂಕು ಹುಲ್ಲೇನಹಳ್ಳಿ ಹೋಬಳಿ ಹಗಿನವಾಳು ಗ್ರಾಮದ ಜೆ. ಅಭಿನಂದನ್, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

- **ಪ್ರಣತಿ ವಿದ್ಯಾಸಂಸ್ಥೆ :** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು, ಅಧ್ಯಕ್ಷತೆ : ಕೆಪಿಸಿಸಿ ಹಿಂದುಳಿದ ವರ್ಗದ ರಾಜ್ಯ ಉಪಾಧ್ಯಕ್ಷ ಕೆ.ಎಸ್. ಮಾಲೇಗೌಡ, ಉಪಸ್ಥಿತರು : ಬಿಇಓ ಸಿ.ಎನ್. ರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರ ಎಲ್. ಶಿವಪ್ರಸಾದ್, ಪಿಡಿಓ ಬಿ. ನಾಗೇಂದ್ರ, ಪಿ. ಮಹದೇವಸ್ವಾಮಿ, ಬಿ.ಜೆ. ಅರುಣ್‌ಕುಮಾರ್, ಸ್ಥಳ: ಶಾಲೆ ಆವರಣ, ಸಂಜೆ 5.30ಕ್ಕೆ.
- **ಬಿಎಸ್ಎಸ್ ವಿದ್ಯೋದಯ, ರಾಗಾ ಮ್ಯೂಸಿಕ್ ಅಕಾಡೆಮಿ :** ಭಗಿನಿ ರಾಗ ಸೌರಭ, ವಿದ್ವಾನ್ ರಕ್ಷಿತ್ ಪ್ರಸಾದ್ ಅವರಿಂದ ಮ್ಯಾಂಡೋಲಿನ್ ವಾದನ, ವಿದ್ವಾನ್ ಅನಿರುದ್ಧ ಭಾರದ್ವಾಜ್–ವಯೋಲಿನ್, ವಿದ್ವಾನ್ ಕೆ.ಆರ್. ಗುರುದತ್ತ–ಮೃದಂಗ, ವಿದ್ವಾನ್ ಎಸ್. ಮಂಜುನಾಥ–ಘಟಂ, ಸ್ಥಳ: ಬಿಎಸ್ಎಸ್ ವಿದ್ಯೋದಯ, ರಾಘವೇಂದ್ರ ಮಠದ ಸಮೀಪ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.
- **ಭಾರತೀಯ ವಿದ್ಯಾಭವನ, ಮೈಸೂರು :** ವಿದುಷಿ ಕು. ಸದ್ವಿನಿ ಕೊಪ್ಪ ಮತ್ತು ತಂಡದಿಂದ ದಾಸರಪದಗಳು ಕಾರ್ಯಕ್ರಮ, ಯಶಸ್ವಿ–ವಯೋಲಿನ್, ಎಂ.ಕೆ. ಶ್ರೀನಿಧಿ–ಕೀಬೋರ್ಡ್, ವಿನಯ್ ರಂಗದಾಲ್–ರಿದಂ ಪ್ಯಾಡ್ ಮತ್ತು ಆತ್ಮಾರಾಮ್ ನಾಯಕ್–ತಬಲಾ, ಸ್ಥಳ: ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣ, ಸಂಜೆ 6ಕ್ಕೆ.
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ, ಮಹಾ ಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15 ರಿಂದ ಬಿ.ಕೆ. ಧನಲಕ್ಷ್ಮಿ ಅವರಿಂದ ಮೌನದ ಮಹತ್ವ ಕುರಿತು ಪ್ರವಚನ, ರಾತ್ರಿ 7ಕ್ಕೆ ರಂಗಕರ್ಮಿ ಪ್ರಭುಸ್ವಾಮಿ ಮಳಿಮಠ ಅವರಿಂದ ವ್ಯಕ್ತಿತ್ವದ ಕನ್ನಡಿ–ಮಾತು ಕುರಿತು ಉಪನ್ಯಾಸ, ಮೈಸೂರಿನ ಅಂಕುಶ್ ಕಡಬ ತಂಡದಿಂದ ಕೊಳಲು ವಾದನ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.

ತಿರುಮಕೂಡಲಿನಲ್ಲಿಂದು

- **ಶ್ರೀ ವ್ಯಾಸರಾಜ ಮಠ (ಸೋಸಲೆ) :** ಪುನಃ ಪ್ರತಿಷ್ಠಾಪನೆ ಹಾಗೂ ನೂತನ ಭವನ ಉದ್ಘಾಟನೆ, ದಿವ್ಯ ಸನ್ನಿಧಾನ : ಶ್ರೀ 1008 ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು, ಬೆಳಗ್ಗೆ 5.30 ರಿಂದ ವಿವಿಧ ಪೂಜಾ ಕೈಂಕರ್ಯ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ.

ನಂಜನಗೂಡಿನಲ್ಲಿಂದು

- **ಜೆಎಸ್ಎಸ್ ಸಂಗೀತ ಸಭಾ ಟ್ರಸ್ಟ್, ನಂಜನಗೂಡು ಶಾಖೆ :** ಸಂಜೆ 5ಕ್ಕೆ ಸುನಾದ ವಿನೋದಿನಿ ಸಂಗೀತ ಶಾಲೆಯವರಿಂದ ಪಿಳ್ಳಾರಿ ಗೀತೆಗಳು ಮತ್ತು ಪಂಚರತ್ನ ಕೃತಿಗಳ ಗೋಷ್ಠಿ ಗಾಯನ, ಸಂಜೆ 6ಕ್ಕೆ ಸಂಗೀತ ಕಾರ್ಯಕ್ರಮ, ವಿದುಷಿ ಮೇಧಾ ಮಂಜುನಾಥ್ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಸಾಯಿವಂಶಿ–ಮೃದಂಗ, ಸ್ಥಳ: ಶ್ರೀ ಸುತ್ತೂರು ಮಠದ ಅತಿಥಿ ಗೃಹ, ರಾಷ್ಟ್ರಪತಿ ರಸ್ತೆ.

ಪರಿದೃಶ್ಯ ಅಂತರರಾಷ್ಟ್ರೀಯ ಕಿರುಚಿತ್ರ, ಸಾಕ್ಷ್ಯ ಚಿತ್ರೋತ್ಸವಕ್ಕೆ ಮೈಸೂರಲ್ಲಿ ಚಾಲನೆ

● ಮೂರು ದಿನಗಳ ಕಾಲ ನಡೆಯುವ ಕಾರ್ಯಕ್ರಮ ● ವಿಶ್ವದ 114 ದೇಶಗಳ 3042 ಕಿರು, ಸಾಕ್ಷ್ಯಚಿತ್ರ ಪ್ರದರ್ಶನ ● ಚಿತ್ರೋತ್ಸವಕ್ಕೆ ಚಾಲನೆ ನೀಡಿದ ನಟ-ರಾಜ್ಯಸಭಾ ಸದಸ್ಯ ಜಗ್ಗೇಶ್ ● ಭ್ರಮೆ ಬಿಡಿ... ಶ್ರಮ ಪಡಿ... ಯಶಸ್ಸಿಗೆ ಅಡ್ಡದಾರಿ ಇಲ್ಲ: ನವರಸ ನಾಯಕನ ನೀತಿ ಮಾರ್ಗ

ಮೈಸೂರು, ಫೆ.20(ಎಂಕೆ)- ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ಹಮ್ಮಿಕೊಂಡಿರುವ ಮೂರು ದಿನಗಳ 'ಪರಿದೃಶ್ಯ ಅಂತರರಾಷ್ಟ್ರೀಯ ಕಿರು ಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವ'ದ ನಾಲ್ಕನೇ ಆವೃತ್ತಿಗೆ ಶುಕ್ರವಾರ ಚಾಲನೆ ದೊರೆಯಿತು.

ಪ್ರಪಂಚದ 114 ದೇಶಗಳ 3042 ಕಿರು ಚಿತ್ರ ಮತ್ತು ಸಾಕ್ಷ್ಯ ಚಿತ್ರಗಳ ಪ್ರದರ್ಶನ ಮತ್ತು ಸ್ಪರ್ಧೆಯನ್ನೊಳಗೊಂಡ ಚಿತ್ರೋತ್ಸವಕ್ಕೆ ರಾಜ್ಯಸಭಾ ಸದಸ್ಯ ಹಾಗೂ ನವರಸ ನಾಯಕ ಜಗ್ಗೇಶ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸಿನಿಮಾ ಜಗತ್ತಿನಲ್ಲಿ ಬೆಳೆಯಲು ಸಾಮಾಜಿಕ ಜಾಲತಾಣಗಳು ಉತ್ತಮ ವೇದಿಕೆಯಾಗಿದ್ದು, ಅದನ್ನು ಬಳಸಿಕೊಂಡು ಬೆಳೆಯಿರಿ ಎಂದು ಕರೆ ನೀಡಿದರು.

ಏಕಾಏಕಿ ಹೀರೋ ಆಗಿ ಕೋಟ್ಯಾಂತರ ರೂ.ಗಳಿಸಿ ಮೆರೆಯುತ್ತೇನೆ ಎಂಬ ಭ್ರಮೆಯಲ್ಲಿರಬೇಡಿ. ಇದಕ್ಕಾಗಿ ಸಾಕಷ್ಟು ಶ್ರಮಿಸಬೇಕು ಮತ್ತು ಸಮಯ ಮೀಸಲಿಡಬೇಕು. ಯಶಸ್ಸಿಗೆ ಅಡ್ಡದಾರಿ ಇಲ್ಲ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಬಹಳ ಪ್ರಭಾವ ಹೊಂದಿದ್ದು, ಅವುಗಳನ್ನೇ ವೇದಿಕೆಯಾಗಿ ಬಳಸಿಕೊಂಡು ಮುಂದಿನ ದಿನಗಳಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ. ಈ ಸಾಮಾಜಿಕ ಜಾಲತಾಣ ಇನ್ನೂ ಹತ್ತರಿಂದ ಹದಿನೈದು ವರ್ಷ ತನ್ನ ಪ್ರಭಾವ ಹೊಂದಿರುತ್ತದೆ ಎಂದರು.

ನಾನು ಬಿಸಿರಕ್ತದಲ್ಲಿ ಅಪ್ಪನೊಂದಿಗೆ ಜಗಳ ಮಾಡಿಕೊಂಡು ಮನೆ ಬಿಟ್ಟು ಬಂದವನು. ಮೈಸೂರಿನ ಬಾರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದೆ. ನಂತರ ಕೆಫೆಯೊಂದರಲ್ಲಿಯೂ ಕೆಲಸ ಮಾಡಿದೆ. ಆದರೆ, ನಾನು ಬರೆಯುತ್ತಿದ್ದ ಕನ್ನಡವನ್ನು ನೋಡಿ ನನ್ನ ಗೆಳೆಯ ಕೃಷ್ಣ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸಕ್ಕೆ ಸೇರಿಸಿದ. ಆ ನಂತರ 'ನೀ ತಂದ ಕಾಣಿಕೆ' ಸಿನಿಮಾ ಚಿತ್ರೀಕರಣಕ್ಕೆ ಚೆನ್ನೈಗೆ ಹೋದಾಗ ಅಲ್ಲೊಬ್ಬರು ನೀವು ನೋಡಲು ರಜನೀಕಾಂತ್ ರೀತಿಯೇ ಇದ್ದೀರಿ. ನೀವು ಒಂದು ಪಾತ್ರ ಮಾಡಿ ಎಂದು ಅವಕಾಶ ಕೊಟ್ಟರು. ಅಲ್ಲಿಂದ ಮತ್ತೆ ನಾನು ಹಿಂದಕ್ಕೆ ತಿರುಗಿ ನೋಡಲೇ ಇಲ್ಲ ಎಂದು ತಮ್ಮ ಸಿನಿ ಜರ್ನಿಯನ್ನು ಮೆಲುಕು ಹಾಕಿದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ಹಮ್ಮಿಕೊಂಡಿರುವ ಮೂರು ದಿನಗಳ 'ಪರಿದೃಶ್ಯ ಅಂತರರಾಷ್ಟ್ರೀಯ ಕಿರು ಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವ'ದ ನಾಲ್ಕನೇ ಆವೃತ್ತಿಗೆ ನವರಸ ನಾಯಕ ಜಗ್ಗೇಶ್ ಶುಕ್ರವಾರ ಚಾಲನೆ ನೀಡಿದರು. ಹಿರಿಯ ನಿರ್ದೇಶಕ ಪಿ.ಶೇಷಾದ್ರಿ, ಚಿತ್ರ ಸಾಹಿತಿಗಳಾದ ಜೋಗಿ, ಡಾ.ವಿ. ನಾಗೇಂದ್ರ ಪ್ರಸಾದ್, ನಟಿ ಕಾರುಣ್ಯ ರಾಮ್, ಮೈಸೂರು ಸಿನಿಮಾ ಸೊಸೈಟಿ ಗೌರವಾಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ಅಧ್ಯಕ್ಷ ಎಂ.ಚೇತನ್ ಮತ್ತಿತರರಿದ್ದರು

ಪರಿದೃಶ್ಯ ಪರಿಕಲ್ಪನೆ ಚಂದ...

ಮೈಸೂರು ಸಿನಿಮಾ ಸೊಸೈಟಿಯ ಪರಿದೃಶ್ಯ ಎಂಬ ಪರಿಕಲ್ಪನೆಯೇ ಚಂದವಾಗಿದೆ. ಕಡಿಮೆ ಅವಧಿಯಲ್ಲಿ ನೂರಕ್ಕೂ ಹೆಚ್ಚು ದೇಶಗಳ ಮೂನ್ನೂರಕ್ಕೂ ಹೆಚ್ಚು ಕಿರುಚಿತ್ರಗಳ ಪ್ರದರ್ಶನ ಮತ್ತು ಸ್ಪರ್ಧೆ ಆಯೋಜನೆ ಶ್ಲಾಘನೀಯ. ಅಲ್ಲದೆ ಕಿರುಚಿತ್ರಗಳಲ್ಲಿ ನಮಗೆ ಹೊಸ ಪ್ರಪಂಚ ತೆರೆದುಕೊಳ್ಳುತ್ತ ಹೋಗುತ್ತದೆ.

- ಡಾ.ವಿ.ನಾಗೇಂದ್ರ ಪ್ರಸಾದ್, ಚಿತ್ರ ಸಾಹಿತಿ

ಸಿನಿಮಾ ಪೈರಸಿ ವಿರುದ್ಧ ಹೋರಾಟ...

ಪ್ರಧಾನಿಗಳು ತಮಗೆ ಸಿನಿಮಾದಲ್ಲೂ ಜ್ಞಾನ ಇದೆ ಎಂಬುದನ್ನು ಅರಿತಿದ್ದಾರೆ. ಅದಕ್ಕಾಗಿ ಪ್ರತ್ಯೇಕ ಯೋಜನೆ ರೂಪಿಸಿದ್ದಾರೆ. ನಮ್ಮ ಸಂಘಟನೆಗಳೂ ಕೂಡ ಇದೇ ರೀತಿಯ ಚಿಂತನೆಯಲ್ಲಿ ತೊಡಗಬೇಕು. ಸಿನಿಮಾಗಳನ್ನು ಕೋಟ್ಯಾಂತರ ರೂ. ಖರ್ಚು ಮಾಡಿ ನಿರ್ಮಿಸುತ್ತಾರೆ. ಆದರೆ, ನೋಡುವುದು ಮೊಬೈಲ್‌ನಲ್ಲಿ. ಸಿನಿಮಾದ ಪೈರಸಿ ವ್ಯಾಪಕ ರೀತಿ ನಡೆಯುತ್ತಿದೆ. ಇದರ ವಿರುದ್ಧದ ಹೋರಾಟದಲ್ಲಿ ನಾನು ಒಬ್ಬನೆ ಇದ್ದೀನಿ. ಸಿನಿಮಾದಿಂದ ನಾನು ಅನ್ನ ತಿನ್ನುತ್ತಿದ್ದೇನೆ. ಆದ್ದರಿಂದಲೇ ಪ್ರಧಾನಿ ಅವರ ಜೊತೆ ಕೆಲಸ ಮಾಡುತ್ತಿದ್ದೇನೆ.

- ಜಗ್ಗೇಶ್, ಹಿರಿಯ ನಟ.

ಇಷ್ಟದಂತೆ ಬೆಳೆಯಲು ಬಿಡಿ: ನಮ್ಮ ಮುಂದಿನ ಪೀಳಿಗೆ ಬಹಳ ಅದ್ಭುತವಾಗಿ ಬೆಳೆಯಬೇಕು. ಇಂಜಿನಿಯರ್ ಮಗ ಇಂಜಿನಿಯರೇ ಆಗಬೇಕು ಎಂಬ ಮನೋಭಾವವನ್ನು ಪೋಷಕರು ಬಿಡಬೇಕು. ನಿಮ್ಮ ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಂಡು ಅದರಂತೆ ಬೆಳೆಯಲು ಬಿಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಒಳ್ಳೆಯ ಸಿನಿಮಾಗಳು ಬರುತ್ತಿವೆ: ಹಿರಿಯ ನಿರ್ದೇಶಕ ಪಿ.ಶೇಷಾದ್ರಿ ಮಾತನಾಡಿ, ಪ್ರೇಕ್ಷಕರ ಸಂಖ್ಯೆ ಹೆಚ್ಚಬೇಕೇ ಹೊರತು ಸಿನಿಮಾಗಳ ಸಂಖ್ಯೆಯಲ್ಲ. ಒಳ್ಳೆಯ ಪ್ರೇಕ್ಷಕರಿದ್ದರೆ ಒಳ್ಳೆಯ ಸಿನಿಮಾಗಳು ಬರುವುದರಲ್ಲಿ ಸಂಶಯವಿಲ್ಲ. ಕೇರಳ ಒಳ್ಳೆಯ ಪ್ರೇಕ್ಷಕರನ್ನು ಹೊಂದಿರುವುದರಿಂದಲೇ ಅಲ್ಲಿ ಒಳ್ಳೆಯ ಸಿನಿಮಾಗಳು ಬರುತ್ತಿವೆ. ಕರ್ನಾಟಕದಲ್ಲಿ 7 ಕೋಟಿ ಜನರಿಗೆ ಕೇವಲ 3 ಫಿಲಂ ಸೊಸೈಟಿಗಳು ಮಾತ್ರವಿದ್ದು, ಕರ್ನಾಟಕ ಚಲನಚಿತ್ರ ಅಕಾಡೆಮಿಯು ಚಲನ ಚಿತ್ರೋತ್ಸವ ಬಿಟ್ಟು ಬೇರೇನು ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಿರುಚಿತ್ರಗಳು ಜನರನ್ನು ಮುಟ್ಟಲಿವೆ: ಲೇಖಕ, ಚಿತ್ರ ಸಾಹಿತಿ ಜೋಗಿ ಮಾತನಾಡಿ, ಪ್ರೇಕ್ಷಕರ ಮನಸ್ಸು ಕೆಟ್ಟಿರುವ ಈ ಸಂದರ್ಭದಲ್ಲಿ ಕಿರುಚಿತ್ರಗಳು ಬಹುಬೇಗ ಜನರನ್ನು ಮುಟ್ಟುವ ಸಾಧ್ಯತೆ ಹೆಚ್ಚಿದೆ. ಸಿನಿಮಾ ಜಗತ್ತು ದೊಡ್ಡದು. ಆದರೆ ಕಿರುಚಿತ್ರಗಳು ಒಂದು ಪ್ರದೇಶದ ಜೀವಂತಿಕೆ ಮತ್ತು ಸಮಸ್ಯೆಯನ್ನು ತೋರಿಸುತ್ತದೆ. ಆ ಮೂಲಕ ಬಹುಬೇಗ ಜನರನ್ನು ತಲುಪುತ್ತದೆ. ಕಿರುಚಿತ್ರಗಳು ಒಂದು ಹಳ್ಳಿಯ ಪರಿಸರ, ಅಲ್ಲಿನ ಸಂಸ್ಕೃತಿ, ಆಚಾರ-ವಿಚಾರ ಮತ್ತು ಸಮಸ್ಯೆಯನ್ನು ತೆರೆದಿಡುತ್ತ ಹೋಗುತ್ತದೆ. ಅದೇ ದೊಡ್ಡ ಪರದೆಗೆ ಬಂದಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಸಿನಿಮಾ ಮಾಡುವುದು ದೊಡ್ಡದಲ್ಲ. ಪ್ರೇಕ್ಷಕರನ್ನು ಬರುವಂತೆ ಮಾಡುವುದು ದೊಡ್ಡದು ಎಂದು ಹೇಳಿದರು.

ಸುಳ್ಳು ಹರಡುವುದು ಕಡಿಮೆಯಾಗಬೇಕು: ಚಿತ್ರ ಸಾಹಿತಿ ಡಾ.ವಿ. ನಾಗೇಂದ್ರ ಪ್ರಸಾದ್ ಮಾತನಾಡಿ, ಪ್ಯಾಲೆಸ್ತೈನ್ 36ನೇ ಸಿನಿಮಾ ಪ್ರದರ್ಶನಕ್ಕೆ ಕೇಂದ್ರ ಸರ್ಕಾರ ಅಡ್ಡಿಪಡಿಸುತ್ತಿದೆ ಎಂಬ ಸುದ್ದಿ ಹರಡಿತ್ತು. ಆದರೆ, ಆ ಸಿನಿಮಾ ಪ್ರದರ್ಶನವಾಯಿತು. ಇಂತಹ ಸಾರ್ವತ್ರಿಕ ಸುಳ್ಳು ಹರಡುವುದು ಕಡಿಮೆಯಾಗಬೇಕು ಎಂದರು. ನಟಿ ಕಾರುಣ್ಯ ರಾಮ್, ಮೈಸೂರು ಸಿನಿಮಾ ಸೊಸೈಟಿ ಗೌರವಾಧ್ಯಕ್ಷ ಡಾ.ಜಿ.ಆರ್. ಚಂದ್ರಶೇಖರ್, ಅಧ್ಯಕ್ಷ ಎಂ.ಚೇತನ್, ಉಪಾಧ್ಯಕ್ಷ ಡಾ.ಶೋಬಿತ್ ರಂಗಪ್ಪ ಕಾರ್ಯದರ್ಶಿ ಪದ್ಮಾವತಿ ಎಸ್.ಭಟ್, ಜಯಶೇಖರ್, ಜೋಗಿ ಮಂಜು ಉಪಸ್ಥಿತರಿದ್ದರು.

ಅಭಿನಂದನೆ



'ಸ್ಟಾರ್ ಆಫ್ ಮೈಸೂರ್' 49ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಕೆ.ಜೆ.ವಿಕ್ರಮ್ ಮುತ್ತಣ್ಣ ಅವರನ್ನು ಶುಕ್ರವಾರ ಟೀಂ ಮೈಸೂರಿನ ಗೋಕುಲ್ ಗೋವರ್ಧನ್, ಹಿರಿಯಣ್ಣ ರಾಂ ಪ್ರಸಾದ್, ಬಾಲಕೃಷ್ಣ ರಾಘವೇಂದ್ರ ಆತ್ಮೀಯವಾಗಿ ಅಭಿನಂದಿಸಿದರು.

ಟ್ರಂಪ್ ಜಾರಿಗೆ ತಂದಿದ್ದ ಬಹುತೇಕ ಸುಂಕ ರದ್ದು

ಅಮೇರಿಕಾ, ಫೆ.20- ವಿಪರೀತ ಸುಂಕ ವಿಧಿಸುವ ಮೂಲಕ ಜಗತ್ತನ್ನು ತಲ್ಲಣಗೊಳಿಸಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಇದೀಗ ದೊಡ್ಡ ಹಿನ್ನಡೆಯಾಗಿದೆ. ಅವರು ವಿಧಿಸಿರುವ ಸುಂಕ ವಿಧಾನವನ್ನು ಅಕ್ರಮ ಎಂದು ಘೋಷಿಸಿರುವ ಅಮೆರಿಕದ ಸುಪ್ರೀಂ ಕೋರ್ಟ್ ಬಹುತೇಕ ಸುಂಕ ಗಳನ್ನು ರದ್ದುಗೊಳಿಸಿದೆ.



ಈ ತೀರ್ಪು ಎಲ್ಲ ಸುಂಕಗಳಿಗೆ ಅನ್ವಯಿಸುವುದಿಲ್ಲ. ಕೇವಲ ತುರ್ತು ಕಾನೂನನ್ನು ಬಳಸಿಕೊಂಡು ಜಾರಿಗೆ ತಂದ ಸುಂಕಗಳನ್ನು ಮಾತ್ರ ಅಮಾನ್ಯಗೊಳಿಸುತ್ತದೆ.

ಅಂತಾರಾಷ್ಟ್ರೀಯ ತುರ್ತು ಪರಿಸ್ಥಿತಿಗಾಗಿ ಕಾಯ್ದಿರಿಸಿದ ಕಾನೂನನ್ನು ಬಳಸಿಕೊಂಡು ವ್ಯಾಪಕ ಸುಂಕಗಳನ್ನು ವಿಧಿಸುವಾಗ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾರೆ ಎಂದು ಕೋರ್ಟ್ ತೀರ್ಪು ನೀಡಿದೆ. ಈ ತೀರ್ಪು ಅಮೆರಿಕದ ಆರ್ಥಿಕತೆ ಮತ್ತು ವಿಶ್ವ ವ್ಯಾಪಾರ ನೀತಿಯ ಮೇಲೆ ಭಾರೀ ಪರಿಣಾಮ ಬೀರುವ ಸಾಧ್ಯತೆ ಗಳಿವೆ. ಇದರಿಂದಾಗಿ ತೊಂದರೆಗೊಳಗಾಗಿದ್ದ ಭಾರತ ಸೇರಿದಂತೆ ಕೆಲ ದೇಶಗಳು ನಿರಾಳವಾಗಿವೆ.

ಸುಪ್ರೀಂ ಕೋರ್ಟ್ ಹೇಳಿದ್ದೇನು?: ಸುಪ್ರೀಂಕೋರ್ಟಿನ 9 ಜ್ಯೂರಿಗಳಲ್ಲಿ ಮೂವರು ನ್ಯಾಯಮೂರ್ತಿಗಳು ಟ್ರಂಪ್ ಸುಂಕದ ಪರವಾಗಿ ಬೆಂಬಲ ವ್ಯಕ್ತಪಡಿಸಿದರೆ, 6 ಮಂದಿ ವಿರುದ್ಧವಾಗಿ ತೀರ್ಪು ನೀಡಿದ್ದಾರೆ. ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಅವರ ಜೊತೆ ಮೂವರು ಉದಾರವಾದಿ ನ್ಯಾಯ ಮೂರ್ತಿಗಳು ಮತ್ತು ಇಬ್ಬರು ಸಹ ಸಂಪ್ರದಾಯವಾದಿಗಳಾದ ನ್ಯಾಯ ಮೂರ್ತಿಗಳಾದ ನೀಲ್ ಗೋರ್ಸುಚ್ ಮತ್ತು ಆಮಿ ಕೋನಿ ಅವರು ಸುಂಕವನ್ನು ರದ್ದುಪಡಿಸುವಂತೆ ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ 6-3 ಬಹುಮತದ ಆಧಾರದ ಮೇಲೆ ಟ್ರಂಪ್ ಸುಂಕ ರದ್ದುಗೊಳಿಸುವ ಆದೇಶ ನೀಡಲಾಗಿದೆ ಈ ನಿರ್ಧಾರವು ಟ್ರಂಪ್ ಅವರ ಎಲ್ಲಾ ಸುಂಕಗಳ ಮೇಲೆ ಪರಿಣಾಮ ಬೀರುವುದಿಲ್ಲ, ಉದಾಹರಣೆಗೆ ವಿಭಿನ್ನ ಕಾನೂನುಗಳನ್ನು ಬಳಸಿಕೊಂಡು ಅವರು ಉಕ್ಕು ಮತ್ತು ಅಲ್ಯೂಮಿನಿಯಂ ಮೇಲೆ ವಿಧಿಸಿದ ಸುಂಕಗಳ ಮೇಲೆ ಇದು ಅನ್ವಯಿಸುವುದಿಲ್ಲ.

ಐಇಇಪಿಎ ಬಳಸಿದ್ದ ಡೊನಾಲ್ಡ್ ಟ್ರಂಪ್: ಸುಂಕಗಳನ್ನು ನಿಗದಿಪಡಿಸುವ ಅಧಿಕಾರವನ್ನು ಕಾಂಗ್ರೆಸ್‌ಗೆ(ಸಂಸತ್ತು) ವಹಿಸಲಾಗಿದೆ ಎಂದು ಅಮೆರಿಕದ ಸಂವಿಧಾನ ಹೇಳುತ್ತದೆ. ಆದರೆ ಡೊನಾಲ್ಡ್ ಟ್ರಂಪ್ ಅವರು ಅಂತಾರಾಷ್ಟ್ರೀಯ ತುರ್ತು ಪರಿಸ್ಥಿತಿಗೆ ಕಾಯ್ದಿರಿಸಿದ ಕಾನೂನು (ಐಇಇಪಿಎ) ಅನ್ನು ಬಳಸಿದರು. ಇದು ನಿರ್ದಿಷ್ಟವಾಗಿ ಯಾವುದೇ ಸುಂಕಗಳನ್ನು ಉಲ್ಲೇಖಿಸುವುದಿಲ್ಲ. ಆದರೆ ಅಮೆರಿಕಕ್ಕೆ ಅಸಾಮಾನ್ಯ ಮತ್ತು ಅಸಾಧಾರಣ ಬೆದರಿಕೆ ಯಿಂದಾಗಿ ತುರ್ತು ಪರಿಸ್ಥಿತಿ ಇದೆ ಎಂದು ಅಲ್ಲಿನ ಅಧ್ಯಕ್ಷರು ಭಾವಿಸಿದಾಗ ಆಮದು ಮತ್ತು ರಫ್ತುಗಳನ್ನು ನಿಯಂತ್ರಿಸಲು ಅನುಮತಿ ನೀಡುತ್ತದೆ. ಡೊನಾಲ್ಡ್ ಟ್ರಂಪ್‌ಗಿಂತ ಮೊದಲು ಯಾವುದೇ ಅಧ್ಯಕ್ಷರು ಆಮದುಗಳ ಮೇಲೆ ಸುಂಕ ಏರಿಕೆ ಮಾಡಲು ಆ ಕಾನೂನನ್ನು ಬಳಸಿರಲಿಲ್ಲ. ಹಾಗಾಗಿ ಇದು ಹೊಸ ಪ್ರಕರಣವಾಗಿದೆ. ಸುಪ್ರೀಂ ಕೋರ್ಟ್ ಸಹ ಇದರಲ್ಲಿ ಟ್ರಂಪ್ ವಿರುದ್ಧ ತೀರ್ಪು ನೀಡಿರುವುದು ಮಹತ್ವದ ಸಂಗತಿಯಾಗಿದೆ.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ಮೇಲೆ ಕಲ್ಲು, ಚಪ್ಪಲಿ ತೂರಾಟ

ಬಾಗಲಕೋಟೆ ಉದ್ವಿಗ್ನ; ಪುಂಡರ ವಿರುದ್ಧ ಕ್ರಮಕ್ಕೆ ಸಿಎಂ ಸೂಚನೆ

ಬೆಂಗಳೂರು, ಫೆ. 20(ಕೆಎಂಶಿ)- ಬಾಗಲಕೋಟೆಯಲ್ಲಿ ನಡೆದ ಕಲ್ಲು ತೂರಾಟ ಘಟನೆ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ದುಷ್ಕೃತ್ಯ ಎಸಗಿದ ಪುಂಡರಿಗೆ ಕಾನೂನಿನಡಿ ತಕ್ಕ ಉತ್ತರ ನೀಡುವಂತೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಇಂತಹ ದುಷ್ಕೃತ್ಯಗಳು ಸಮಾಜದ ಶಾಂತಿ ಮತ್ತು ಸೌಹಾರ್ದತೆಗೆ ಮಾರಕವಾಗಿದ್ದು, ಇದನ್ನು ನಾನು ಮತ್ತು ನಮ್ಮ ಸರ್ಕಾರ ಬಲವಾಗಿ ಖಂಡಿಸುತ್ತದೆ ಎಂದಿದ್ದಾರೆ.

ಘಟನೆ ಸಂಬಂಧ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ ಎಂದರು.

ಕಲ್ಲು ತೂರಾಟ ಸಂಬಂಧ ಈಗಾಗಲೇ ಕೆಲವು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗುತ್ತಿದೆ, ಘಟನೆಗೆ ಕಾರಣರಾದ ಪ್ರತಿಯೊಬ್ಬರಿಗೂ ಶಿಕ್ಷೆ ನಿಶ್ಚಿತ.

ನಾಡಿನ ಜನರಿಗೆ ಭಯಮುಕ್ತ ನೆಮ್ಮದಿ ಬದುಕು ನೀಡುವುದು ನಮ್ಮ ಮೊದಲ ಆದ್ಯತೆ. ಜನರ ಶಾಂತಿ, ನೆಮ್ಮದಿಗೆ ಭಂಗ ತರುವ ಯಾವುದೇ ವ್ಯಕ್ತಿ ಮತ್ತು ದುಷ್ಟಶಕ್ತಿಗಳನ್ನು ನಾವು ಸಹಿಸುವುದಿಲ್ಲ.

ಸಾರ್ವಜನಿಕರು ಯಾವುದೇ ಪ್ರಚೋದನೆಗಳಿಗೆ ಕಿವಿಗೊಡದೆ, ಸಂಯಮದಿಂದ ವರ್ತಿಸಬೇಕು. ಪೊಲೀಸ್ ಇಲಾಖೆ ತನ್ನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಲಿದೆ ಎಂದಿದ್ದಾರೆ.

ಈ ಮಧ್ಯೆ, ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಭಾವಚಿತ್ರ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ್ ಗೋಯಲ್ ಪ್ರತಿಕ್ರಿಯೆ ನೀಡಿ, ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಕಿಲಾ ಓಣಿ ಬಳಿ ನಡೆದ ಕಲ್ಲು ತೂರಾಟ ಸಂಬಂಧ ಈಗಾಗಲೇ 8 ಆರೋಪಿಗಳನ್ನು ಬಂಧಿಸಲಾಗಿದೆ ಎಂದರು. ಕಲ್ಲು ತೂರಾಟ ನಡೆಸಿದ ಆರೋಪದ ಮೇಲೆ ನವನಗರ ನಿವಾಸಿ ತನ್ವೀರ್ ಎಂಬುವವನನ್ನು ಬಂಧಿಸಿ, ಸ್ವಪ್ರೇರಿತ ಮೊಕದ್ದಮೆ ದಾಖಲಿಸಿಕೊಂಡು ಎಫ್‌ಐಆರ್ ಮಾಡಲಾಗಿದೆ.

ಸಿಸಿಟಿವಿ ದೃಶ್ಯಗಳ ಪರಿಶೀಲನೆ ನಂತರ 8 ಆರೋಪಿಗಳನ್ನು ಬಂಧಿಸಲಾಗಿದೆ. ತನ್ವೀರ್ ಹೊರತುಪಡಿಸಿ ಬೇರೆ ಯಾರೂ ಕಲ್ಲು ತೂರಾಟ ನಡೆಸಿಲ್ಲ ಎಂಬುದಾಗಿ ಆತನೇ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಗಲಾಟೆ ಪೂರ್ವ ಯೋಜಿತವಲ್ಲ ಮತ್ತು ಡಿಜೆ ವಿಚಾರಕ್ಕೆ ಕಲ್ಲು ತೂರಾಟ ನಡೆದಿಲ್ಲ. ರಾತ್ರಿ ಸುಮಾರು 10 ಗಂಟೆ 6 ನಿಮಿಷಕ್ಕೆ ಕಲ್ಲು ತೂರಾಟ ನಡೆದಿದ್ದು, ಈ ವೇಳೆ ನನಗೆ ಮತ್ತು ಇಬ್ಬರು ಕಾನ್ಸ್‌ಟೇಬಲ್‌ಗಳಿಗೆ ಗಾಯಗಳಾಗಿವೆ.

ಕಲ್ಲು ತೂರಾಟದ ಜೊತೆಗೆ ಚಪ್ಪಲಿಯನ್ನೂ ತೂರಲಾಗಿದೆ. ಮಸೀದಿ ಒಳಗೆ ಕಲ್ಲಿನಿಂದ ಶೂ ರ್‍ಯಾಕ್ ಮಾಡಲಾಗಿತ್ತು. ಅದೇ ಕಲ್ಲುಗಳಿಂದ ತೂರಾಟ ನಡೆಸಲಾಗಿದೆ

ಮಸೀದಿಯೊಳಗೆ ಯಾವುದೇ ಕಬ್ಬಿಣದ ಸಲಾಕೆ ಅಥವಾ ಬೇರೆ ಅಸ್ತ್ರ ಇರಲಿಲ್ಲ. ಗಲಾಟೆ ಹಿನ್ನೆಲೆ ಬಿಎನ್‌ಎಸ್ 163ರಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದರು.

ಘಟನೆ ಹಿನ್ನೆಲೆ ಪ್ರಕಾರ, ಸಂಜೆ 5 ಗಂಟೆಗೆ ಸ್ಥಳೀಯ ಕೊತ್ತಲೇಶ್ವರ ದೇವಸ್ಥಾನದಿಂದ ಶಿವಾಜಿ ಭಾವಚಿತ್ರ ಮೆರವಣಿಗೆ ಆರಂಭವಾಯಿತು. ರಾತ್ರಿ 9-45ಕ್ಕೆ ವಲ್ಲಭ ಭಾಯ್ ವೃತ್ತದ ಮೂಲಕ ಬಸವೇಶ್ವರ ಮಾರ್ಗವಾಗಿ ಪಂಕಾ ಮಸೀದಿ ಬಳಿ ಮೆರವಣಿಗೆ ಆಗಮಿಸಿತು.

ರಾತ್ರಿ 9-50ರ ಸುಮಾರಿಗೆ ಮಸೀದಿಗೆ ಪ್ರಾರ್ಥನೆಗೆ ಬಂದಿದ್ದವರಿಂದ ಮೆರವಣಿಗೆ ಡಿಜೆ ಬಗ್ಗೆ ತಕರಾರು ಎದ್ದಿತು. ಪ್ರಚೋದನಾತ್ಮಕ ಮಾತುಗಳು ಕೇಳಿಬಂದಾಗ ಸ್ಥಳದಲ್ಲಿದ್ದ ಪೊಲೀಸರು ಉಭಯ ಗುಂಪುಗಳನ್ನು ಸಮಾಧಾನಪಡಿಸಲು ಯತ್ನಿಸಿದರು.



ರಾತ್ರಿ 10 ಗಂಟೆ ವೇಳೆಗೆ ಪರಿಸ್ಥಿತಿ ಬಿಗಡಾಯಿಸಿ ಕಲ್ಲು ತೂರಾಟ ನಡೆಯಿತು. ಈ ಘಟನೆಯಲ್ಲಿ ಜಿಲ್ಲಾ ಎಸ್‌ಪಿ ಸಿದ್ದಾರ್ಥ ಗೋಯೆಲ್, ಒಬ್ಬ ಕಾನ್ಸ್‌ಟೇಬಲ್, ಒಬ್ಬ ಹಿಂದೂ ಕಾರ್ಯಕರ್ತನಿಗೆ ಗಾಯಗಳಾಯಿತು.

ಘಟನೆಯಿಂದ ಕೆರಳಿದ ಹಿಂದೂ ಕಾರ್ಯಕರ್ತರು ರಾತ್ರಿ 10-15 ವೇಳೆಗೆ ಬೃಹತ್ ಪ್ರತಿಭಟನೆಗೆ ಮುಂದಾದರು, ತಡೆಯಲು ಬಂದ ಪೊಲೀಸರ ಜೊತೆ ವಾಗ್ವಾದ ನಡೆಸಿದರಲ್ಲದೆ, ಕಿಡಿಗೇಡಿಗಳ ಬಂಧನಕ್ಕೆ ಒತ್ತಾಯಿಸಿದರು.

ರಾತ್ರಿ 11 ಗಂಟೆಗೆ ಕೊತ್ತಲೇಶ್ವರ ದೇವಸ್ಥಾನದ ಎದುರು ಹಿಂದೂ ಮುಖಂಡರು ಪ್ರತಿಭಟನೆ ನಡೆಸಿದರು. 12 ಗಂಟೆಗೆ ಪೊಲೀಸರು ಎಲ್ಲರನ್ನು ಸ್ಥಳದಿಂದ ಕಳುಹಿಸಿದರು.

ಆದರೂ ರಾತ್ರಿ ಸುಮಾರು 12-25ರ ವೇಳೆಗೆ ಸ್ಥಳೀಯ ತರಕಾರಿ ಮಾರುಕಟ್ಟೆಯಲ್ಲಿ ನಾಲ್ಕು ತಳ್ಳುಗಾಡಿಗಳಿಗೆ ಬೆಂಕಿ ಹಚ್ಚಲಾಯಿತು. ತಕ್ಷಣವೇ ಪೊಲೀಸರು ಬೆಂಕಿ ಶಮನ ಮಾಡಿದರು.

ಶಿವಾಜಿ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟ ಪ್ರಕರಣದ ಹಿನ್ನೆಲೆಯಲ್ಲಿ ನಡೆದ ಸ್ಥಳೀಯ ಹಿಂದೂ ಮುಖಂಡರ ಸಭೆಯಲ್ಲಿ ಬಿಜೆಪಿಯ ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ ಮಾತನಾಡಿ, ಘಟನೆಯಲ್ಲಿ ಭಾಗಿಯಾದ ಎಲ್ಲರನ್ನೂ ಬಂಧಿಸಬೇಕು, ಪ್ರಕರಣದ ಸಂಪೂರ್ಣ ತನಿಖೆ ನಡೆಸಿ, ಎಲ್ಲಾ ಆರೋಪಿಗಳನ್ನು ಕಾನೂನು ವ್ಯಾಪ್ತಿಗೆ ತರಬೇಕು ಎಂದು ಒತ್ತಾಯಿಸಿದರು.

ಬೈಲುಕುಪ್ಪೆ ; ಅರಣ್ಯ ಪ್ರದೇಶದ ಹುಲ್ಲುಗಾವಲು ಅಗ್ನಿಗಾಹುತಿ

ಮೈಸೂರು,ಫೆ.20(ಪಿಎಂ)- ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆ ಗ್ರಾಮದ ಗುಳೇದಳ್ಳ ಮೀಸಲು ಅರಣ್ಯ ಪ್ರದೇಶದಲ್ಲಿ ಬೆಂಕಿ ಸಂಭವಿಸಿದ ಪರಿಣಾಮ ಸುಮಾರು ಅರ್ಧ ಎಕರೆಯಷ್ಟು ಹುಲ್ಲುಗಾವಲು ಸುಟ್ಟು ಭಸ್ಮವಾಗಿರುವ ಘಟನೆ ಶುಕ್ರವಾರ ರಾತ್ರಿ ಸಂಭವಿಸಿದೆ.

ಧೂಮಪಾನಿಗಳ ಬೇಜವಾಬ್ದಾರಿಯಿಂದ ಈ ಅಗ್ನಿ ಅವಘಡ ಸಂಭವಿಸಿರಬೇಕೆಂಬ ಶಂಕೆ ವ್ಯಕ್ತವಾಗಿದೆ. ಹುಲ್ಲುಗಾವಲು ಬೆಂಕಿಗಾಹುತಿಯಾಗಿದ್ದರೆ, ಮರ-ಗಿಡಗಳಿಗೆ ಅಂತಹ ಹಾನಿಯಾಗಿಲ್ಲ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಕುಶಾಲನಗರ ಅಗ್ನಿಶಾಮಕ ಠಾಣೆ ಪ್ರಭಾರ ಠಾಣಾಧಿಕಾರಿ ಎನ್.ಎ.ರಂಜಿತ್, ಪ್ರಮುಖ ಅಗ್ನಿಶಾಮಕ ವಸಂತ್‌ಕುಮಾರ್, ಚಾಲಕ ಪ್ರವೀಣ್ ಇತರ ಸಿಬ್ಬಂದಿ ಸುಮಾರು 2 ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.



ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಆರ್.ರಘು ಕೌಟಿಲ್ಯ ಭಾಗಿ



ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಾಜಿ ಉಪಮುಖ್ಯಮಂತ್ರಿಗಳೂ ಆದ ಸಂಸದ ಗೋವಿಂದ ಕಾರಜೋಳ ಅವರು 'ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ಆರ್ಥಿಕ-ಔದ್ಯೋಗಿಕ ಅವಕಾಶಗಳ ವಂಚಿಸಿರುವ ಕಾಂಗ್ರೆಸ್ ಸರ್ಕಾರ ಎಂದು ಮಂಡಿಸಿದ ಖಂಡನಾ ನಿರ್ಣಯವನ್ನು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ ಅನುಮೋದಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಪಿ.ಸುಧಾಕರ್ ರೆಡ್ಡಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಕೋರ್ ಕಮಿಟಿ ಸದಸ್ಯ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಒಳ ಮೀಸಲಾತಿ ; ಸಾಮೂಹಿಕ ನಾಯಕತ್ವದಡಿ ಬಲಗೈ ಸಮುದಾಯ ಸಮಸ್ಯೆ ಬಗೆಹರಿಸಿಕೊಳ್ಳಬೇಕು

ಮೈಸೂರು,ಫೆ.20(ಪಿಎಂ)- ಒಳ ಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ವರದಿಯಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು, ಇದನ್ನು ಸರಿಪಡಿಸದೇ ಸರ್ಕಾರ ವಿಧೇಯಕ ಸಿದ್ಧಪಡಿಸಿದೆ. ಸಾಮೂಹಿಕ ನಾಯಕತ್ವದ ಮೂಲಕ ಈ ಸಮಸ್ಯೆ ಬಗೆಹರಿಸಿಕೊಳ್ಳುವ ಜರೂರಿದೆ ಎಂದು ಕೆಪಿಸಿಸಿ ಸಂಯೋಜಕ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಹೇಳಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶುಕ್ರವಾರ ಸಂಜೆ ನಡೆದ ಕಾಂಗ್ರೆಸ್ ಬಲಗೈ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಒಳ ಮೀಸಲಾತಿ ಸಂಬಂಧ ಈಚೆಗೆ ನಡೆಯುತ್ತಿರುವ ಒಡಕಿನ ಬೆಳವಣಿಗೆಗಳು ಅಪಾಯಕಾರಿಯಾಗಿವೆ. ಪಕ್ಷಭೇದ ಮರೆತು ಸಮುದಾಯದ ಎಲ್ಲಾ ನಾಯಕರು ಒಗ್ಗೂಡಿ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯ ತಡೆಯಲು ಶ್ರಮಿಸಬೇಕಿದೆ ಎಂದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಸಭೆಯಲ್ಲಿ ಎನ್.ಭಾಸ್ಕರ್ ಮಾತನಾಡಿದರು

ಒಳ ಮೀಸಲಾತಿ ಹೋರಾಟದ ಆರಂಭದಲ್ಲಿಯೇ ವಿದ್ಯಾರ್ಥಿ ಸಂಘಟನೆಗಳು, ಬಲಗೈ ಸಂಘಟನೆಗಳು ಸರಿಯಾಗಿ ಬೆಂಬಲ ವ್ಯಕ್ತಪಡಿಸಿದ ಕಾರಣ ಮತ್ತು ಜಾತಿ ಸಮೀಕ್ಷೆಯಲ್ಲಿ ಒಟ್ಟಿಗೆ ಪಾಲ್ಗೊಳ್ಳದ ಕಾರಣ ಹಿನ್ನಡೆಯಾಗಿದೆ. ಸರ್ಕಾರವು ರೋಸ್ಟರ್ ಬಿಂದು ಮಾಡುವ ಸಂದರ್ಭದಲ್ಲಿ ಬಿ ಮತ್ತು ಸಿ ಪ್ರವರ್ಗಕ್ಕೆ ಅನ್ಯಾಯವಾಗುವಂತೆ ಮಾಡಿದೆ. ಇದು ದೊಡ್ಡ ಪ್ರಮಾದವಾಗಿದೆ ಎಂದರು.

ಈಗ ವಿದ್ಯಾರ್ಥಿ ಯುವಜನರನ್ನು ಎತ್ತಿಕಟ್ಟಿ ಸಮುದಾಯದ ಸ್ವಾಮೀಜಿಗಳು, ಸಚಿವರು, ಶಾಸಕರಿಗೆ ಅವಮಾನ ಮಾಡುತ್ತಿರುವುದು ಸರಿಯಲ್ಲ. ಇದರ ಹಿಂದೆ ಯಾರಿದ್ದಾರೆ ಎಂಬುದು ತಿಳಿದಿದೆ. ಈ ಬೆಳವಣಿಗೆಯೂ ಸಮುದಾಯಕ್ಕೆ ಕೆಟ್ಟ ಹೆಸರು ತರುವುದರ ಜತೆಗೆ ಒಡಕಿಗೂ ಕಾರಣವಾಗಲಿದೆಯೆಂಬ ಎಚ್ಚರಿಕೆ ಇರಬೇಕಾಗಿದೆ ಎಂದು ಹೇಳಿದರು.

ಒಳ ಮೀಸಲು ಹಂಚಿಕೆ ಸಂಬಂಧ ಮುಂದಿನ ಹೋರಾಟದ ಕುರಿತಾಗಿ ಚರ್ಚಿಸಲು ಫೆ.22ರಂದು ಸಂಜೆ 5 ಗಂಟೆಗೆ ಜಲದರ್ಶಿನಿ ಅತಿಥಿಗೃಹದಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಮತ್ತು ಕರ್ನಾಟಕ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗಿದೆ. ಸಮುದಾಯದ ಮುಖಂಡರು, ಜನಪ್ರತಿನಿಧಿಗಳು ಪಾಲ್ಗೊಳ್ಳಬೇಕು.

-ಎನ್.ಭಾಸ್ಕರ್, ರಾಜ್ಯಾಧ್ಯಕ್ಷರು, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ.

ಒಳ ಮೀಸಲಾತಿ ವಿಧೇಯಕ ಮಂಡನೆ ಸಂಬಂಧ ಅಧಿಕಾರಿಗಳು, ಶಾಸಕರು, ಸಚಿವರಿಗೆ ಸುಳ್ಳು ಮಾಹಿತಿ ನೀಡಿ ದಿಕ್ಕು ತಪ್ಪಿಸಿ ಈ ಗೊಂದಲ ಸೃಷ್ಟಿಸಿದ್ದಾರೆ. ಇದೊಂದು ನೀತಿ ನಿರೂಪಣೆ ವಿಷಯವಾಗಿರುವುದರಿಂದ ಬಲಗೈ ಸಮುದಾಯದ ಸಚಿವರು, ಶಾಸಕರನ್ನು ಭೇಟಿ ಮಾಡಿ ಚರ್ಚಿಸಬೇಕು. ಸಾಮೂಹಿಕ ನಾಯಕತ್ವದಲ್ಲಿ ಹೋರಾಟ ರೂಪಿಸುವ ಅಗತ್ಯತೆ ಇದೆ ಎಂದು ಹೇಳಿದರು.

ಮುಖಂಡರಾದ ಸಿದ್ದರಾಜು, ಈಶ್ವರ್ ಚಕ್ಕಡಿ, ಭರತ್ ರಾಮಸ್ವಾಮಿ, ಶ್ಯಾಮ ಯೋಗೀಶ್, ರಾಹುಲ್ ಕುಂಬರಹಳ್ಳಿ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜ್, ಕೆಪಿಸಿಸಿ ಕಾನೂನು ಘಟಕದ ಕಾರ್ಯದರ್ಶಿ ತಿಮ್ಮಯ್ಯ, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ, ದಲಿತ ವೇದಿಕೆ ಅಧ್ಯಕ್ಷ ನಾಗನಹಳ್ಳಿ ರೇವಣ್ಣ, ನಾಗನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಶಂಕರ್, ವಕೀಲರಾದ ಮನೋನ್ಮಣಿ, ದಲಿತ ಮುಖಂಡರಾದ ಚಿಕ್ಕ ಅಂದಾನಿ, ಪ್ರೊ.ಟಿ.ಎಂ.ಮಹೇಶ್, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಂಶೋಧನ ಘಟಕದ ಅಧ್ಯಕ್ಷ ನಾಗರಾಜ್, ಧನಗಳ್ಳಿ ನಟರಾಜ್, ಸಂಗೀತ ನಿರ್ದೇಶಕ ನಾಗೇಶ್ ಕಂದೇಗಾಲ, ಜೋಗಿ ಮಹೇಶ್ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಅಧಿಕಾರಿ (ಖುಷಿಯಿಂದ) : ಸಂಜೆಯಾದ್ರು ಮನೆಗೆ ಹೋಗ್ತಾ ಇಲ್ಲ. ಕೆಲಸ ಮಾಡ್ತಾನೆ ಇದ್ದೀರಾ?

ಗುಮಾಸ್ತ : ಸಾರ್, ಕೀ ಬೋರ್ಡ್‌ನಲ್ಲಿ ಅಕ್ಷರಗಳು ಆಲ್ಫಾಬೆಟ್ ಪ್ರಕಾರ ಇರಲಿಲ್ಲ. ಅದನ್ನೆಲ್ಲಾ ಕಿತ್ತು ಸರಿಯಾಗಿ ಜೋಡಿಸ್ತಾ ಇದ್ದೀನಿ.

ಮೈಸೂರು ಮಿತ್ರ

ಶನಿವಾರ, ಫೆಬ್ರವರಿ 21, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಕೇವಲ ನಿನ್ನಲ್ಲಿರುವ ತಪ್ಪುಗಳನ್ನೇ ಹುಡುಕುವವರಿಗೆ ನಿನ್ನಲ್ಲಿರುವ ಒಳ್ಳೆಯತನ ಎಂದಿಗೂ ಅರ್ಥವಾಗುವುದಿಲ್ಲ.

ವೇದ ಸುಳ್ಳಾದರೂ { ಅತ್ತೆಗೊಂದು ಕಾಲ;
ಗಾದೆ ಸುಳ್ಳಾಗದು { ಸೊಸೆಗೊಂದು ಕಾಲ

ನಿಮ್ಮ ಪತ್ರಗಳು

ಉಚಿತ ಕೊಡುಗೆಗಳ ಬಗ್ಗೆ ಪರಾಮರ್ಶೆ ಅಗತ್ಯ

ಮಾನ್ಯರೆ,

ಉಚಿತ ಕೊಡುಗೆ ಪ್ರಕಟಿಸುವ ರಾಜಕೀಯ ಪಕ್ಷಗಳ ನಡೆಗೆ ಫೆ. 19ರ ಗುರುವಾರ ಸುಪ್ರೀಂಕೋರ್ಟ್ ಅಸಮಾಧಾನ ವ್ಯಕ್ತಪಡಿಸಿರುವುದು ಸ್ವಾಗತಾರ್ಹವಾಗಿದೆ. ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಮತದಾರರನ್ನು ತಮ್ಮತ್ತ ಸೆಳೆಯಲು ಘೋಷಣೆ ಮಾಡುವ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳು ಈಗ ದೇಶಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರಗಳಂತೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಹೇಗಾದರೂ ಸರಿ ಅಧಿಕಾರಕ್ಕೇರಲೇಬೇಕು ಎಂಬ ಉಮೇದಿನೊಂದಿಗೆ ರಾಜಕೀಯ ಪಕ್ಷಗಳು ಚುನಾವಣೆ ಪೂರ್ವದಲ್ಲಿ ಮಾಡುವ ಈ ಉಚಿತ ಘೋಷಣೆಗಳು ಜಾರಿಗೆ ಬಂದರೆ ಅವುಗಳ ಹೊರೆ ಬೀಳುವುದು ತೆರಿಗೆದಾರರ ಮೇಲೆಯೇ. ಒಂದು ಪಕ್ಷ ಅಧಿಕಾರದ ಗದ್ದುಗೆ ಏರಲು ಸಾರ್ವಜನಿಕರ ಹಣವನ್ನು ಈ ರೀತಿ ಬೇಕಾಬಿಟ್ಟಿ ಪೋಲು ಮಾಡುವುದು ಎಷ್ಟು ಸರಿ ಎಂಬ ಚರ್ಚೆ ಹಾಗೂ ಆತ್ಮಾವಲೋಕನ ನಡೆಯುವುದು ಅವಶ್ಯಕ.

ಉಚಿತ ಘೋಷಣೆಗಳ ಜಾರಿಯಿಂದಾಗಿ ರಾಜ್ಯ ಹಾಗೂ ದೇಶಗಳ ಆರ್ಥಿಕ ಪರಿಸ್ಥಿತಿ ಹಳ್ಳ ಹಿಡಿಯುತ್ತದೆ. ರಾಜಕೀಯ ಪಕ್ಷಗಳು ಆದಾಯ ಹೆಚ್ಚಳ, ಆರ್ಥಿಕ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಸೃಷ್ಟಿಯ ಮೂಲಕ ದುಡಿಯುವ ವರ್ಗವನ್ನು ಸೃಷ್ಟಿಸಬೇಕೇ ಹೊರತು ಉಚಿತ ಘೋಷಣೆಗಳನ್ನು ಮಾಡಿ ರಾಜ್ಯಗಳ ಆರ್ಥಿಕತೆಯನ್ನು ಹದಗೆಡಿಸುವುದಲ್ಲ. ಉಚಿತ ವಿದ್ಯುತ್, ಸಾಲಮನ್ನಾ, ಉಚಿತ ಬಸ್ ಪ್ರಯಾಣ, ನೀರು, ಕಂಪ್ಯೂಟರ್, ಟಿವಿ... ಹೀಗೆ ಸಾಲು ಸಾಲು ಉಚಿತವಾಗಿ ಕೊಡುತ್ತೇವೆ ಎಂಬ ಭರವಸೆಗಳನ್ನು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನವನ್ನು ಮೊದಲು ಕೈಬಿಡಬೇಕು. ಪ್ರತಿ ಚುನಾವಣೆಯಲ್ಲಿ ಜನರಿಗೆ ನೀಡಲಾಗುವ ಈ ರೀತಿಯ ಉಚಿತ ಘೋಷಣೆ ಹಾಗೂ ಕೊಡುಗೆಗಳಿಗೆ ಇತಿಶ್ರೀ ಹಾಕಲೇಬೇಕಾಗಿದೆ. ರಾಜಕೀಯ ಪಕ್ಷಗಳು ಚುನಾವಣಾ ಸಮಯದಲ್ಲಿ ನೀಡುವ ಈ ಉಚಿತ ಕೊಡುಗೆಗಳಿಂದಾಗುವ ಗಂಭೀರ ಆರ್ಥಿಕತೆಯ ಹೊರೆಯ ಪರಿಣಾಮವನ್ನು ಅರಿತು ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಹಾಗೂ ನ್ಯಾಯಾಲಯಗಳು ಈ ನಿಟ್ಟಿನಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಚರ್ಚೆ ದೇಶದ ಜನರಲ್ಲಿ ಪ್ರಾರಂಭವಾಗಿ ಅಂತಿಮವಾಗಿ ಒಮ್ಮತದ ನಿರ್ಧಾರ ಕೈಗೊಳ್ಳುವುದು ತುರ್ತಾಗಿ ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಎಂಡಿಎ ಆಯುಕ್ತರು ಡೋಫ್ಲಿನ್ ಕಾಂಪ್ಲೆಕ್ಸ್ ವಶಕ್ಕೆ ಪಡೆದು ದಕ್ಷತೆ ತೋರಲಿ

ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಶಿವರಾಂ ಪೇಟೆ ಹಾಗೂ ದೇವರಾಜ ಅರಸು ರಸ್ತೆಗೆ ಹೊಂದಿಕೊಂಡಿರುವ ಮೈಸೂರು ನಗರದಲ್ಲೇ ಅತ್ಯಂತ ಹಳೆಯ ವಾಣಿಜ್ಯ ಸಂಕೀರ್ಣವಾದ ಸುಮಾರು ನೂರು ವರ್ಷಗಳ ಇತಿಹಾಸವಿರುವ 'ಡೋಫ್ಲಿನ್ ಕಾಂಪ್ಲೆಕ್ಸ್' 50 ಹೆಚ್ಚು ಮಳಿಗೆಗಳನ್ನು ಮಾರ್ಚ್ ತಿಂಗಳ ಒಳಗೆ ತೆರವುಗೊಳಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಲ್ಲಿ ವ್ಯಾಪಾರ ಮಾಡುತ್ತಿರು ವವರಿಗೆ ನೋಟಿಸ್ ನೀಡಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಇಷ್ಟು ವರ್ಷಗಳಿಂದ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಂಡರೂ ಕಾಣದಂತೆ ಸುಮ್ಮನಿದ್ದು, ಈಗ ಏಕಾಏಕಿ ಅಲ್ಲಿನ ಮಳಿಗೆದಾರರಿಗೆ ನೋಟಿಸ್ ನೀಡಿರುವ ಹಿಂದಿನ ಉದ್ದೇಶವಾದರೂ ಏನು? ಹಾಗಾದರೆ ಇಷ್ಟು ವರ್ಷಗಳ ಕಾಲ ಈ ಮಳಿಗೆ ವ್ಯಾಪಾರಸ್ಥರ ಜೊತೆ ಪ್ರಾಧಿಕಾರದ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ವಾಣಿಜ್ಯ ಸಂಕೀರ್ಣದ ಈಗೀನ ಬೆಲೆ ಸುಮಾರು 250 ಕೋಟಿಗೂ ಹೆಚ್ಚಾಗಬಹುದು. ದಕ್ಷ ಅಧಿಕಾರಿ ಎಂದೇ ಹೇಳಲಾಗುತ್ತಿರುವ ಹಾಲಿ ಪ್ರಾಧಿಕಾರದ ಆಯುಕ್ತರಾದ ಕೆ.ಆರ್.ರಕ್ಷಿತ್ ಅವರು ಯಾವುದೇ ಪ್ರಭಾವಕ್ಕೂ ಒಳಗಾಗದೇ ಈ ಬಹು ಕೋಟಿಯ ವಾಣಿಜ್ಯ ಸಂಕೀರ್ಣವನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ವಶಕ್ಕೆ ಪಡೆಯಲಿ. ಆಯುಕ್ತರು ಈಗ ತಮ್ಮ ದಕ್ಷತೆಯನ್ನು ತೋರಬೇಕು. ಇಲ್ಲದೇ ಹೋದರೆ ಎಲ್ಲಾ ಅಧಿಕಾರಿಗಳಂತೆ ಇವರು ಒಬ್ಬರು ಎನ್ನುವಂತಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ನಮ್ಮನ್ನೇ ಒದೆಯುವ ಕತ್ತೆಯಾಗದಿರಲಿ!

ಮಾನ್ಯರೆ,

ನವ ದೆಹಲಿಯಲ್ಲಿ ವಿಶ್ವದ ಹಲವಾರು ದೇಶಗಳು ಪಾಲ್ಗೊಂಡಿರುವ 'ಕೃತಕ ಬುದ್ಧಿಮತ್ತೆ' ಶೃಂಗ ಸಾಕಷ್ಟು ಗಮನ ಸೆಳೆಯುತ್ತಿದೆ. ಇಂದು ಯಾವುದೇ ಪತ್ರಿಕೆ ತೆರೆದರೂ, ಛಾನಲ್ ಓಪನ್ ಮಾಡಿದರೂ, ಎಐ (ಕೃತಕ ಬುದ್ಧಿಮತ್ತೆ) ತನ್ನ ಇರುವಿಕೆಯನ್ನು ಪ್ರಸ್ತುತ ಪಡಿಸುತ್ತಿದೆ. ಭಾರತ ಸೇರಿದಂತೆ ಹಲವಾರು ದೇಶಗಳು ಈ ಕ್ಷೇತ್ರದಲ್ಲಿ ಲಕ್ಷಾಂತರ ಕೋಟಿ ಹೂಡಿಕೆ ಮಾಡಲು ಸಜ್ಜಾಗುತ್ತಿವೆ. ಎಐ ಬಗ್ಗೆ ಸಾಕಷ್ಟು ಅಪಸ್ವರ ಕೂಡ ಕೇಳಿ ಬರುತ್ತಿದೆ. ಏನೇ ಆಗಲಿ, ಕೃತಕ ಬುದ್ಧಿಮತ್ತೆ ನಮ್ಮನ್ನು ಒದೆಯುವ ಕತ್ತೆಯಾಗದಿರಲಿ ಎಂದು ಆಶಿಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು.

ನಗರ ಕೇಂದ್ರ ಗ್ರಂಥಾಲಯದ ಸ್ಪಷ್ಟೀಕರಣ

ಮಾನ್ಯರೆ,

ಮೈಸೂರು ಮಿತ್ರ ದಿನಪತ್ರಿಕೆಯ ನಿಮ್ಮ ಪತ್ರಗಳು ಕಾಲಂನಲ್ಲಿ ಚಾಮುಂಡಿಪುರಂ ಶಾಖಾ ಗ್ರಂಥಾಲಯದಲ್ಲಿ 'ಚಾಮುಂಡಿಪುರಂ ಲೈಬ್ರರಿಯಲ್ಲಿ ಅಪಾಯಕಾರಿ ಕಬ್ಬಿಣದ ಸಲಾಕೆ!' ಶೀರ್ಷಿಕೆಯಡಿ ಪ್ರಕಟವಾಗಿರುವ ಓದುಗರ ಪತ್ರಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ.

ಚಾಮುಂಡಿಪುರಂನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಮೆಂಟ್ ಬ್ಲಾಕ್‌ನಲ್ಲಿ ನಿರ್ಮಿಸಿದ ಶಾಖಾ ಗ್ರಂಥಾಲಯವನ್ನು 21.8.2016 ರಂದು ಪ್ರಾರಂಭಿಸಿದ್ದು, ಸದರಿ ಬಡಾವಣೆಯ ಸಾರ್ವಜನಿಕರು, ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರು ಗ್ರಂಥಾಲಯದ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಶಾಖಾ ಗ್ರಂಥಾಲಯದ ಒಂದನೇ ಮಹಡಿಗೆ ಹೋಗುವ ಸಂದರ್ಭದಲ್ಲಿ ಅಳವಡಿಸಲಾಗಿರುವ ಕಬ್ಬಿಣದ ಸಲಾಕೆಯಿಂದ ಉಂಟಾಗುವ ಹಾನಿಯನ್ನು ತಡೆಯಲು ಈಗಾಗಲೇ ಕ್ರಮ ವಹಿಸಲಾಗುತ್ತಿದ್ದು, ಇನ್ನು 2–3 ದಿನಗಳಲ್ಲಿ ಸಮಸ್ಯೆಯನ್ನು ಬಗೆಹರಿಸಲಾಗುವುದು.

– ಬಿ. ಮಂಜುನಾಥ್, ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಮೈಸೂರು.

ಮರೆಯಲಾಗದ ಮೈಸೂರಿನ ಅಸಾಮಾನ್ಯರು





ಜನಪ್ರಿಯ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಪ್ರತಿ ವಾರ ಒಂದರಂತೆ ಮೈಸೂರಿನ ಮಹಾಮಹಿಮರ ಕುರಿತಾಗಿ ಹಿರಿಯ ಪತ್ರಕರ್ತರು, ಮಹಾ ಚಿಂತಕರೂ ಆದ ಶ್ರೀ ಗೌರಿ ಸತ್ಯ ಅವರು ಸತತವಾಗಿ 50 ಲೇಖನಗಳನ್ನು ಬರೆದಿದ್ದರು. ಅವೆಲ್ಲವುಗಳನ್ನೊಳಗೊಂಡ ಶ್ರೀಯುತ ಗೌರಿ ಸತ್ಯ ಅವರ 'ಮೈಸೂರಿನ ಅಸಾಮಾನ್ಯರು' ಕೃತಿಯು ಇತ್ತೀಚೆಗೆ ಬಿಡುಗಡೆಯಾಯಿತು. ಇದೊಂದು ಅಮೋಘ ಕೃತಿ. ಈ ಕೃತಿಯ ಪರಿಚಯಾತ್ಮಕ ಲೇಖನವಿದು.

– ಡಾ. ಸಿ.ಜಿ. ಬೆಟಸೂರಮಠ

ಸ್ವಾತಂತ್ರ್ಯಪೂರ್ವದಲ್ಲಿ ದೇಶದಲ್ಲಿ ಇದ್ದಂತಹ 565 ಸಂಸ್ಥಾನಗಳಲ್ಲಿ ಬಹಳ ವಿಶೇಷವಾದ ಹಾಗೂ ಅತ್ಯಂತ ಪ್ರಗತಿಪರ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತವಾದ ಸಂಸ್ಥಾನ **ಮೈಸೂರು ಸಂಸ್ಥಾನ**. ಆಧುನಿಕ ಮೈಸೂರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್, ಶ್ರೀ ಹತ್ತನೆಯ ಚಾಮರಾಜ ಒಡೆಯರ್, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಅವಧಿಯಲ್ಲಿ ಆಧುನಿಕ ಮೈಸೂರು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಕಲೆ, ಸಂಸ್ಕೃತಿ, ಆಡಳಿತ, ಶಿಕ್ಷಣ, ಕೈಗಾರಿಕೆ, ವಿದ್ಯುತ್ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ದೇಶದ ಯಾವ ಸಂಸ್ಥಾನವು ಮಾಡಿರದ ಸಾಧನೆಯನ್ನು ಮೈಸೂರು ಸಂಸ್ಥಾನವು ಶತಮಾನದ ಹಿಂದೆಯೇ ಮಾಡಿ ತೋರಿಸಿತ್ತು. ಅದರಲ್ಲೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತ ಅವಧಿಯಲ್ಲಿ ಮಾದರಿ ಸಂಸ್ಥಾನವೆಂದು ಕರೆಯಲಾಗುತ್ತಿತ್ತು.

ಮೈಸೂರು ಸಂಸ್ಥಾನದ ಇಷ್ಟೆಲ್ಲಾ ಏಳಿಗೆಗೆ ಮೈಸೂರು ಅರಸರಲ್ಲದೇ, ದಿವಾನರುಗಳ ದೂರದರ್ಶಿತ್ವದ ನೇತೃತ್ವ ಪ್ರಮುಖವಾಗಿತ್ತು. ಮೈಸೂರು ಮಹಾರಾಜರ ಅವಧಿಯಲ್ಲಿ ದಿವಾನರುಗಳ ಸೇವೆಯನ್ನಷ್ಟೇ ಪ್ರಮುಖವಾಗಿ ನೆನೆಯುತ್ತೇವೆ. ಆದರೆ ದಿವಾನರುಗಳಷ್ಟೇ ಅವರ ಜೊತೆ ಅಥವಾ ಅವರ ಕೈಕೆಳಗೆ ಹಲವಾರು ಅಧಿಕಾರಿಗಳು ಕೂಡ ಎಲೆಮರೆಕಾಯಿಗಳಂತೆ ಗಮನಾರ್ಹವಾದ ಸೇವೆಯನ್ನು ಸಲ್ಲಿಸಿದ್ದಾರೆ ಹಾಗೂ ಮೈಸೂರು ಸಂಸ್ಥಾನದ ಬೆಳವಣಿಗೆಗೆ ಅಪಾರವಾಗಿ ಕೊಡುಗೆ ನೀಡಿದ್ದಾರೆ. ಅಂದಿನ ಮೈಸೂರು ಸಂಸ್ಥಾನದಲ್ಲಿದ್ದು, ಪ್ರವರ್ಧಮಾನಕ್ಕೆ ಬಾರದ ಅನೇಕ ಮಹಾಮಹಿಮರುಗಳು ಹಾಗೂ ಅಧಿಕಾರಿಗಳ ಸಮರ್ಪಣೆ, ನಿಸ್ಪೃಹ, ನಿಸ್ವಾರ್ಥ ಸೇವೆಯಿಂದಾಗಿ ಮೈಸೂರು ಸಂಸ್ಥಾನವು **ರಾಮರಾಜ್ಯ** ಎಂದು ಹೆಸರು ಗಳಿಸಲು ಸಾಧ್ಯವಾಯಿತು. ಇಂತಹವರನ್ನು ನಾವು ನೆನೆಯಬೇಕು ಹಾಗೂ ಸ್ಮರಿಸಬೇಕು.

ಆದರೆ, ಈ ಎಲ್ಲ ಮಹನೀಯರುಗಳ ವಿಚಾರ ತಿಳಿದುಕೊಳ್ಳಬೇಕೆಂಬ ಆಸಕ್ತರಿಗೆ ಈವರೆಗೆ ಯಾವುದೇ ಪೂರ್ಣಪ್ರಮಾಣದ ಮಾಹಿತಿ ಲಭ್ಯವಿರಲಿಲ್ಲ. ಈ ಸಂದರ್ಭದಲ್ಲಿ ಮೈಸೂರಿನ ಹಿರಿಯ ಪತ್ರಕರ್ತರು ಹಾಗೂ ಲೇಖಕರಾದ ಶ್ರೀ **ಗೌರಿ ಸತ್ಯ** ರವರು 'ಮೈಸೂರಿನ ಅಸಾಮಾನ್ಯರು' ಎಂಬ ಅಪೂರ್ವ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಮೈಸೂರು ಸಂಸ್ಥಾನದ ಏಳಿಗೆಗೆ ಅವಿರತವಾಗಿ ದುಡಿದ ಐವತ್ತು ಮಹನೀಯರುಗಳ ಪರಿಚಯವನ್ನು ಮಾಡಿದ್ದಾರೆ. ಮೈಸೂರಿನ ಅಭಿವೃದ್ಧಿಗೆ ಅಸಾಧಾರಣ ಸೇವೆ ಸಲ್ಲಿಸಿದ ಮಹನೀಯರುಗಳ ಹೆಸರು ಮೈಸೂರಿಗರ ಸ್ಮೃತಿಪಲ್ಲಟದಿಂದ ಅಳಿಸಿಹೋಗಿದ್ದರೂ, ಶ್ರೀ ಗೌರಿ ಸತ್ಯರವರು ಅವರುಗಳ ಸೇವೆಯ ಬಗ್ಗೆ ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ತಮ್ಮ 'ಮೈಸೂರಿನ ಅಸಾಮಾನ್ಯರು' ಕೃತಿಯ ಮೂಲಕ ಮಾಡಿದ್ದಾರೆ.

ಶ್ರೀ ಗೌರಿ ಸತ್ಯರವರು ಈ ಕೃತಿಯಲ್ಲಿ ಪರಿಚಯ ಮಾಡಿರುವ ಅಷ್ಟೂ ಗಣ್ಯರುಗಳು ಒಂದೊಂದು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಕರ್ಮಯೋಗಿಗಳು. ಕೃತಿಯ ಶೀರ್ಷಿಕೆಯಲ್ಲಿ ಹೆಸರಿಸಿರುವ ಹಾಗೇ ಅವರೆಲ್ಲರೂ **ಅಸಾಮಾನ್ಯರೇ**. ಯಾವ ಪ್ರಚಾರವನ್ನು ಬಯಸದೇ ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡು ಸಾಧನೆ ಮಾಡಿದವರು. ಶ್ರೀ ಗೌರಿ ಸತ್ಯರವರ **'ಮೈಸೂರಿನ ಅಸಾಮಾನ್ಯರು'** ಕೃತಿಯಲ್ಲಿನ ಐವತ್ತು ಮಹನೀಯರ ಅಪೂರ್ವ ಸಾಧನೆ, ಕೊಡುಗೆ ಮುಂತಾದ ಮಾಹಿತಿಯ ಬಗ್ಗೆ ಇಲ್ಲಿ ಬೆಳಕು ಚೆಲ್ಲಲಾಗಿದೆ.



ಗೌರಿ ಸತ್ಯ

1. ಮೈಸೂರು ಮಹಾರಾಜರ ಆಡಳಿತದ ಅವಧಿಯಲ್ಲಿ ಒಂದು ಕಾಲಕ್ಕೆ ಅತ್ಯಂತ ಪ್ರತಿಭಾವಂತ ಅಧಿಕಾರಿಗಳು ಒಂದಲ್ಲ ಒಂದು ಹುದ್ದೆಯಲ್ಲಿ ಆಡಳಿತ ನಡೆಸಿ, ಅತ್ಯುತ್ತಮ ಸೇವೆ ಸಲ್ಲಿಸಿ, ಮೈಸೂರು ಸಂಸ್ಥಾನಕ್ಕೂ ಕೀರ್ತಿ ತಂದರು. ಮೈಸೂರಿನ ಚೀಫ್ ಕಮಿಷನರ್‌ರವರ ಮುಖ್ಯ ಶಿರಸ್ತೇದಾರ್ ಆಗಿ, ಮಹಾನ್ ಪ್ರತಿಭೆಯ ವ್ಯಕ್ತಿ, ಮೊದಲ ಶ್ರೇಣಿಯ ಆಡಳಿತ ಕೌಶಲ್ಯವನ್ನು ಹೊಂದಿದ್ದ ರಾಯ ರಾಯ ರಾಯಿ ಎಂಬ ಬಿರುದನ್ನು ಪಡೆದಿದ್ದವರು ಶ್ರೀ **ಆರ್. ವೆಂಕಟರಾವ್**‌ರವರು.

ಗ್ರಾಮೀಣ ಜನರ ಬಗ್ಗೆ ಪ್ರಗತಿಪರ ನಿಲುವು ಹೊಂದಿದ್ದ ಶ್ರೀ ಗಂಧನಹಳ್ಳಿ ಜಹಗೀರ್ದಾರ್ ಕೃಷ್ಣರಾವ್‌ರವರು ಗ್ರಾಮಗಳಲ್ಲಿ ಉತ್ತಮ ರಸ್ತೆಗಳು, ನಿರ್ವಹಣೆ, ಮಕ್ಕಳಿಗಾಗಿ ಶಾಲೆಗಳ ಸ್ಥಾಪನೆ, ಆರೋಗ್ಯಕ್ಕೆ ಸಂಬಂಧಿಸಿದ ಅನುಕೂಲಗಳನ್ನು ಮಾಡಿಕೊಟ್ಟವರು. ಕೆಆರ್‌ಎಸ್ ಅಣೆಕಟ್ಟು ನಿರ್ಮಾಣ ಸಂದರ್ಭದಲ್ಲಿ ಗಂಧನಹಳ್ಳಿ ಗ್ರಾಮದ 350 ಎಕರೆ ಜಮೀನು ನೀರಿನಲ್ಲಿ ಮುಳುಗಿದ ಸಂದರ್ಭದಲ್ಲಿ ಕೃಷ್ಣರಾವ್‌ರವರು ರೈತರಿಗೆ ತಾರತಮ್ಯವಿಲ್ಲದೆ ಪುನರ್ವಸತಿ ಕಲ್ಪಿಸಿ ಹೆಸರು ವಾಸಿಯಾದರು.

ಹೆಸರು ಕೇಳಿದರೇನೆ ಜನ ಹೆದರುವ ವ್ಯಕ್ತಿತ್ವ ಹೊಂದಿದ್ದ ಮೀಸೆ ಶ್ರೀ ವಿ.ಎನ್. **ನರಸಿಂಹ ಅಯ್ಯಂಗಾರ್** ರವರು ಸರ್ಕಾರಿ ಸೇವೆಯಲ್ಲಿದ್ದವರು, ಅರಮನೆಯ ಕಂಟ್ರೋಲರ್ ಆಗಿ, ಮಹಿಳಾ ಶಿಕ್ಷಣಕ್ಕೆ ಒತ್ತುಕೊಟ್ಟು, ಬಾಲ್ಯ ವಿವಾಹವನ್ನು ವಿರೋಧಿಸುತ್ತಿದ್ದ ಅತ್ಯಂತ ಪ್ರಾಮಾಣಿಕ ವ್ಯಕ್ತಿ.

ಮೈಸೂರು ಸಂಸ್ಥಾನದ ಮಹತ್ವದ ಅಮೃತ ಮಹಲ್ ಇಲಾಖೆಯಲ್ಲಿ ಅಧೀಕ್ಷಕರಾಗಿ, ರೆವಿನ್ಯೂ ಅಸಿಸ್ಟೆಂಟ್ ಕಮಿಷನರ್, ಮುಜರಾಯಿ ಉಸ್ತುವಾರಿ ಅಧಿಕಾರಿಯಾಗಿ, ಸಾಮಾನ್ಯ ಆಡಳಿತ ನಿರ್ವಹಣೆ, ಅರಮನೆಯ ಕಂಟ್ರೋಲರ್ ಆಗಿ ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದವರು ಶ್ರೀ **ಹೆಚ್. ನಂಜುಂಡರಾಜ ಅರಸ್**‌ರವರು.

ದಿವಾನ್ ಪೂರ್ಣಯ್ಯನವರ ವಿರೋಧಿಯಾಗಿದ್ದ, ಹೈದರ್ ಅಲಿ, ಟಿಪ್ಪು ಸುಲ್ತಾನ್ ಮತ್ತು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ – ಈ ಮೂರು ಅರಸರ ಅವಧಿಯಲ್ಲಿ ಸೇವೆ ಸಲ್ಲಿಸಿ, ನಾಲ್ಕು ಬಾರಿ ದಿವಾನರಾಗಿದ್ದ ಹಾಗೂ ಕಂದಾಯ ವಿಚಾರಗಳ ಬಗ್ಗೆ ಅಪಾರವಾದ ಅನುಭವವನ್ನು ಹೊಂದಿದ್ದವರು ಗುಬ್ರಾ ಕಚೇರಿ ಶ್ರೀ **ಬಾಬುರಾವ್**‌ರವರು.

ಮೈಸೂರು ಸಿವಿಲ್ ಸರ್ವೀಸ್‌ಗೆ ರೆವಿನ್ಯೂ ಪ್ರೊಬೇಷನರ್ ಆಗಿ ಸೇವೆ ಆರಂಭಿಸಿ, ಡೆಪ್ಯೂಟಿ ಅಮಲ್ದಾರ್, ಅಮಲ್ದಾರ್ ಆಗಿ ಸೇವೆ ಸಲ್ಲಿಸಿ, ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧಿಕಾರೇತರ ಸದಸ್ಯರಾಗಿ ಕೆಲಸ ಮಾಡಿದವರು ಶ್ರೀ **ಎಂ.ಜಿ. ಕೃಷ್ಣಸ್ವಾಮಿ ರಾವ್**‌ರವರು.

ಮಹಾರಾಜರ ಅವಧಿಯಲ್ಲಿ ಸಾಮಾನ್ಯ ಹುದ್ದೆಯಿಂದ ಸೇವೆ ಆರಂಭಿಸಿ, ತಮ್ಮ ಕಾರ್ಯನಿಷ್ಠೆಯಿಂದ ಅಧಿಕಾರದಲ್ಲಿ ಮೇಲಕ್ಕೇರಿದವರು. 1876ರ ಅವಧಿಯಲ್ಲಿ ಕ್ಷಾಮದ ವಿಶೇಷ ಕಾರ್ಯಕ್ಕೆ ನೇಮಕಗೊಂಡು ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ಮೈಸೂರು ಜಿಲ್ಲಾಧಿಕಾರಿಗಳಾಗಿ ಸೇವೆ ಸಲ್ಲಿಸಿದವರು ಶ್ರೀ **ಎಂ. ನಾರಾಯಣ ರಾವ್**‌ರವರು.

2. ಮಹಾರಾಜರ ಆಡಳಿತದಲ್ಲಿ ಸುಪ್ರಸಿದ್ಧ ಇಂಜಿನಿಯರ್‌ಗಳು, ವಾಸ್ತುಶಿಲ್ಪಿಗಳು ನಿಸ್ಪೃಹವಾಗಿ ಸೇವೆ ಸಲ್ಲಿಸಿ, ಮೈಸೂರು ಸಂಸ್ಥಾನವು ಮಾದರಿಯಾಗಲು ಕಾರಣೀಭೂತರಾಗಿದ್ದಾರೆ.

ವಿಶಾಲವಾದ ಈಗಿನ ಅಂಬಾವಿಲಾಸ ಅರಮನೆಯ ನಿರ್ಮಾಣದಲ್ಲಿ ಕಾರ್ಯನಿರ್ವಾಹಕ ಇಂಜಿಯರ್ ಆಗಿ ಅವಿರತವಾಗಿ ದುಡಿದ ಹೆನ್ರಿ ಇರ್ವಿನ್‌ರವರು ರಚಿಸಿಕೊಟ್ಟಿದ್ದ ವಿನ್ಯಾಸಗಳಲ್ಲಿ ಕೊರತೆ ಉಂಟಾದಾಗ ಅದನ್ನು ಅವಶ್ಯಕತೆಗೆ ತಕ್ಕಂತೆ ಬದಲಾವಣೆ ಮಾಡಿ ಆಕರ್ಷಕವಾಗಿ ಮೂಡಿ ಬರಲು ಶ್ರಮಿಸಿದವರು **ವಾಸ್ತು ಶಿಲ್ಪಿ ಶ್ರೀ ಬಿ.ಪಿ. ರಾಘವಲು ನಾಯ್ಡು**ರವರು.

(ಮುಂದುವರೆಯುವುದು)

ಮದುವೆ ಎಂಬ ದೌಲತ್ತು ಪ್ರದರ್ಶನ







ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

> ಅನ್ನದಾತ ಬೆಳೆಯುವ ಆಹಾರದ ಪ್ರಮಾಣದಲ್ಲಿ ಕೊರತೆ ಇಲ್ಲ. ಬದಲಾಗಿ ಸಮರ್ಪಕವಾಗಿ ಉಪಯೋಗಿಸದೆ ವ್ಯರ್ಥ ಮಾಡುತ್ತಿರುವುದರಿಂದ ಕೊರತೆ ಮತ್ತು ಬೆಲೆ ಏರಿಕೆಯನ್ನು ಹೊರ ಬೇಕಾಗಿದೆ. ಸರಾಸರಿ ಭಾರತೀಯ ಕುಟುಂಬವು ನಿತ್ಯ 55 ಕೆಜಿ ಆಹಾರವನ್ನು ವ್ಯರ್ಥ ಮಾಡುತ್ತದೆ. ವಾರ್ಷಿಕ ಒಟ್ಟು 78 ಮಿಲಿಯನ್ ಟನ್‌ಗಳಷ್ಟು ಆಹಾರವನ್ನು ವ್ಯರ್ಥ ಮಾಡುವುದರಿಂದ ಆಗುತ್ತಿರುವ ಆರ್ಥಿಕ ನಷ್ಟ ರೂ.92,000 ಕೋಟಿಗಳೆಂದು ಅಂದಾಜಿಸಲಾಗಿದೆ, ಅಗತ್ಯಕ್ಕಿಂತ ಹೆಚ್ಚು ತಿನ್ನುವುದು ಸಹ ಮತ್ತೊಬ್ಬರ ಹಸಿವಿಗೆ ಹಾಗೂ ದರ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಮದುವೆಗಳು, ಎರಡು ಜೀವಗಳನ್ನು ಬೆಸೆಯುವ ಭಾರತೀಯರ ಜೀವನ ಶೈಲಿ ಹಾಗೂ ಸಾಂಸ್ಕೃತಿಕ ತಳಹದಿಯ ಬಹು ದೊಡ್ಡ ಸಮಾರಂಭ. ಆದರೆ, ಕಳೆದ ಮೂರು ದಶಕಗಳಿಂದ ಮದುವೆಗಳು ಶ್ರೀಮಂತಿಕೆಯನ್ನು ಪ್ರದರ್ಶಿಸುವ ಸಮಾರಂಭಗಳಾಗಿವೆ.

ಹಿಂದಿನ ದಿನಗಳಲ್ಲಿ ಮನೆಯ ಮುಂದೆ ಹಸಿರು ಚಪ್ಪರವನ್ನು ಹಾಕಿ ಊರ ಜನರೆಲ್ಲಾ ಸೇರಿ ಕೆಲಸಗಳನ್ನು ಹಂಚಿಕೊಂಡು ಮದುವೆಗಳನ್ನು ಮಾಡುತ್ತಿದ್ದರು. ಅದೇನು ಒಂದು ದಿನಕ್ಕೆ ಮುಗಿಯುವ ಸಮಾರಂಭ ವಾಗಿರಲಿಲ್ಲ. ಆದರೆ, ಕಾಲ ಬದಲಾಗಿದೆ ಎಂದು ನಾವೇ ಹೇಳಿಕೊಂಡು ಮನೆ ಹಾಗೂ ದೇವಸ್ಥಾನ ಗಳನ್ನು ಬಿಟ್ಟು ಮದುವೆಗಳನ್ನು ಕಲ್ಯಾಣಮಂಟಪ ಗಳಲ್ಲಿ ಮಾಡುತ್ತಿದ್ದೇವೆ. ಮದುವೆ ಅಂದರೆ ಈಗ ಹಲವು ಜನರಿಗೆ ಉದ್ಯೋಗ ಖಾತ್ರಿ ಯೋಜನೆಯಾಗಿದೆ. ಆಸೆ–ಅಭಿರುಚಿಗಳು ಕಾಲಕಾಲಕ್ಕೆ ಬದಲಾಗುವುದು ಸಹಜ ಪ್ರಕ್ರಿಯೆ.

ಹಣ ಇದ್ದರೆ ಎಲ್ಲವನ್ನು ಮಾಡಿಕೊಡಲು ಇವೆಂಟ್ ಮ್ಯಾನೇಜ್‌ಮೆಂಟ್‌ಗಳಿವೆ. ವರ ಮತ್ತು ವಧುವನ್ನು ಮಾತ್ರ ಕರೆದುಕೊಂಡು ಹೋದರೆ ಸಾಕು, ಜನರನ್ನು ಮದುವೆಗೆ ಆಮಂತ್ರಿಸುವುದು ಸಹ ಸರಳವಾಗಿ ಬಿಟ್ಟಿದೆ. ಗೆಳೆಯರಿಗೆ ಕರೆ ಮಾಡಿ ಇಲ್ಲವೇ ವಾಟ್ಸ್‌ಪ್ ಮೂಲಕ ಆಮಂತ್ರಣದ ಸಂದೇಶ ಕಳುಹಿಸಿದರೆ, ಬಂಧುಗಳಿಗೆ ಇಂದಿಗೂ ಖುದ್ದು ಮನೆಗಳಿಗೆ ಹೋಗಿ ಆಮಂತ್ರಣ ನೀಡಬೇಕಾಗಿದೆ. ಒಟ್ಟಾರೆ ಅದ್ದೂರಿ ಮದುವೆಗಳನ್ನು ನಡೆಸುವಲ್ಲಿ ಯಶಸ್ಸಿನ ಹಂತಕ್ಕೆ ಬಂದು ತಲುಪಿದ್ದೇವೆ ಎಂದರ್ಥ.

ಇವತ್ತಿನ ದರದಲ್ಲಿ ಚಿನ್ನ–ಬೆಳ್ಳಿಯನ್ನು ಕೊಳ್ಳಲಾಗದು. ನಾವು ಭಾರತೀಯರು ಚಿನ್ನದ ವ್ಯಾಮೋಹ ಉಳ್ಳವರು, ಕೊಳ್ಳದೆ ಇರಲಾಗದು. ಅದರಲ್ಲೂ ಮನೆಯಲ್ಲಿ ಮದುವೆ ಸಂಭ್ರಮ ಇರುವಾಗ ದರ ಅದೆಷ್ಟೇ ಆಗಿರಲಿ ಒಂದಷ್ಟು ಗ್ರಾಂ ಚಿನ್ನವನ್ನು ತೆಗೆದುಕೊಳ್ಳುತ್ತೇವೆ. ಬಡವನಾದರೆ ತಾಳಿಗಾದರೂ ಚಿನ್ನದ ಅಂಗಡಿಗೆ ಹೋಗಲೇ ಬೇಕು, ಚಿನ್ನ ಕೊಳ್ಳದೆ ಮದುವೆ ನಡೆಯದು.

ಮದುವೆಗಳನ್ನು ಸಾಲ ಮಾಡಿಯಾದರೂ ಮಾಡಿ ಬಿಡುತ್ತೇವೆ, ಊರುಗಳಲ್ಲಿ ಒಂದು ಕಾಲಕ್ಕೆ ಶ್ರೀಮಂತರೆನಿಸಿಕೊಂಡವರು ಮದುವೆಗಳಿಂದಾಗಿಯೇ ಇಂದು ಎಲ್ಲವನ್ನೂ ಮಾರಿಕೊಂಡು ನಿರ್ಗತಿಕರಾಗಿದ್ದಾರೆ.

ಅಖಿಲ ಭಾರತೀಯ ವ್ಯಾಪಾರಿಗಳ ಒಕ್ಕೂಟದ (CAIT) ಪ್ರಧಾನ ಕಾರ್ಯದರ್ಶಿ ಮತ್ತು ಚಾಂದನೀ ಚೌಕ್‌ನ ಸಂಸದ ಪ್ರವೀಣ್ ಖಂಡೇಲ್ವಾಲ್ ಹೇಳಿಕೆ ಪ್ರಕಾರ ಆಧುನಿಕತೆ ಮತ್ತು ಸ್ವಾವಲಂಬನೆಯನ್ನು ಸಂಯೋಜಿಸುವ ಮೂಲಕ ಭಾರತದ ವಿವಾಹ ಆರ್ಥಿಕತೆಯು ದೇಶದ ವ್ಯಾಪಾರಗಳ ಪ್ರಬಲ ಸ್ತಂಭ ಗಳಲ್ಲಿ ಒಂದಾಗಿದೆ. 2025ರಲ್ಲಿ ಅಂದಾಜು 90 ಲಕ್ಷಕ್ಕೂ ಹೆಚ್ಚು ಮದುವೆಗಳು ಆಗಿವೆ. ಮದುವೆ ಉದ್ಯಮದಲ್ಲಿ ಆಗಿರಬಹುದಾದ ಅಂದಾಜು ವಹಿವಾಟು ರೂ.12.00 ಲಕ್ಷ ಕೋಟಿಗಳು.

ಕಲ್ಯಾಣ ಮಂಟಪಗಳಲ್ಲಿಯೇ ಆಗುತ್ತಿರುವುದರಿಂದ ಗ್ರಾಮಾಂತರ ಸ್ಥಳಗಳಲ್ಲೂ ಮದುವೆಗಾಗಿಯೇ ಭವ್ಯ ಕಟ್ಟಡಗಳನ್ನು ಕಟ್ಟಿದ್ದಾರೆ. ರೂ. 1.00 ಲಕ್ಷದಿಂದ 10.00 ಲಕ್ಷದವರೆಗೂ ದಿನಕ್ಕೆ ಬಾಡಿಗೆ ತೆಗೆದು ಕೊಳ್ಳುತ್ತಾರೆ. ಊಟ, ಒಡವೆಗಳು, ಡೆಕೊರೇಷನ್, ಆತಿಥ್ಯ, ವಿಡಿಯೋ, ಫೋಟೋ ಮುಂತಾದವು ಗಳನ್ನು ಒಳಗೊಂಡಂತೆ ಸರಾಸರಿ ಒಂದು ಮದುವೆಗೆ ಆಗುವ ವೆಚ್ಚ ರೂ.40.00 ರಿಂದ 60.00 ಲಕ್ಷಗಳು. ಶ್ರೀಮಂತರು ಮಾಡುವ ಖರ್ಚು ಲಕ್ಷಕ್ಕೆ ಬದಲಾಗಿ ಕೋಟಿಗಳಲ್ಲಿ ಇರುತ್ತದೆ. ದೆಹಲಿ ಒಂದರಲ್ಲೇ 4.80 ಲಕ್ಷ ವಿವಾಹಗಳು ನಡೆದು ಅಂದಾಜು ರೂ.1.80 ಲಕ್ಷ ಕೋಟಿ ವ್ಯವಹಾರ ನಡೆದಿದೆ. ಮದುವೆ ಎಂಬ ಸಾಂಪ್ರದಾಯಿಕ ಸಮಾರಂಭಗಳಲ್ಲಿ ಒಂದು ಕೋಟಿಗೂ ಹೆಚ್ಚು ತಾತ್ಕಾಲಿಕ ಉದ್ಯೋಗವನ್ನು ಸೃಷ್ಟಿಸಿದೆ.

ಮದುವೆಗಳ ಸಂಖ್ಯೆ ಮತ್ತು ವೆಚ್ಚಗಳು ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಮದುವೆ ಮಾರುಕಟ್ಟೆಯಲ್ಲಿ ಭಾರತವು ವಿಶ್ವದ 2ನೇ ಅತಿದೊಡ್ಡ ರಾಷ್ಟ್ರವಾಗಿದೆ.

ವೈಭವಯುತವಾಗಿ ನಡೆಯುವ ವಿವಾಹಗಳು ದುಂದು ವೆಚ್ಚ ಎನಿಸಿದರೂ ಹಲವು ಕುಟುಂಬಗಳಿಗೆ ಉದ್ಯೋಗ ಸೃಷ್ಟಿಸಿ ಜೀವನಕ್ಕೆ ಆಧಾರವಾಗುತ್ತವೆ. ಉಳ್ಳವರು ದುಂದು ವೆಚ್ಚ ಮಾಡುವುದರಿಂದ ಸಮಾಜಕ್ಕೆ ಲಾಭವೇ ಆಗುವುದು. ಆದರೆ ಮಧ್ಯಮ ಹಾಗೂ ಕೆಳದರ್ಜೆಯವರು ಸಾಲದಲ್ಲಿ ತಂದ ಹಣದಿಂದ ದುಂದುಗಾರಿಕೆ ಮಾಡಿ ಬೀದಿಗೆ ಬೀಳುವುದು ಬೇಡ. ಸಾಮೂಹಿಕ ವಿವಾಹಗಳಲ್ಲಿ ಮದುವೆ ಮಾಡಿಕೊಳ್ಳುವುದು ಅಥವಾ ಕುವೆಂಪು ಅವರ ಮಂತ್ರಮಾಂಗಲ್ಯ ಸರಳ ವಿವಾಹಗಳು ಎಲ್ಲಾ ವರ್ಗದ ಜನರಿಗೂ ಉತ್ತಮ.

ಕುಟುಂಬದಲ್ಲಿ ಮದುವೆ ಸಮಾರಂಭ ನಡೆಯುತ್ತದೆ ಎಂದರೆ ಎಲ್ಲರೂ ಸೆಲೆಬ್ರೆಟಿಗಳಾಗಿ ಬಿಡುತ್ತಾರೆ, ಸಮಾರಂಭ ಅದ್ದೂರಿಯಾಗಿಯೇ ನಡೆಯಬೇಕೆನ್ನುತ್ತಾರೆ. ಕಿಸೆಯಲ್ಲಿ ಮೂರು ಕಾಸು ಇಲ್ಲದಿದ್ದರೂ ಜಮೀನು ಮಾರಿಯಾದರೂ ಮೆರೆಯುತ್ತಾರೆ. ಇತ್ತ, ವಿವಾಹ ಸಮಾರಂಭದಲ್ಲಿ ಅಭಿರುಚಿಗಳು ಬದಲಾಗಿವೆ. ಬೂಂದಿ ಪಾಯಸ, ಅನ್ನಸಾರು, ಒಂದು ಪಲ್ಯ, ಉಪ್ಪಿನಕಾಯಿ ಇಷ್ಟರಲ್ಲಿ ಊಟ ಮುಗಿಯುತ್ತಿದ್ದ ಕಾಲ ಹೋಗಿ ನೂರೆಂಟು ಖಾದ್ಯಗಳ ಫುಡ್ ಕೌಂಟರ್ ಬಂದಿದೆ. ಊಟದ ಎಲೆಯ ಮೇಲೆ ಇಡುವ ಸಾಲು ಸಾಲು ಐಟಂಗಳನ್ನು ಬಡಿಸುವುದನ್ನು ನೋಡಿದರೆ ಹೊಟ್ಟೆಬಾಕ ಘಟೋದ್ಗಜ ಕೂಡ ದಿಗ್ಭ್ರಾಂತನಾಗುತ್ತಿದ್ದ. ದೊಡ್ಡ ಮೊತ್ತದ ಬಟ್ಟೆಗಳು, ನಿಶ್ಚಿತಾರ್ಥ, ಪ್ರಿ– ವೆಡ್ಡಿಂಗ್ ಫೋಟೋ ಶೂಟ್, ವಿಶೇಷ ವಿನ್ಯಾಸದ ಆಮಂತ್ರಣ ಪತ್ರಿಕೆ, ಮ್ಯೂಸಿಕ್ ಕನ್ಸರ್ಟ್, ಡ್ಯಾನ್ಸ್, ಅರಿಶಿನ ಶಾಸ್ತ್ರ, ಅತಿಥಿಗಳಿಗೆ ವಿಶಿಷ್ಟ ಕಾಣಿಕೆ ಕೊಡು ವುದು, ಮದುವೆ ಮಂಟಪ ಮತ್ತು ಕಟ್ಟಡವನ್ನು ಅತ್ಯಾಧುನಿಕವಾಗಿ ಸಿಂಗರಿಸುವುದು, ಡ್ರೋನ್ ಮೂಲಕ ಚಿತ್ರೀಕರಣ ಇವುಗಳೆಲ್ಲವೂ ಮುಗಿದ ನಂತರ ಬೀಗರ ಔತಣವೆಂದು ನೂರಾರು ಕ್ವಿಂಟಾಲ್ ಮಾಂಸದಿಂದ ತಯಾರಿಸಿದ ಹಲವು ಐಟಂಗಳಿರುವ ಭರ್ಜರಿ ಬಾಡೂಟ. ಇವುಗಳೆ ಲ್ಲವೂ ದುಂದುವೆಚ್ಚದ ನಾನಾ ದಾರಿಗಳಾದರೂ ಹಲವು ವೃತ್ತಿಗಳ ಜನರಿಗೆ ಆದಾಯ ತಂದುಕೊಡುತ್ತವೆ.

ಸಮಾರಂಭದಲ್ಲಿ ಅದ್ದೂರಿ, ಸಂಭ್ರಮ, ಮೃಷ್ಟಾನ್ನ ಭೋಜನ, ಉಡುಗೊರೆ ಎಲ್ಲವೂ ಇದೆ. ಶ್ರೀಮಂತಿಕೆ ತೋರಿಕೆಯಲ್ಲಿ ಹಣವನ್ನು ನೀರಿನಂತೆ ಖರ್ಚು ಮಾಡುವುದು ಸಲ್ಲದು. ಇರಲಿ ಇದನ್ನೂ ಬಿಡೋಣ, ತಿನ್ನುವ ತುತ್ತು ಅನ್ನಕ್ಕೆ ಮೆನುವಿನಲ್ಲಿ ಹತ್ತಕ್ಕೂ ಮೀರಿದ ಐಟಂಗಳಿಟ್ಟು ಮಾಡಿದ ಅಡುಗೆಯಲ್ಲಿ ವ್ಯರ್ಥ ಆಗುವುದೆಷ್ಟು ಬಲ್ಲಿರಾ?.

ಮದುವೆಗಳಲ್ಲಿ ತಯಾರಿಸುವ ಊಟದಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು ಹಾಗೂ ವ್ಯರ್ಥ ಆಗುವ ಆಹಾರವನ್ನು ನಿಯಂತ್ರಿಸುವುದು ಸವಾಲಿನ ಕೆಲಸ. ಅಂದಾಜು ಶೇ.20ರಿಂದ ಶೇ.40ರವರೆಗೆ ತಯಾರಿಸಿದ ಸಿದ್ದ ಆಹಾರ ವ್ಯರ್ಥ ಆಗುತ್ತಿದೆ.

ಸಮಾರಂಭಗಳಿಗೆ ಬರುವವರ ಸಂಖ್ಯೆಯನ್ನು ನಿಖರವಾಗಿ ಅಂದಾಜಿಸಲಾಗದು, ಶ್ರೀಮಂತಿಕೆ ಯನ್ನು ಪ್ರದರ್ಶಿಸುವ ಮನಸ್ಥಿತಿಯ ಕಾರಣ ಯದ್ರಾಬಿದ್ರಿ ಐಟಂಗಳ ಜೊತೆಗೆ ಅಗತ್ಯಕ್ಕಿಂತ ಹೆಚ್ಚು ಅಹಾರವನ್ನು ತಯಾರಿಸುವುದರಿಂದ ಉಳಿದಿದ್ದು ಹಾಗೂ ಬಡಿಸಿಕೊಂಡವರು ಎಲೆಯಲ್ಲಿಯೇ ಬಿಟ್ಟ ಅಹಾರವು ತ್ಯಾಜ್ಯವಾಗಿ ತಿಪ್ಪೆ ಸೇರುತ್ತದೆ. ಇದು ಸದುಪಯೋಗ ಆಗಬೇಕಾಗಿದ್ದ ಸಂಪನ್ಮೂಲಗಳ ವ್ಯರ್ಥಕ್ಕೆ ಕಾರಣವಾಗುತ್ತದೆ. 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬಂತೆ ಆಗುವುದು. ವರ್ಷವೆಲ್ಲಾ ಬೆವರು ಸುರಿಸಿ ಬೆಳೆದದ್ದು ಕ್ಷಣದಲ್ಲಿ ಮಣ್ಣಾಗುವುದು.

ಆಹಾರ ವ್ಯರ್ಥ ಆಗುವುದು ನೈತಿಕತೆ ಮಾತ್ರವಲ್ಲ, ಆರ್ಥಿಕ ಮತ್ತು ಪರಿಸರದ ಸಮಸ್ಯೆಯೂ ಹೌದು. ಎಸೆಯುವ ಆಹಾರವನ್ನು ಉತ್ಪಾದಿಸಲು ಹಣ, ನೀರು, ಸಮಯ ಮತ್ತು ಶ್ರಮ ಬೇಕಾಗುತ್ತದೆ, ಉತ್ಪಾದನೆಯ ನಂತರ ಸಾಗಣೆ, ಇವುಗಳೆಲ್ಲವೂ ಎಸೆಯುವ ಆಹಾರದಿಂದ ವ್ಯರ್ಥವಾಗುವುದು. ತ್ಯಾಜ್ಯದಿಂದ ಹಸಿರುಮನೆ ಅನಿಲಗಳು (Green house gases) ಬಿಡುಗಡೆ ಆಗುವುದರಿಂದ ಹವಾಮಾನ ಬದಲಾವಣೆಯು ಉಲ್ಬಣಗೊಳ್ಳುವುದು. ಇಂತಹ ಪರಿಣಾಮಗಳನ್ನು ತಿಳಿಯದೆ ಅತಿರಂಜನೀಯ ಪಾರ್ಟಿಗಳನ್ನು ಮಾಡುವುದಕ್ಕೆ, ಸಂಪತ್ತನ್ನು ಪ್ರದರ್ಶಿಸಲು ಹಾಗೂ ನಾವೇನು ಕಡಿಮೆ ಎನ್ನುವ ಕೌಟಂಬಿಕ ಒಣಜಂಬದಿಂದ ಆಹಾರವನ್ನು ಅತಿಯಾಗಿ ತಯಾರಿಸುತ್ತಾರೆ.

ಅಂತರರಾಷ್ಟ್ರೀಯ ಸಂಶೋದನಾ ಜರ್ನಲ್ ಒಂದರಲ್ಲಿ ಪ್ರಕಟವಾಗಿರುವ ಸಂಶೋಧನಾ ಲೇಖನದಲ್ಲಿ ಆಹಾರ ವ್ಯರ್ಥವನ್ನು ಕಡಿಮೆ ಮಾಡುವ ಮತ್ತು ಉಳಿದ ಆಹಾರವನ್ನು ಸಕಾಲದಲ್ಲಿ ದಾನ ಕಾರ್ಯಕ್ರಮಗಳನ್ನು ಉತ್ತೇಜಿಸುವ ಬಗ್ಗೆ ಜನರಿಗೆ ವಿಶೇಷವಾಗಿ ಯುವಪೀಳಿಗೆಗೆ ಜಾಗೃತಿ ಮೂಡಿಸುವುದು, ಸಾರ್ವಜನಿಕ ಜಾಗೃತಿ ಅಭಿಯಾನಗಳು ಸರ್ಕಾರದ ನಿಯಮಾವಳಿ ಮೂಲಕ ಬದಲಾವಣೆ ಸಾಧ್ಯ ಎಂದು ಹೇಳುತ್ತದೆ, ಆ ನಿಟ್ಟಿನಲ್ಲಿ ಮನಸ್ಸು ಮಾಡಬೇಕಷ್ಟೆ.

ಹೊಟೇಲ್‌ಗಳಲ್ಲಿಯೂ, ಸಮಾರಂಭಗಳಲ್ಲಿ ಆಗುವಷ್ಟೆ ಪ್ರಮಾಣದ ಆಹಾರ ವ್ಯರ್ಥ ಆಗುತ್ತಿದೆ. ಬೇಡಿಕೆಗಿಂತ ಹೆಚ್ಚು ತಯಾರಿಸುವುದರಿಂದ ಹಾಗೂ ಗ್ರಾಹಕರು ತೆಗೆದುಕೊಂಡ ಆಹಾರವನ್ನು ತಿನ್ನದೆ ತಟ್ಟೆಯಲ್ಲೇ ಬಿಡುವುದರಿಂದ ತ್ಯಾಜ್ಯವಾಗಿ ತೊಟ್ಟಿಗೆ ಸೇರುತ್ತದೆ. ವ್ಯರ್ಥ ಮಾಡುವುದರಲ್ಲಿ ಹಬ್ಬಗಳು ಹೊರತಾಗಿಲ್ಲ.

ಅನ್ನದಾತ ಬೆಳೆಯುವ ಆಹಾರದ ಪ್ರಮಾಣದಲ್ಲಿ ಕೊರತೆ ಇಲ್ಲ. ಬದಲಾಗಿ ಸಮರ್ಪಕವಾಗಿ ಉಪಯೋಗಿಸದೆ ವ್ಯರ್ಥ ಮಾಡುತ್ತಿರುವುದರಿಂದ ಕೊರತೆ ಮತ್ತು ಬೆಲೆ ಏರಿಕೆಯನ್ನು ಹೊರ ಬೇಕಾಗಿದೆ. ಸರಾಸರಿ ಭಾರತೀಯ ಕುಟುಂಬವು ನಿತ್ಯ 55 ಕೆಜಿ ಆಹಾರವನ್ನು ವ್ಯರ್ಥ ಮಾಡುತ್ತದೆ. ವಾರ್ಷಿಕ ಒಟ್ಟು 78 ಮಿಲಿಯನ್ ಟನ್‌ಗಳಷ್ಟು ಆಹಾರವನ್ನು ವ್ಯರ್ಥ ಮಾಡುವುದರಿಂದ ಆಗುತ್ತಿರುವ ಆರ್ಥಿಕ ನಷ್ಟ ರೂ.92,000 ಕೋಟಿಗಳೆಂದು ಅಂದಾಜಿಸಲಾಗಿದೆ, ಅಗತ್ಯಕ್ಕಿಂತ ಹೆಚ್ಚು ತಿನ್ನುವುದು ಸಹ ಮತ್ತೊಬ್ಬರ ಹಸಿವಿಗೆ ಹಾಗೂ ದರ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಸುಸಂಸ್ಕೃತರಾದ ನಾವುಗಳು ಮನೆ ಇರಲಿ, ಹೊಟೇಲ್‌ಗಳೇ ಇರಲಿ ಸಭೆ–ಸಮಾರಂಭಗಳಾಗಿರಲಿ, ಹೊಟ್ಟೆಬಿರಿ ತಿನ್ನುವ ಆಸೆಯಿಂದ ಹೆಚ್ಚು ಹಾಕಿಸಿಕೊಂಡು ತಿನ್ನದೆ ತಟ್ಟೆಯಲ್ಲಿಯೇ ಬಿಟ್ಟು ವ್ಯರ್ಥ ಮಾಡುವುದಿಲ್ಲ ಎಂಬ ಸಂಕಲ್ಪದೊಂದಿಗೆ ಊಟಕ್ಕೆ ಕುಳಿತುಕೊಳ್ಳೋಣವೇ?.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಆಸೀಸ್ ಅಬ್ಬರ: ಓಮನ್ ವಿರುದ್ಧ 9 ವಿಕೆಟ್‌ಗಳ ಜಯ



ಮಿಚೆಲ್ ಮಾರ್ಷ್ ಹಾಗೂ ಟ್ರಾವಿಸ್ ಹೆಡ್ ಜೊತೆಯಾಟ.

ಮೈಸೂರು, ಫೆ20(ವಿವಿಹೆಚ್)– 2026ರ ಟಿ20 ವಿಶ್ವಕಪ್–2026ರ ಟೂರ್ನಿಯಲ್ಲಿ ತನ್ನ ಕೊನೆಯ ಲೀಗ್ ಪಂದ್ಯವನ್ನಾಡಿದ ಆಸ್ಟ್ರೇಲಿಯಾ ತಂಡ ಓಮನ್ ವಿರುದ್ಧ 9 ವಿಕೆಟ್‌ಗಳ ಜಯ ಸಾಧಿಸಿ, ವಿಶ್ವಕಪ್ ಅಭಿಮಾನಕ್ಕೆ ವಿದಾಯ ಹೇಳಿದೆ.

ಪಲ್ಲೆಕೆಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಓಮನ್ ತಂಡದ ಬ್ಯಾಟರ್‌ಗಳು ಆಸ್ಟ್ರೇಲಿಯಾ ಬೌಲರ್‌ಗಳ ದಾಳಿ ಎದುರಿಸುವಲ್ಲಿ ವಿಫಲರಾದರು. ಓಮನ್ ತಂಡದ ಅಮೀರ್ ಕಲೀಮ್ ಇನ್ನಿಂಗ್ಸ್ ಮೊದಲ ಎಸೆತದಲ್ಲಿ ಔಟ್ ಆದರು. ಓಮನ್ ತಂಡದ ಪರ ನಾಯಕ ಜತೀಂದರ್ ಸಿಂಗ್ 17, ಕರಣ್ ಸೋನಾವಾಲೆ 12, ಹಮ್ಮದ್ ಮಿರ್ಜಾ 16 ರನ್ ಕಲೆ ಹಾಕುವಲ್ಲಿ ವಿಫಲರಾದರು. ಮಧ್ಯಮ ಕ್ರಮಾಂಕದಲ್ಲಿ ವಾಸಿಂ ಅಲಿ 4 ಬೌಂಡರಿ ನೆರವಿನಿಂದ 32 ರನ್ ಬಾರಿಸಿದರು. ಅಂತಿಮವಾಗಿ ಓಮನ್ 16.4 ಓವರ್‌ಗಳಲ್ಲಿ 104 ರನ್‌ಗಳಿಗೆ ಆಲೌಟ್ ಅಯಿತು.

ಇತ್ತ ಬಿಗಿ ಬೌಲಿಂಗ್ ದಾಳಿ ಮಾಡಿದ ಆಸೀಸ್ ಪರ ಆಡಂ ಜಂಪ ಪ್ರಮುಖ 4 ವಿಕೆಟ್ ಪಡೆದರು. ಗ್ಲೇನ್ ಮ್ಯಾಕ್ಸವೆಲ್ ಹಾಗೂ ಜೇವಿಯರ್ ಬ್ರಾರ್ಟ್ಲೆಟ್ 2, ನಥನ್ ಎಲ್ಲಿಸ್ ಹಾಗೂ ಮಾರ್ಕಸ್ ಸ್ಟೋಯಿನ್ಸ್ ತಲಾ ಒಂದೊಂದು ವಿಕೆಟ್ ಪಡೆದರು.

ಓಮನ್ ನೀಡಿದ ಗುರಿಯನ್ನು ಸರಾಗವಾಗಿ ಬೆನ್ನತ್ತಿದ ಆಸ್ಟ್ರೇಲಿಯಾ, 9.1 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 108 ರನ್‌ಗಳಿಸಿ ಜಯ ತನ್ನದಾಗಿಸಿ ಕೊಂಡಿತು. ಮಿಚೆಲ್ ಮಾರ್ಷ್ 33 ಎಸೆತಗಳಲ್ಲಿ ಅಜೇಯ 64 ರನ್ ಗಳಿಸಿದರು. ಟ್ರಾವಿಸ್ ಹೆಡ್ 32 ರನ್‌ಗಳ ಇನ್ನಿಂಗ್ಸ್ ಆಡಿ ಔಟಾದರು. ಜೋಶ್ ಇಂಗ್ಲಿಸ್ ತಂಡಕ್ಕೆ 12 ರನ್‌ಗಳ ಕೊಡುಗೆ ನೀಡುವ ಮೂಲಕ ತಂಡದ ಗೆಲುವಿಗೆ ಸಹಕರಿಸಿದರು.

ಓಮನ್ ಪರ ಶಕೀಲ್ ಅಹ್ಮದ್ ಒಂದು ವಿಕೆಟ್ ಪಡೆದರು. ಆಸೀಸ್ ಬೌಲರ್ ಆಡಂ ಜಂಪ ಪಂದ್ಯಶ್ರೇಷ್ಠ ಪಡೆದರು.

ಮೈಸೂರಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವು ಕಾರ್ಯಾಚರಣೆ

ಈ ಹಾವಳಿಗೆ ಆರು ತಿಂಗಳ ಜೈಲು ಶಿಕ್ಷೆಯಾಗಬಹುದು

ಮೈಸೂರು, ಫೆ.20(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಪಾರಂಪರಿಕತೆ ಹಾಗೂ ಸೌಂದರ್ಯಕ್ಕೆ ಧಕ್ಕೆಯುಂಟು ಮಾಡುತ್ತಿರುವ ಹಿನ್ನಲೆ ಹಾಗೂ ಸ್ವಚ್ಛ ಸರ್ವೇಕ್ಷಣೆ ಅಂಗವಾಗಿ ನಗರದೆಲ್ಲೆಡೆ ಇರುವ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ತೆರವು ಕಾರ್ಯಾಚರಣೆ ಆರಂಭವಾಗಿದೆ.

ಸಂಘ–ಸಂಸ್ಥೆಗಳು, ಸಂಘಟನೆಗಳು ಹಾಗೂ ಇನ್ನಿತರರು ಮೈಸೂರು ನಗರ ಮತ್ತು ಜಿಲ್ಲೆಯ ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್ ಅಥವಾ ಬ್ಯಾನರ್ ಅಳವಡಿಕೆಗೆ ಅನುಮತಿ ಕಡ್ಡಾಯವಾಗಿದ್ದು, ನಿಗಧಿತ ಅವಧಿ ಮುಕ್ತಾಯದ ನಂತರ ತೆರವುಗೊಳಿಸಬೇಕಾಗಿದೆ. ಇಲ್ಲವಾದಲ್ಲಿ ದಂಡ ವಿಧಿಸಲಾಗುವುದು. ಅಲ್ಲದೆ ಕೂಡಲೇ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ತೆರವುಗೊಳಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರ ಆದೇಶದ ಹಿನ್ನಲೆಯಲ್ಲಿ ನಗರದೆಲ್ಲೆಡೆ ಫ್ಲೆಕ್ ಮತ್ತು ಬ್ಯಾನರ್ ತೆರವು ಕಾರ್ಯಾಚರಣೆ ಚುರುಕುಗೊಂಡಿದೆ.

ನಗರದ ಹೃದಯ ಭಾಗದಲ್ಲಿರುವ ಪ್ರಮುಖ ರಸ್ತೆಗಳು ಸೇರಿದಂತೆ ಶಕ್ತಿನಗರದ ಹೊರ ವರ್ತುಲ ರಸ್ತೆ, ಬನ್ನೂರು ರಸ್ತೆ, ಯರಗನಹಳ್ಳಿಯ ದೇವೇಗೌಡ ವೃತ್ತ ಮತ್ತು ಕುಕ್ಕರಹಳ್ಳಿ ಕೆರೆಯ ಬಳಿಯ ಪ್ರದೇಶಗಳು ಸೇರಿದಂತೆ ಹಲವಾರು ಸ್ಥಳಗಳಲ್ಲಿರುವ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ತೆರವು ಮಾಡಲಾಗುತ್ತಿದೆ. ನಗರ ಪಾಲಿಕೆ ವತಿಯಿಂದ ಫ್ಲೆಕ್ಸ್ ಮತ್ತು ಬ್ಯಾನರ್ ತೆರವು ಮಾಡುವುದಕ್ಕಾಗಿಯೇ ತಂಡಗಳನ್ನು ರಚನೆ ಮಾಡಲಾಗಿದೆ.





ಮೈಸೂರಿನಲ್ಲಿ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ತೆರವು ಮಾಡುತ್ತಿರುವುದನ್ನು ಕಾಣಬಹುದು.

ಅನುಮತಿ ಕಡ್ಡಾಯ: ಕರ್ನಾಟಕ ಬಹಿರಂಗ ಸ್ಥಳಗಳ(ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) (ತಿದ್ದುಪಡಿ) ಅಧಿನಿಯಮ–2020 ಕಲಂ 3 ರನ್ವಯ ಹಾಗೂ ಕರ್ನಾಟಕ ಮುನ್ಸಿಪಲ್ ಆಕ್ಟ್ 1964ರ ಕಲಂ 133 ಮತ್ತು 136 ರನ್ವಯ ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲು ಅನುಮತಿ ಕಡ್ಡಾಯ ಹಾಗೂ ಸಿಮೀತ ಅವಧಿಯ ಬಳಿಕ ಸಂಬಂಧಪಟ್ಟವರೇ ಫ್ಲೆಕ್ಸ್ ಮತ್ತು ಬ್ಯಾನರ್ ತೆರವುಗೊಳಿಸಬೇಕು. ಒಂದು ವೇಳೆ ಉಲ್ಲಂಘನೆಯಾದಲ್ಲಿ ಗರಿಷ್ಠ 6 ತಿಂಗಳ ಸೆರೆವಾಸ ಮತ್ತು 1 ಸಾವಿರ ರೂ. ದಂಡ ವಿಧಿಸಲು ಅವಕಾಶ ಇರಲಿದೆ ಎಂದು ಆದೇಶಿಸಿದ್ದಾರೆ.

ಸೂಚನೆ ನೀಡಿದ್ದೇನೆ: ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಅನಧಿಕೃತ ಫ್ಲೆಕ್ ಮತ್ತು ಬ್ಯಾನರ್ ತೆರವುಗೊಳಿಸುಂತೆ ಸಂಬಂಧ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅದರಂತೆ ಈಗಾಗಲೇ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ತೆರವು ಕಾರ್ಯಾಚರಣೆ ನಡೆಯುತ್ತಿದೆ ಎಂದು 'ಮೈಸೂರು ಮಿತ್ರ'ನಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ತಿಳಿಸಿದರು.

ತಂಡಗಳ ರಚನೆ: ಮೈಸೂರಿನಲ್ಲಿರುವ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ತೆರವು ಮಾಡಲು ಪಾಲಿಕೆ ಅಭಯ ತಂಡ ಸಕ್ರೀಯವಾಗಿ ಕೆಲಸ ಮಾಡುತ್ತಿದೆ. ಸ್ವಚ್ಛ ಸರ್ವೇಕ್ಷಣೆ ದೃಷ್ಟಿಯಿಂದಲೂ ಕೆಲ ತಂಡಗಳನ್ನು ರಚನೆ ಮಾಡಿ ನಗರದ ಸೌಂದರ್ಯಕ್ಕೆ ಧಕ್ಕೆಯನ್ನುಂಟು ಮಾಡುತ್ತಿರುವ ಫ್ಲೆಕ್, ಬ್ಯಾನರ್ ತೆರವು ಮಾಡುತ್ತಿದ್ದೇವೆ ಎಂದು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾಹಿತಿ ನೀಡಿದರು.

ಐಸಿಸಿ ಟಿ20 ವಿಶ್ವಕಪ್–2026: ಇಂದಿನಿಂದ ಸೂಪರ್–8 ಹಣಾಹಣಿ



ಸೂಪರ್–8 ಹಂತಕ್ಕೆ ಅರ್ಹತೆ ಪಡೆದ ತಂಡದ ನಾಯಕರು.

ಮೈಸೂರು, ಫೆ.20(ವಿವಿಹೆಚ್)– 20 ತಂಡಗಳೊಂದಿಗೆ ಶುರುವಾದ ಟಿ20 ವಿಶ್ವಕಪ್ ಟೂರ್ನಿಯಿಂದ ಲೀಗ್ ಹಂತದಲ್ಲಿ 12 ತಂಡಗಳು ಹೊರಬಿದ್ದಿವೆ. ಈ ಹನ್ನೆರಡು ತಂಡಗಳಲ್ಲಿ ಬಲಿಷ್ಠ ಆಸ್ಟ್ರೇಲಿಯಾ, ಅಫ್ಘಾನಿಸ್ತಾನ್ ತಂಡಗಳಿರುವುದು ವಿಶೇಷ. ಇನ್ನುಳಿದಿರುವ 8 ತಂಡಗಳು ಸೂಪರ್–8 ಸುತ್ತಿಗೆ ಪ್ರವೇಶಿಸಿದೆ.

ಸೂಪರ್–8 ಸುತ್ತಿನಲ್ಲಿ ಭಾರತ, ಸೌತ್ ಆಫ್ರಿಕಾ, ನ್ಯೂಜಿಲೆಂಡ್, ಜಿಂಬಾಬ್ವೆ, ಪಾಕಿಸ್ತಾನ್, ವೆಸ್ಟ್ ಇಂಡೀಸ್, ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡಗಳು ಸ್ಥಾನ ಪಡೆದಿದೆ. ಸೂಪರ್–8ಕ್ಕೆ ಅರ್ಹತೆ ಪಡೆದ 8 ತಂಡಗಳನ್ನು ತಲಾ 4 ತಂಡಗಳಂತೆ ಎರಡು ಗುಂಪುಗಳಾಗಿ (ಗ್ರೂಪ್ 1 ಮತ್ತು ಗ್ರೂಪ್ 2) ವಿಂಗಡಿಸಲಾಗಿದೆ.

ಗ್ರೂಪ್–1ರಲ್ಲಿ ಭಾರತ ತಂಡವಿದ್ದು, ಇದೇ ಗುಂಪಿನಲ್ಲಿ ಕಳೆದ ಬಾರಿಯ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಹಾಗೂ ಬಲಿಷ್ಠ ವೆಸ್ಟ್ ಇಂಡೀಸ್ ತಂಡಗಳು ಅರ್ಹತೆ ಗಿಟ್ಟಿಸಿಕೊಂಡಿವೆ. ಜೊತೆಗೆ ಗ್ರೂಪ್–2ರಲ್ಲಿ ಜಂಟಿ ಆತಿಥ್ಯ ವಹಿಸಿರುವ ಶ್ರೀಲಂಕಾ, ಪಾಕಿಸ್ತಾನ, ನ್ಯೂಜಿಲೆಂಡ್ ಹಾಗೂ ಇಂಗ್ಲೆಂಡ್ ತಂಡಗಳಿವೆ.

ಸೂಪರ್–8 ಸ್ವರೂಪ: ಇತ್ತ 8 ತಂಡಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರತಿ ತಂಡವು ತನ್ನ ಗುಂಪಿನಲ್ಲಿರುವ ಉಳಿದ ಮೂರು ತಂಡಗಳೊಂದಿಗೆ ತಲಾ ಒಂದು ಪಂದ್ಯವನ್ನು ಆಡಲಿವೆ. ಅಂದರೆ ಪ್ರತಿ ತಂಡಕ್ಕೆ ಒಟ್ಟು 3 ಪಂದ್ಯಗಳು ಇರುತ್ತವೆ. ಪ್ರತಿ ಗೆಲುವಿಗೆ 2 ಪಾಯಿಂಟ್ಸ್, ಯಾವುದೇ ಫಲಿತಾಂಶ ಬಾರದಿದ್ದರೆ 1 ಪಾಯಿಂಟ್ ಮತ್ತು ಸೋಲಿಗೆ 0 ಪಾಯಿಂಟ್ ನೀಡಲಾಗುತ್ತದೆ. ಪ್ರತಿ ಗುಂಪಿನಲ್ಲಿ ಕನಿಷ್ಟ 2 ಗೆಲುವು ದಾಖಲಿಸಿ ಉತ್ತಮ ರನ್‌ರೇಟ್‌ನೊಂದಿಗೆ ಸೂಪರ್–8ರ ಪ್ರತಿ ಗುಂಪಿನಿಂದ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು (ಒಟ್ಟು 4 ತಂಡಗಳು) ನೇರವಾಗಿ ಸೆಮಿಫೈನಲ್‌ಗೆ ಪ್ರವೇಶಿಸುತ್ತವೆ.

ಸೂಪರ್–8 ವೇಳಾಪಟ್ಟಿ

ಫೆ.21– ನ್ಯೂಜಿಲೆಂಡ್ V/S ಪಾಕಿಸ್ತಾನ (ಕೊಲಂಬೊ) ಸಂಜೆ 7ಕ್ಕೆ
ಫೆ.22– ಮೊದಲ ಪಂದ್ಯ: ಇಂಗ್ಲೆಂಡ್ V/S ಶ್ರೀಲಂಕಾ (ಕ್ಯಾಂಡಿ) ಮಧ್ಯಾಹ್ನ 3ಕ್ಕೆ
ಎರಡನೇ ಪಂದ್ಯ: ಭಾರತ V/S ದಕ್ಷಿಣ ಆಫ್ರಿಕಾ (ಅಹ್ಮದಾಬಾದ್) ಸಂಜೆ 7ಕ್ಕೆ
ಫೆ.23– ವೆಸ್ಟ್ ಇಂಡೀಸ್ V/S ಜಿಂಬಾಬ್ವೆ (ಮುಂಬೈ) ಸಂಜೆ 7ಕ್ಕೆ
ಫೆ.24– ಇಂಗ್ಲೆಂಡ್ V/S ಪಾಕಿಸ್ತಾನ (ಕ್ಯಾಂಡಿ) ಸಂಜೆ 7ಕ್ಕೆ
ಫೆ.25– ನ್ಯೂಜಿಲೆಂಡ್ V/S ಶ್ರೀಲಂಕಾ (ಕೊಲಂಬೊ) ಸಂಜೆ 7ಕ್ಕೆ
ಫೆ.26– ಮೊದಲ ಪಂದ್ಯ: ವೆಸ್ಟ್ ಇಂಡೀಸ್ V/S ದಕ್ಷಿಣ ಆಫ್ರಿಕಾ (ಅಹ್ಮದಾಬಾದ್) ಮಧ್ಯಾಹ್ನ 3ಕ್ಕೆ
ಎರಡನೇ ಪಂದ್ಯ: ಭಾರತ V/S ಜಿಂಬಾಬ್ವೆ (ಚೆನ್ನೈ) ಸಂಜೆ 7ಕ್ಕೆ
ಫೆ.27– ಇಂಗ್ಲೆಂಡ್ V/S ನ್ಯೂಜಿಲೆಂಡ್ (ಕೊಲಂಬೊ) ಸಂಜೆ 7ಕ್ಕೆ
ಫೆ.28– ಶ್ರೀಲಂಕಾ V/S ಪಾಕಿಸ್ತಾನ್ (ಕ್ಯಾಂಡಿ) ಸಂಜೆ 7ಕ್ಕೆ
ಮಾ.1– ಮೊದಲ ಪಂದ್ಯ: ದಕ್ಷಿಣ ಆಫ್ರಿಕಾ V/S ಜಿಂಬಾಬ್ವೆ (ದೆಹಲಿ) ಮಧ್ಯಾಹ್ನ 3ಕ್ಕೆ
ಎರಡನೇ ಪಂದ್ಯ: ಭಾರತ V/S ವೆಸ್ಟ್ ಇಂಡೀಸ್ (ಕೋಲ್ಕೊತ್ತಾ) ಸಂಜೆ 7ಕ್ಕೆ

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಕ್ಕೆ ಎಫ್‌ಐಆರ್: ವಿದ್ಯಾರ್ಥಿಗಳ ಆಕ್ರೋಶ



ಮಾನಸ ಗಂಗೋತ್ರಿ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.20(ವಿವಿಹೆಚ್)– ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಪಟ್ಟಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮೈಸೂರು ವಿವಿ ವಿದ್ಯಾರ್ಥಿಗಳ ಮೇಲೆ ದಾಖಲಾಗಿರುವ ಎಫ್‌ಐಆರ್ ಖಂಡಿಸಿ ನಗರದಲ್ಲಿಂದು ಮೈಸೂರು ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿ ಒಕ್ಕೂಟ ಮೌನ ಪ್ರತಿಭಟನೆ ನಡೆಸಿತು.


ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಮುಂಭಾಗ ಶುಕ್ರವಾರ ಸಂಜೆ ಮೌನ ಪ್ರತಿಭಟನೆ ನಡೆಸಿದರು. ಬಾಯಿಗೆ ಟೇಪ್ ಹಚ್ಚಿಕೊಂಡು ಎಫ್‌ಐಆರ್ ಸರ್ಕಾರದ 6ನೇ ಗ್ಯಾರಂಟಿ ಎಂಬ ಫಲಕಗಳನ್ನು ಹಿಡಿದು ಪ್ರತಿಭಟಿಸಿದರು.

ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ವಿವಿ ಸಂಶೋಧಕರ ಸಂಘದ ಮಾಜಿ ಅಧ್ಯಕ್ಷ ಶಿವ ಶಂಕರ್, ಒಳ ಮೀಸಲಾತಿ ಸಂಬಂಧ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ, ಗುರುವಾರ(ಫೆ.19) ಕೊಳ್ಳೇಗಾಲದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮೈಸೂರು ವಿವಿಯ ಮಾನಸ ಗಂಗೋತ್ರಿ ವಿದ್ಯಾರ್ಥಿಗಳ ಮೇಲೆ ಉದ್ದೇಶಪೂರ್ವಕವಾಗಿ ಎಫ್‌ಐಆರ್ ದಾಖಲಿಸಲಾಗಿದೆ. ಆ ಮೂಲಕ ನಮ್ಮ ಹೋರಾಟವನ್ನು ಹತ್ತಿಕ್ಕಲು ಹುನ್ನಾರ ನಡೆಸಲಾಗಿದೆ ಎಂದು ಕಿಡಿಕಾರಿದರು.

ಒಳ ಮೀಸಲಾತಿಯಲ್ಲಾಗುತ್ತಿರುವ ಅನ್ಯಾಯದ ವಿರುದ್ಧ ಗಂಗೋತ್ರಿ ವಿದ್ಯಾರ್ಥಿಗಳು ಧನಿ ಎತ್ತುವಂತೆ ಎಲ್ಲೆಡೆ ಪ್ರಚಾರ ಮಾಡುತ್ತಿದ್ದಾರೆ. ನಮ್ಮ ಧನಿಯನ್ನು ಹತ್ತಿಕ್ಕಲು ಅಧಿಕಾರ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಆ ಮೂಲಕ ಸರ್ಕಾರ ನಮ್ಮ ಬಲಗೈ ಸಮುದಾಯಕ್ಕೆ 6ನೇ ಗ್ಯಾರಂಟಿ ನೀಡಿದೆ ಎಂದು ಅಸಮಾಧಾನ ಹೊರಹಾಕಿದರು.

ಪ್ರತಿಭಟನೆಯಲ್ಲಿ ಮುತ್ತುರಾಜ್, ಸೂರಿ, ಗೋಪಾಲ್, ಕಾರ್ತಿಕ್ ಮಹದೇವಸ್ವಾಮಿ, ವಿಶ್ವ ಅವಿನಾಶ್, ಸಾಕು ಮಲ್ಲಿಕಾರ್ಜುನ, ರಾಮರಾಜ್, ಗೌತಮ್, ಸಂದೇಶ್, ಮೂರ್ತಿ, ಮಹೇಶ್, ರವಿಕುಮಾರ್ ಇನ್ನಿತರರು ಭಾಗಿಯಾಗಿದ್ದರು.

ಅಶ್ವಾರೋಹಣ ಚಾಂಪಿಯನ್‌ಶಿಪ್‌ನಲ್ಲಿ ಸುರೇಶ್ ಮಳಲಿಗೆ ಬೆಳ್ಳಿ, ಕಂಚಿನ ಪದಕ



'ಕಿಂಗ್ ಪವರ್' ಅಶ್ವದೊಂದಿಗೆ ಅಶ್ವಾರೋಹಿ ದಳದ ಸಿಬ್ಬಂದಿ ಸುರೇಶ್ ಮಳಲಿ

ಮೈಸೂರು, ಫೆ.20(ವಿವಿಹೆಚ್)– ಅಖಿಲ ಭಾರತ ಅಶ್ವಾರೋಹಣ ಚಾಂಪಿಯನ್‌ಶಿಪ್ ಮತ್ತು ಮೌಂಟೆಡ್ ಪೊಲೀಸ್ ಕರ್ತವ್ಯ ಕೂಟ 2025–26ರಲ್ಲಿ ಮೈಸೂರಿನ ಕೆ.ಎಸ್.ಆರ್.ಪಿ ಅಶ್ವಾರೋಹಿ ದಳದ ಸಿಬ್ಬಂದಿ ಸುರೇಶ್ ಮಳಲಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದ್ದಾರೆ.

ಫೆ.15 ರಿಂದ 27 ವರೆಗೆ ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ 44ನೇ ಅಖಿಲ ಭಾರತ ಅಶ್ವಾರೋಹಣ ಚಾಂಪಿಯನ್‌ಶಿಪ್ ಮತ್ತು ಮೌಂಟೆಡ್ ಪೊಲೀಸ್ ಕರ್ತವ್ಯ ಕೂಟ 2025–26ರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ನಗರ ಘಟಕವನ್ನು ಪ್ರತಿನಿಧಿಸಿದ್ದು, ಸ್ಲೋ ಜಂಪಿಂಗ್ ಗ್ರೇಡ್–3 ಹಾಗೂ ಸಿಕ್ಸ್ ಬಾರ್ 9 ಬಾರ್ ಜಂಪಿಂಗ್ ಸ್ಪರ್ಧೆಯಲ್ಲಿ ಸುರೇಶ್ ಮಳಲಿ ಬೆಳ್ಳಿ ಮತ್ತು ಕಂಚಿನ ಪದಕ ಗೆದಿದ್ದಾರೆ. ಆ ಮೂಲಕ ಮೈಸೂರು ನಗರ ಪೊಲೀಸ್ ಇಲಾಖೆಗೆ ಕೀರ್ತಿ ತಂದಿದ್ದಾರೆ.

ಜೊತೆಗೆ ಅಶ್ವಾರೋಹಣ ಕ್ವಾಡ್ರಿಲ್ ಸ್ಪರ್ಧೆಯಲ್ಲಿ ಡಿ.ಸಾಸನೂರ, ಚಂದ್ರ, ಮಹೇಶ ಮತ್ತು ಸುರೇಶ್ ಮಳಲಿ, ಶೋ ಜಂಪ್ ಪ್ರಿಲಿಮಿನರಿ–ನಾರ್ಮಲ್ ಸ್ಪರ್ಧೆಯಲ್ಲಿ ಎಂ.ಆರ್.ಸಂದೇಶ, ಕೆ.ಟಿ.ಜಯಪ್ರಕಾಶ್ 4ನೇ ಸ್ಥಾನ ಪಡೆದು ಕನ್ಸೋಲೇಟೆಡ್ ಸರ್ಟಿಫಿಕೇಟ್ ಪಡೆದಿದ್ದಾರೆ.

ರಾಷ್ಟ್ರಮಟ್ಟದ ಕರ್ತವ್ಯ ಕೂಟದಲ್ಲಿ ಉತ್ತಮ ಸಾಧನೆ ತೋರುತ್ತಾ ಮೈಸೂರಿಗೆ ಕೀರ್ತಿ ತಂದ ಸ್ಪರ್ಧಿಗಳನ್ನು ಮೈಸೂರು ನಗರ ಪೊಲೀಸ್ ಆಯುಕ್ತರು ಹಾಗೂ ಮೌಂಟೆಡ್ ಕಂಪನಿಯ ಉಪ ಪೊಲೀಸ್ ಆಯುಕ್ತರು ಅಭಿನಂದಿಸಿದ್ದಾರೆ.

ಹೆಬ್ಬಾಳಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಾರ್ಷಿಕೋತ್ಸವ



ಮೈಸೂರು, ಫೆ20–ಮೈಸೂರಿನ ಹೆಬ್ಬಾಳ (ಕುಂಬಾರಕೊಪ್ಪಲು)ನ ಉನ್ನತಿಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಶಾಲಾ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಶಾಸಕ ಹರೀಶ್ ಗೌಡರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಶಾಲೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಶಾಲೆಯ ಪ್ರಗತಿಗೆ ಕಾರಣರಾಗಿರುವ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರನ್ನು ಅಭಿನಂದಿಸಿದರಲ್ಲದೆ ಅತಿ ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳನ್ನು ಹೊಂದಿರುವ ಮಾದರಿ ಶಾಲೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲರಾದ ನಾಗರಾಜಯ್ಯ ಮಾತನಾಡಿ, ಶಾಲೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಹೊರರಾಜ್ಯ ಮತ್ತು ಹೊರ ದೇಶದ ಶಿಕ್ಷಕರು ಶಾಲೆಗೆ ಭೇಟಿ ನೀಡಿ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು ಪ್ರಶಂಸನೀಯ ಎಂದು ತಿಳಿಸಿದರು.

ಮೈಸೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಶಿಕ್ಷಕರಾದ ಲೋಹಿತೇಶ್.ವೈ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಗ್ರೀನ್ ಸಿಟಿ ಸಂಸ್ಥಾಪಕ ಅಧ್ಯಕ್ಷ ಲಯನ್ ಜಯಕುಮಾರ್. ಪ್ರತಿಷ್ಠಿತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಆದಿತ್ಯ, ಲಯನ್ ಸಂಸ್ಥೆಯ ಅಧ್ಯಕ್ಷರು ಹಾಗೂ ಮೈಸೂರು ಕೈಗಾರಿಕಾ ಸಂಘದ ಅಧ್ಯಕ್ಷರು ಆದ ಲಯನ್ ಕೆ ಬಿ ಲಿಂಗರಾಜು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ನೃತ್ಯ ನಾಟಕ, ಕರಾಟೆ ಮತ್ತು ಯೋಗ ಪ್ರದರ್ಶನಗಳ ಮೂಲಕ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ಮೆರಗನ್ನು ಹೆಚ್ಚಿಸಿದರು.

ವಿಶಿಷ್ಟ 'ಪದ–ಜನಪದ' ಕಾರ್ಯಕ್ರಮ

ಮೈಸೂರು, ಫೆ20(ಎಸ್‌ಪಿಎನ್)–ಭಾರತ ಜಾನಪದ ಕಲೆಗಳ ತವರೂರು. ಇಲ್ಲಿ ಹಲವು ಭಾಷೆ, ವೈವಿಧ್ಯಮಯ ಸಂಸ್ಕೃತಿಗಳಿವೆ. ಇವೆಲ್ಲದಕ್ಕೂ ಜಾನಪದ ತಾಯಿ ಬೇರಿದ್ದಂತೆ ಎಂದು ಹಿರಿಯ ಜಾನಪದ ಗಾಯಕ ಡಾ.ಅಮ್ಮ ರಾಮಚಂದ್ರ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಚಿಂತಕರ ಚಾವಡಿಯಲ್ಲಿ ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಆಯೋಜಿಸಿದ್ದ 'ಪದ–ಜನಪದ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಜಾನಪದ ಗೀತೆಗಳನ್ನು ದೇಶದ 18 ರಾಜ್ಯಗಳಲ್ಲಿ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ವಿವಿಧ ವೇದಿಕೆಗಳಲ್ಲಿ ಭಾಗವಹಿಸಿ ಪ್ರಸ್ತುತ ಪಡಿಸಿದ್ದೇನೆ. ಇವೆಲ್ಲಾ ವೇದಿಕೆಗಳಲ್ಲೂ ನನಗೆ ಗೌರವ ತಂದುಕೊಟ್ಟಿದ್ದು, ಜಾನಪದ ಕ್ಷೇತ್ರ ಎಂದರು. ಕಾರ್ಯಕ್ರಮದಲ್ಲಿ ಹಿರಿಯ ಜಾನಪದ ಗಾಯಕ ದೇವಾನಂದ ವರಪ್ರಸಾದ್ ಸೇರಿದಂತೆ ಇತರೆ ಜಾನಪದ ಕಲಾವಿದರು ಮತ್ತು ಶಿಬಿರಾರ್ಥಿಗಳು ಭಾಗವಹಿಸಿದ್ದರು.



'ಪದ–ಜನಪದ' ಕಾರ್ಯಕ್ರಮದಲ್ಲಿ ಜನಪದ ಗಾಯಕ ಡಾ.ಅಮ್ಮ ರಾಮಚಂದ್ರ ಮಾತನಾಡಿದರು.

ಮಾದಕ ವಸ್ತು ಸೇವನೆ ದುಷ್ಪರಿಣಾಮ ಕುರಿತಾಗಿ 'ಬೀದಿ ನಾಟಕ'

ಮೈಸೂರಲ್ಲಿ ಗಾಂಜಾ, ಡ್ರಗ್ಸ್ ಹತ್ತಿಕ್ಕಲು ವಿಮುಕ್ತಿ ಟೋಲ್ ಫ್ರೀ ವ್ಯವಸ್ಥೆ: ಡಿಸಿಪಿ ಸುಂದರ ರಾಜ್



ಮಾದಕ ದ್ರವ್ಯಗಳ ನಿರ್ಮೂಲನೆ ಹಾಗೂ ಅದರ ಸೇವನೆಯಿಂದ ಆಗುವ ಅನಾಹುತಗಳ ಕುರಿತ 'ಬೀದಿ ನಾಟಕ' ಕಾರ್ಯಕ್ರಮ ಮೈಸೂರು ನಗರ ಉಪ ಪೊಲೀಸ್ ಆಯುಕ್ತ ಕೆ.ಎಸ್.ಸುಂದರ ರಾಜ್ ಉದ್ಘಾಟಿಸಿದರು.

ಮೈಸೂರು, ಫೆ.20(ವಿವಿಹೆಚ್)– ಇಂದಿನ ಮಕ್ಕಳು, ಯುವ ಪೀಳಿಗೆ ಡ್ರಗ್ಸ್, ಮಾದಕ ವ್ಯಸನಗಳಿಗೆ ಬಲಿಯಾದಲ್ಲಿ ಅವರ ಭವಿಷ್ಯ ಹಾಳಾಗುವುದಲ್ಲದೇ, ಇಡೀ ಕುಟುಂಬವೇ ಇದಕ್ಕೆ ಹೊಣೆಯಾಗಬೇಕಾಗುತ್ತದೆ ಎಂದು ಮೈಸೂರು ನಗರ ಉಪ ಪೊಲೀಸ್ ಆಯುಕ್ತ ಕೆ.ಎಸ್.ಸುಂದರ ರಾಜ್ ಅಭಿಪ್ರಾಯಪಟ್ಟರು.

ಗಂಧದ ಗುಡಿ ಫೌಂಡೇಶನ್ ಹಾಗೂ ನೇಪಥ್ಯ ರಂಗ ತಂಡ ವತಿಯಿಂದ ನಗರದ ಚಿಕ್ಕಗಡಿಯಾರ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಮಾದಕ ದ್ರವ್ಯಗಳ ನಿರ್ಮೂಲನೆ ಹಾಗೂ ಅದರ ಸೇವನೆಯಿಂದ ಆಗುವ ಅನಾಹುತಗಳ ಕುರಿತ 'ಬೀದಿ ನಾಟಕ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಗರದಾದ್ಯಂತ ಮಾದಕ ವಸ್ತುಗಳ ವಿರುದ್ಧ ಪೊಲೀಸ್ ಇಲಾಖೆ ಎಲ್ಲಾ ಕಾನೂನು ಹೋರಾಟಗಳನ್ನು ಮಾಡುತ್ತಿದೆ. ಮೈಸೂರಿನಲ್ಲಿ ನಡೆಯುವ ಗಾಂಜಾ, ಡ್ರಗ್ಸ್ ಹತ್ತಿಕ್ಕಲು ವಿಮುಕ್ತಿ ಟೋಲ್ ಫ್ರೀ ವ್ಯವಸ್ಥೆ ಮಾಡಲಾಗಿದೆ. ಸಾಮಾಜಿಕವಾಗಿ ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಬೇಕಿದೆ ಎಂದರು.

ಮಾದಕವಸ್ತು ಉಪಯೋಗಿಸುವ ವ್ಯಕ್ತಿ, ಆತನ ಕುಟುಂಬ ಮಾತ್ರವಲ್ಲದೇ ಇಡೀ ಸಮಾಜಕ್ಕೆ ಮಾರಕವಾಗುತ್ತಾನೆ. ಅದರಿಂದ ಇತರರಿಗೆ ಕೆಟ್ಟ ಸಂದೇಶ ಹೋಗುತ್ತದೆ. ಇದನ್ನು ತಡೆದು, ಮೈಸೂರನ್ನು ನಾವು ಸೇಫ್ ಮೈಸೂರು ಮಾಡಬೇಕಾದಲ್ಲಿ ಡ್ರಗ್ಸ್ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಯುವ ಪೀಳಿಗೆ ಇಂತಹ ಮಾರಕ ವಿಚಾರಗಳಿಂದ ದೂರ ಉಳಿಯಬೇಕೆಂದು ಸ್ವಯಂ ಪಣ ತೊಡಬೇಕು. ಯಾರೂ ಈ ದುಶ್ಚಟಗಳಿಗೆ ಬಲಿಯಾಗಬೇಡಿ. ಮೈಸೂರನ್ನು ಡ್ರಗ್ಸ್ ಮುಕ್ತ ನಗರವನ್ನಾಗಿ ಮಾಡೋಣ ಎಂದರು.

ಮಾದಕ ಮುಕ್ತ ಮೈಸೂರಿನತ್ತ ಒಂದು ಹೆಜ್ಜೆ ಘೋಷವಾಕ್ಯದಡಿಯಲ್ಲಿ ಚಿಕ್ಕ ಗಡಿಯಾರ ಮುಂಭಾಗದಲ್ಲಿ ಬೀದಿ ನಾಟಕ ಪ್ರದರ್ಶನ ಮಾಡುವುದಾಗಿ ಈ ಎರಡು ತಂಡಗಳು ಮುಂದೆ ಬಂದವು. ಸಾಮಾಜಿಕ ಪಿಡುಗಿನ ವಿರುದ್ಧ ನಾಟಕ ರೂಪದಲ್ಲಿ ಧನಿ ಎತ್ತುವುದಕ್ಕೆ ಇಲಾಖೆಯ ಸಂಪೂರ್ಣ ಸಹಕಾರವಿದ್ದು, ಕಾರ್ಯಕ್ರಮಕ್ಕೆ ಯಶಸ್ಸು ಸಿಗಲೆಂದು ಕೋರುತ್ತೇನೆ ಎಂದರು.

ಬಳಿಕ ಗಂಧದ ಗುಡಿ ಫೌಂಡೇಶನ್ ಹಾಗೂ ನೇಪಥ್ಯ ರಂಗ ತಂಡ ವತಿಯಿಂದ ಬೀದಿ ನಾಟಕ ಪ್ರದರ್ಶನಗೊಂಡಿತು.

ದೇವರಾಜ ಸಂಚಾರ ಠಾಣಾ ಇನ್ಸ್‌ಪೆಕ್ಟರ್ ಮಮತಾ, ಪಿಐ ರಘು, ಎಂ.ಎಂ.ನಿಖಿಲೇಶ್, ನೆನಪಿನ ನಾವಿಕ ಪ್ರದೀಪ್, ಆರ್ಯನ್ ಗಂಧದ ಗುಡಿ, ಸಮಾಜ ಸೇವಕಿ ವಿದ್ಯಾ, ಗೌತಮ್ ವಿರಾಜ್, ಆರ್.ಯಶೋಧ, ಮಹದೇವ್ ಶೆಟ್ಟಿ, ಭಾರ್ಗವಿ, ಗಣೇಶ್, ಸಾಗರ್, ವಿಜಯ್ ಉಪಸ್ಥಿತರಿದ್ದರು.

ಕಲಬೆರಕೆ, ಕೀಟನಾಶಕ ಬಳಕೆಯಿಂದ ಆಹಾರ ಈಗ ಸುರಕ್ಷಿತವಾಗಿಲ್ಲ

ಎಂಜಿಪಿ ಸಂಸ್ಥಾಪಕ ಕಾರ್ಯಾಧ್ಯಕ್ಷ ಬಾಮೀ ವಿ.ಶೆಣೈ ಆತಂಕ



ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಎಂಜಿಪಿ ಸಂಸ್ಥಾಪಕ ಕಾರ್ಯಾಧ್ಯಕ್ಷ ಬಾಮೀ ವಿ.ಶೆಣೈ ಮಾತನಾಡುತ್ತಿರುವುದು.

ಮೈಸೂರು, ಫೆ.20(ಎಸ್‌ಪಿಎನ್)– ನಮ್ಮ ದೈನಂದಿನ ಆಹಾರ ಉತ್ಪನ್ನಗಳ ಬಳಕೆಯಲ್ಲಿ ಕಲಬೆರಕೆ ಇಲ್ಲವೇ ಕೀಟನಾಶಕಗಳ ಅತೀಯಾದ ಬಳಕೆಯಿಂದ ಸೇವಿಸಲು ಯೋಗ್ಯವಾಗಿಲ್ಲ ಎಂದು ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಕಾರ್ಯಾಧ್ಯಕ್ಷ ಬಾಮೀ ವಿ.ಶೆಣೈ ಬೇಸರ ವ್ಯಕ್ತಪಡಿಸಿದರು.

ಮೈಸೂರು ಆರ್ಕಿಡ್ಸ್ ಪಬ್ಲಿಕ್ ಶಾಲೆಯಲ್ಲಿ ಮೈಸೂರು ಗ್ರಾಹಕ ಪರಿಷತ್ ಮತ್ತು ಆರ್ಕಿಡ್ಸ್ ಪಬ್ಲಿಕ್ ಶಾಲೆ ಸಹ ಯೋಗದೊಂದಿಗೆ ಏರ್ಪಡಿಸಿದ್ದ ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ(WCRD) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆರ್ಕಿಡ್ಸ್ ಪಬ್ಲಿಕ್ ಶಾಲೆಯಲ್ಲಿ ಆಹಾರ ಸುರಕ್ಷತೆ ಮತ್ತು ಕಲಬೆರಕೆ ಜಾಗೃತಿ ಕಾರ್ಯಕ್ರಮದ ಮೂಲಕ ಗಂಭೀರ ವಿಚಾರವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಪ್ರತಿ ವರ್ಷ ಮಾ.15ರಂದು ಜಗತ್ತಿನ ನಾನಾ ದೇಶಗಳು ವಿಶ್ವ ಗ್ರಾಹಕ ಹಕ್ಕುಗಳ ದಿನ ಆಚರಿಸುತ್ತಿವೆ. ಈ ಮೂಲಕ ಗ್ರಾಹಕರ ಹಕ್ಕು ಮತ್ತು ಜವಾಬ್ದಾರಿಗಳ ಬಗ್ಗೆ ಪರಿಚಯಿಸುತ್ತಿವೆ. ಈ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು ಶಿಕ್ಷಕರು, ಸಂಬಂಧಪಟ್ಟ ತಜ್ಞರ ಕರ್ತವ್ಯ ಎಂದ ಅವರು, ಇತ್ತೀಚಿನ ವ್ಯವಸಾಯ ಪದ್ಧತಿಯಲ್ಲಿ ಕೀಟನಾಶಕ ಅತಿಯಾಗಿ ಬಳಕೆಯಾಗುತ್ತಿರುವುದರಿಂದ ಕೆಲ ತರಕಾರಿಗಳನ್ನು ಸೇವಿಸುವುದನ್ನೇ ನಾನು ಬಿಟ್ಟಿದ್ದೇನೆ ಎಂದರು.

ಬಳಿಕ ಎಂಜಿಪಿ ಖಜಾಂಚಿ ರವಿಬಳೆ ಮಾತನಾಡಿ, ದೈನಂದಿನ ಅಡುಗೆ ಪದಾರ್ಥಗಳಲ್ಲಿ ಕಲಬೆರಕೆ ಆಗಿರುವುದನ್ನು ಪ್ರಾಯೋಗಿಕ ಪರೀಕ್ಷೆಗಳ ತೋರಿಸಿಕೊಟ್ಟರು. ಅಲ್ಲದೆ, ಬೆಣ್ಣೆ, ಅಡುಗೆ ಎಣ್ಣೆ, ಚಹಾ, ಬೇಳೆ, ರಾಗಿ, ಇತ್ಯಾದಿ ಪದಾರ್ಥಗಳ ಕಲಬೆರಕೆಯನ್ನು ಮನೆಯಲ್ಲಿ ಹೇಗೆ ಪತ್ತೆ ಹಚ್ಚಬಹುದು ಎಂಬುದನ್ನು ಸ್ವವಿವರವಾಗಿ ತೋರಿಸಿಕೊಟ್ಟರಲ್ಲದೆ, ಆಹಾರ ಪದಾರ್ಥಗಳ ಸುರಕ್ಷತೆ ಹಾಗೂ ಖರೀದಿಸುವಾಗ ಎಫ್‌ಎಸ್‌ಎಸ್‌ಎಐ ಲೇಬಲ್ ಪರೀಕ್ಷಿಸುವ ಅಗತ್ಯತೆ ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

ತದನಂತರ ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರದ ತಂಡದ ತಜ್ಞರಾದ ಡಾ. ರವೀಂದ್ರ ಡಾ. ಯಶವಂತ್ ಮತ್ತು ದೀಪಿಕಾ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ಕಲಬೆರಕೆಯನ್ನು ಗುರುತಿಸುವ ಸರಳ ವಿಧಾನಗಳನ್ನು ಪರಿಚಯಿಸಿದರು. ಈ ವೇಳೆ ಆರ್ಕಿಡ್ಸ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಉಲ್ಲಾಸ್ ಪಂಡಿತ್ ಸೇರಿದಂತೆ ಬೋಧಕ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಗ್ರಾಹಕ ಹಕ್ಕುಗಳ ಶಾಲಾ ವಿದ್ಯಾರ್ಥಿಗಳೊಂದಿಗೆ ಸಂವಾದ ಜರುಗಿತು.

ವಿದ್ಯಾರ್ಥಿಗಳಿಗೆ ಭಗವದ್ಗೀತೆ ಬೋಧಿಸಿ ಸಂಸ್ಕೃತಿ ಉಳಿಸಬೇಕಿದೆ : ಹೆಚ್‌ಡಿಕೆ

ನಾಗಮಂಗಲ, ಫೆ20– ವಿಜ್ಞಾನ ತಂತ್ರ ಜ್ಞಾನ ಯುಗದಲ್ಲೂ ವಿದ್ಯಾರ್ಥಿ ಗಳಿಗೆ ಭಗವದ್ಗೀತೆಯನ್ನು ಕಲಿಸಿ ಸಂಸ್ಕೃತಿಯನ್ನು ಉಳಿಸುವ ಕಾಯಕವಾಗ ಬೇಕಿದೆ ಎಂದು ಕೇಂದ್ರ ಸಚಿವ ಹೆಚ್‌ಡಿ ಕುಮಾರ ಸ್ವಾಮಿ ಅಭಿಪ್ರಾಯ ಪಟ್ಟಿದ್ದಾರೆ.

ಆದಿಚುಂಚನಗಿರಿ ಕ್ಷೇತ್ರದ ಬಿಜಿಎಸ್ ಸಭಾ ಭವನದಲ್ಲಿ ಆದಿಚುಂಚನಗಿರಿ ಶ್ರೀಗಳ ವಾರ್ಷಿಕ ಪಟ್ಟಾಭಿಷೇಕ ಹಾಗೂ 'ವಿಜ್ಞಾತಂ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಹೆಚ್‌ಎಂಟಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಯೋಜನೆಯಿದೆ. ಜಿಲ್ಲೆಯಿಂದ ಚುನಾಯಿತವಾಗಿರುವ ನಾನು ಜಿಲ್ಲೆಗೆ ಎರಡು ಹೊಸ ಕಾರ್ಖಾನೆಗಳನ್ನು ಸ್ಥಾಪಿಸಿ, ಜಿಲ್ಲೆಯ ಜನರ ಋಣ ತೀರಿಸುವ ಇಂಗಿತವನ್ನು ಪರಮ ಪೂಜ್ಯರ ಸಮ್ಮುಖದಲ್ಲಿ ಘೋಷಿಸುತ್ತಿದ್ದೇನೆ. ಜನರ ನಂಬಿಕೆಯನ್ನು ಹುಸಿಗೊಳಿಸುವುದಿಲ್ಲ ಎಂದು ಹೇಳಿಕೊಂಡರು

ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಮಾತನಾಡಿ ಆಧ್ಯಾತ್ಮಿಕ ಧಾರ್ಮಿಕ ನೆಲೆಗಟ್ಟಿನ ಮಠವಾದರೂ ವಿಜ್ಞಾನ ತಂತ್ರಜ್ಞಾನದ ಹೊಸ ಆವಿಷ್ಕಾರಗಳಿಗೆ ಪೂರಕ ಶಕ್ತಿಯಾಗಿ ನಿಂತು ಆಯೋಜಿಸಿರುವ ಇಂತಹ ಕಾರ್ಯಕ್ರಮಗಳು ಬೇರೆ ಯಾವುದೇ ಮಠಗಳಿಂದಲೂ ಸಾಧ್ಯವಾಗುತ್ತಿಲ್ಲ. ಶ್ರೀಮಠ ದೇಶದ ಎಲ್ಲಾ ಕ್ಷೇತ್ರಗಳಲ್ಲೂ ಜನಪರ ಸೇವಾ ಕಾರ್ಯಗಳನ್ನು ಮಾಡುತ್ತಿದೆ. ಇದಕ್ಕೆ ಕಾರಣ ಬಾಲಗಂಗಾಧರನಾಥ ಸ್ವಾಮೀಜಿಯುವರ ಬೃಹತ್ ಸಂಕಲ್ಪ ಶಕ್ತಿಯೇ ಚೈತನ್ಯ ಶಕ್ತಿಯಾಗಿ ಮಾಡಿಸುತ್ತಿದೆ. ಎಂದು ಹೇಳಿದರು.



ಆದಿಚುಂಚನಗಿರಿ ಶ್ರೀಗಳ ವಾರ್ಷಿಕ ಪಟ್ಟಾಭಿಷೇಕದಲ್ಲಿ ವಿಜ್ಞಾತಂ ಸಂಚಯ' ಪುಸ್ತಕವನ್ನು ಗಣ್ಯರು ಬಿಡುಗಡೆ ಮಾಡಿದರು.

5 ಲಕ್ಷ ನಗದು, ಪ್ರಶಸ್ತಿ ಫಲಕವನ್ನೊಳಗೊಂಡ ಪ್ರತಿಷ್ಠಿತ ವಿಜ್ಞಾತಂ ಪ್ರಶಸ್ತಿ ಸ್ವೀಕರಿಸಿದ ಹಿರಿಯ ವಿಜ್ಞಾನಿ ಡಾ ಎಂ ಕೆ ಸೂರಪ್ಪ ಮಾತನಾಡಿ ದೇಶಾದ್ಯಂತ ಹಲವು ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿ ಪಡೆದ ದೊಡ್ಡ ದೊಡ್ಡ ಪ್ರಶಸ್ತಿಗಳಿಗಿಂತಲೂ ಶ್ರೀಗಳು ನೀಡಿದ ವಿಜ್ಞಾತಂ ಪ್ರಶಸ್ತಿ ನನ್ನ ಜೀವನದ ಬಹು ದೊಡ್ಡ ಮೈಲಿಗಲ್ಲು. ಎಂದು ಅವರು ನುಡಿದರು

ಸಚಿವ ಕೆ.ಹೆಚ್.ಮುನಿಯಪ್ಪ ಮಾತನಾಡಿ, ಬಾಲಗಂಗಾಧರನಾಥ ಸ್ವಾಮೀಜಿಯವರ ಚಿಂತನೆಗಳನ್ನು ನಿರ್ಮಲಾನಂದನಾಥ ಶ್ರೀಗಳು ಸಾಕಾರಗೊಳಿಸಿ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಶ್ರೀಗಳ ದೂರದೃಷ್ಟಿ ವ್ಯಕ್ತಿತ್ವ ಹಾಗೂ ಸಂಕಲ್ಪಶಕ್ತಿಯಿಂದ ಇಂದು 1.75 ಲಕ್ಷ ವಿದ್ಯಾರ್ಥಿಗಳು ಜ್ಞಾನ ದಾಸೋಹವನ್ನು ಪಡೆಯುತ್ತಿದ್ದಾರೆ. ಎಲ್ಲ ಜಾತಿ ಧರ್ಮದ ಮಕ್ಕಳಿಗೆ ಆಶ್ರಯವನ್ನು ನೀಡುತ್ತಿರುವ ಶ್ರೀಗಳು ಸ್ವತಹ ವಿಜ್ಞಾನಿ ತತ್ವಜ್ಞಾನಿ ಅಧ್ಯಾತ್ಮ ಚಿಂತಕರು ಆಗಿ ಮುನ್ನಡೆಸುತ್ತಿದ್ದಾರೆ. ರಸ್ತೆಗಳು ಮತ್ತು ರೈಲ್ವೆ ಸುಗಮವಾದರೆ ರೈತರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಸಚಿವನಾಗಿ ಶ್ರೀಮಠದೊಂದಿಗೆ ಕೈಜೋಡಿಸಲು ಸದಾ ಸಿದ್ಧನಿದ್ದೇನೆ ಎಂದರು. ಚಿತ್ರದುರ್ಗದ ಬಸವ ಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

'ವಿಜ್ಞಾತಂ ಸಂಚಯ' ಪುಸ್ತಕ ಬಿಡುಗಡೆ ಮಾಡಿದ ಮಾಜಿ ಮುಖ್ಯಮಂತ್ರಿ ಡಿ ವಿ ಸದಾನಂದಗೌಡ ವೇಗವಾಗಿ ಬೆಳೆಯುತ್ತಿರುವ ಜಗತ್ತು ತಂತ್ರಜ್ಞಾನ ಆಧಾರಿತವಾಗಿ ಬದುಕು ಯಾಂತ್ರಿಕವಾಗುತ್ತಿದೆ. ಇದರಿಂದ ಮಾರಕವೂ ಇದೆ, ಯುವಶಕ್ತಿಯನ್ನು ಉತ್ತಮ ದಿಕ್ಕಿಗೆ ತಯಾರು ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕೃತಕ ಬುದ್ಧಿಮತ್ತೆಯು ಹೀಗೆ ಮುಂದುವರೆದರೆ ಜಗತ್ತಿಗೆ ಮಾರಕವೇ ಸರಿ ಎಂದು ಅಭಿಪ್ರಾಯಪಟ್ಟರು.

ಪಟ್ಟಾಭಿಷೇಕ ಮಹೋತ್ಸವ ಹಾಗೂ ವಿಜ್ಞಾತಂ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪಟ್ಟಾಭಿಷೇಕ ಹಾಗೂ ವಿಜ್ಞಾತಂ ಉತ್ಸವದ ಪ್ರಯುಕ್ತ ಐದು ವಿಭಾಗಗಳಲ್ಲಿ ಆಯೋಜಿಸಿದ್ದ ವಿಜ್ಞಾನ ತಂತ್ರಜ್ಞಾನ ವಸ್ತು ಪ್ರದರ್ಶನ ಮತ್ತು ನೃತ್ಯಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಅಮೇರಿಕಾದ ಬಾಬು ಕೀಲಾರ, ಅಕ್ಕ ಸಮ್ಮೇಳನದ ರೂವಾರಿ ಡಾ. ಅಮರನಾಥ ಗೌಡ, ಶ್ರೀಮಠದ ಪುರುಷೋತ್ತಮಾನಂದನಾಥ ಸ್ವಾಮೀಜಿ, ಶಂಭುನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಮಂಗಳನಾಥ ಸ್ವಾಮೀಜಿ ಸೇರಿದಂತೆ ಎಲ್ಲಾ ಶಾಖಾ ಮಠಗಳ ಪೂಜ್ಯರು, ಗೋಸಾಯಿ ಮಠದ ಮಂಜುನಾಥ ಭಾರತಿ ಸ್ವಾಮೀಜಿ, ಮಾಜಿ ಶಾಸಕ ಕೆ ಸುರೇಶ ಗೌಡ, ಶಾಸಕ ಹೆಚ್ ಟಿ ಮಂಜು, ಪ್ರೊ. ಎಂ ಕೃಷ್ಣೇಗೌಡ, ವಿವಿಧ ವಿಶ್ವವಿದ್ಯಾಲಯಗಳ ಅಧಿಕಾರಿಗಳಿದ್ದರು.

ಜಿಲ್ಲಾ ನ್ಯಾಯಾಲಯ ಆರಂಭಕ್ಕೆ ಒತ್ತಾಯಿಸಿ ವಕೀಲರ ಪ್ರತಿಭಟನೆ



ಜಿಲ್ಲಾ ಅಪರ ಮತ್ತು ಸತ್ರ ನ್ಯಾಯಾಲಯದ ಆರಂಭಕ್ಕೆ ಒತ್ತಾಯಿಸಿ ವಕೀಲರ ಹೋರಾಟವನ್ನು ಬೆಂಬಲಿಸಿ ಶಾಸಕ ಹೆಚ್.ಟಿ.ಮಂಜು ಭಾಗವಹಿಸಿದ್ದರು

ಕೆ.ಆರ್.ಪೇಟೆ,ಫೆ.20–ಪಟ್ಟಣದಲ್ಲಿ 6ನೇ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಮ್.ಆರ್. ನಾಗೇಗೌಡ, ಪ್ರಧಾನ ಕಾರ್ಯದರ್ಶಿ ಮಂಜೇಗೌಡ, ಉಪಾಧ್ಯಕ್ಷ ಪುರುಷೋತ್ತಮ್ ನೇತೃತ್ವದಲ್ಲಿ ನೂರಾರು ವಕೀಲರು ಇಂದು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ತಾಲೂಕು ವ್ಯಾಪ್ತಿಯಲ್ಲಿ ಸಾವಿರಾರು ಪ್ರಕರಣಗಳಿದ್ದು, ಪಟ್ಟಣದಲ್ಲಿ ಆರನೇ ಸತ್ರ ಜಿಲ್ಲಾ ನ್ಯಾಯಾಲಯ ಇಲ್ಲದೇ ಇರುವುದರಿಂದ ವಕೀಲರು ಹಾಗೂ ಕಕ್ಷಿದಾರರು ಅನಿವಾರ್ಯವಾಗಿ ಮಂಡ್ಯಕ್ಕೆ ಹೋಗುವ ಪರಿಸ್ಥಿತಿ ಎದುರಾಗಿದೆ. ಕೆ.ಆರ್.ಪೇಟೆಯಲ್ಲಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ರಾಜ್ಯ ಉಚ್ಚ ನ್ಯಾಯಾ ಲಯಕ್ಕೆ ಕಾನೂನು ಸಚಿವರಿಗೆ ಹಾಗೂ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ ಯಾವುದೇ ಪ್ರಯೋಜನವಾಗಿಲ್ಲ ಆದ್ದರಿಂದ ಅನಿವಾರ್ಯವಾಗಿ ಹೋರಾಟದ ದಾರಿ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ನಾಗೇಗೌಡ ಹೇಳಿದರು.

ವಕೀಲರ ಹೋರಾಟಕ್ಕೆ ಬೆಂಬಲ ಸೂಚಿಸಿ ಶಾಸಕ ಹೆಚ್.ಟಿ. ಮಂಜು ನ್ಯಾಯಾಲಯದ ಆವರಣದಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ವಕೀಲರ ಸಂಘದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಮಾ. 6ರಿಂದ ಬಜೆಟ್ ಅಧಿವೇಶನವು ಆರಂಭವಾಗುತ್ತಿದೆ. ಈ ಅಧಿವೇಶನದಲ್ಲಿಯೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ ಸ್ಥಾಪಿಸುವ ಬಗ್ಗೆ ಸರ್ಕಾರದ ಸೆಳೆದು ಶೀಘ್ರವೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಮಂಜೂರು ಮಾಡುವಂತೆ ಒತ್ತಾಯಿಸುತ್ತೇನೆ ಎಂದರು.

ಸಂಘದ ಮಾಜಿ ಅಧ್ಯಕ್ಷ ಎನ್. ಆರ್. ರವಿಶಂಕರ್ ಸಾಧುಗೋನಹಳ್ಳಿ ಮಂಜೇಗೌಡ, ಹಿರಿಯ ವಕೀಲರಾದ ಬಿ.ಎಲ್. ದೇವರಾಜು, ಎಸ್.ಸಿ. ವಿಜಯಕುಮಾರ್, ಜಿ.ಆರ್.ಅನಂತ ರಾಮಯ್ಯ, ಎಂ.ಆರ್. ಪ್ರಸನ್ನಕುಮಾರ್, ಹೆಚ್.ರವಿ, ಬಂಡಿಹೊಳೆ ಗಣೇಶ್, ಕೆ. ರಾಮೇಗೌಡ, ಗಂಜಿಗೆರೆ ಜಿ.ಜೆ. ಲೋಕೇಶ್, ಅರುಣ್ ಕುಮಾರ್, ವಿ.ಎಸ್. ಧನಂಜಯ ಕುಮಾರ್, ಎಂ.ಎಲ್. ಸುರೇಶ್, ಬಿ.ಸಿ. ದಿನೇಶ್, ಕೆ.ಎನ್. ಪಾಂಡು, ರಾಣಿ, ಮನು ರಾಧಾ ಮತ್ತಿತರೆ ವಕೀಲರು ಇದ್ದರು.

ಹಿರಿಯ ಪತ್ರಿಕಾ ವಿತರಕ ಕೆ.ವಿ.ಪುಟ್ಟಸ್ವಾಮಿಗೌಡ ನಿಧನ

ಕೆ.ಆರ್.ಪೇಟೆ, ಫೆ.20– ಪಟ್ಟಣದ ಪತ್ರಿಕಾ ವಿತರಕರಾಗಿದ್ದ ಕೆ.ವಿ.ಪುಟ್ಟಸ್ವಾಮಿಗೌಡ



(90) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಕೇಬಲ್ ನಾಗರಾಜು ಸೇರಿದಂತೆ ಇಬ್ಬರು ಪುತ್ರರು ಸೇರಿದಂತೆ ಅಪಾರವಾದ ಬಂಧು ಬಳಗವನ್ನು ಅಗಲಿದ್ದಾರೆ.

ಪಟ್ಟಣದ ವಿಜಯ ಬ್ಯಾಂಕಿನ ಪಿಗ್ಮಿ ಸಂಗ್ರಾಹಕರಾಗಿ 60–70ರ ದಶಕದಲ್ಲಿಯೇ ಹಲವು ಪತ್ರಿಕೆಗಳ ವಿತರಕರಾಗಿ ಕೆಲಸ ಮಾಡಿರುತ್ತಾರೆ. ಮೃತರ ಅಂತ್ಯಕ್ರಿಯೆಯು ಹೇಮಗಿರಿ ರಸ್ತೆಯ ಮಲ್ಲೇನಹಳ್ಳಿ ಬಳಿ ಇರುವ ಮೃತರ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಿತು.

ಮೃತರ ನಿಧನಕ್ಕೆ ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ನಾರಾಯಣಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮತ್ತಿತರ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಟಿಎಪಿಸಿಎಂಎಸ್ ನಿರ್ದೇಶಕ ರಂಗನಾಥಪುರ ನಾಗರಾಜು

ಕೆ.ಆರ್.ಪೇಟೆ: ತಾಲೂಕಿನ ಬೂಕನಕೆರೆ ಹೋಬಳಿಯ ರಂಗನಾಥಪುರ ಗ್ರಾಮದ



ಹಿರಿಯ ಜೆಡಿಎಸ್ ಪಕ್ಷದ ಮುಖಂಡರು ಹಾಗೂ ಟಿಎಪಿಸಿಎಂಎಸ್ ಸಂಸ್ಥೆ ಹ್ಯಾಟ್ರಿಕ್ ನಿರ್ದೇಶಕ ರಂಗನಾಥಪುರ ನಾಗರಾಜು(65) ಶುಕ್ರವಾರ ಸಂಜೆ ನಿಧನ ಹೊಂದಿದ್ದಾರೆ.

ಮೃತರು ಪತ್ನಿ ಜಯಮ್ಮ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಫೆ.21ರಂದು ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಶಾಸಕ ಹೆಚ್.ಟಿ.ಮಂಜು, ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಮಾಜಿ ಸಚಿವ ನಾರಾಯಣಗೌಡ, ಮಾಜಿ ಶಾಸಕ ರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಸಮಾಜ ಸೇವಕ ಆರ್.ಟಿ.ಓ.ಮಲ್ಲಿಕಾರ್ಜುನ್, ವಿಜಯ್ ರಾಮೇಗೌಡ, ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಅಘಲಯ ಎ.ಎಸ್.ರಮೇಶ್, ಹಾಗೂ ಟಿಎಪಿಸಿಎಂಎಸ್ ಸಂಸ್ಥೆಯ ಎಲ್ಲಾ ನಿರ್ದೇಶಕರು ಸೇರಿದಂತೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಬೂದನೂರು ಉತ್ಸವದಲ್ಲಿ ಹೆಲಿಕಾಪ್ಟರ್ ರೈಡ್ ಉದ್ಘಾಟನೆ

ಮಂಡ್ಯ: ಜಿಲ್ಲೆಯ ಯುವ ಜನತೆಯು ನಗರದ ಚಿತ್ರಣವನ್ನು ಪ್ರದರ್ಶನ ಮಾಡುವ ನಿಟ್ಟಿನಲ್ಲಿ ಹೆಲಿಪ್ಯಾಡ್ ಸವಾರಿ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಮೂರು ದಿನಗಳ ಕಾಲ ನಡೆಯಲಿರುವ ಸವಾರಿ ಪ್ರದರ್ಶನವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯ ಸ್ವಾಮಿ ಹೇಳಿದರು.

ಇಂದು ಬೂದನೂರು ಉತ್ಸವ ನಡೆಯುತ್ತಿರುವ ಚಿಕ್ಕ ಮಂಡ್ಯದಲ್ಲಿ ಹೆಲಿಕಾಪ್ಟರ್ ರೈಡ್ ಕಾರ್ಯಕ್ರಮ ಉದ್ಘಾಟಿಸಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಬೂದನೂರು ಉತ್ಸವ ಪ್ರಯುಕ್ತ ಹೆಲಿ ಟೂರಿಸಂ ಹೆಲಿಪ್ಯಾಡ್ ಸವಾರಿ ಪ್ರದರ್ಶನವನ್ನು ಆಯೋಜಿಸಲಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಬಹಳ ವಿಭಿನ್ನವಾಗಿ ಮಾಡಬೇಕೆಂದು ವಿವಿಧ ರೀತಿಯ ಕ್ರೀಡೆ ಮತ್ತು ರಂಗೋಲಿ ಸ್ಪರ್ಧೆಗಳ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ಪೂರ್ಣಗೊಂಡಿವೆ ಎಂದು ಹೇಳಿದರು.

ಮಾ.7 ರಂದು ಜಿಲ್ಲಾಡಳಿತ ವತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಅಸ್ಪೃಶ್ಯತಾ ನಿವಾರಣಾ ಕಾಯ್ದೆಯ ಅರಿವು ಕಾರ್ಯಾಗಾರವನ್ನು ನಗರದ ಡಾ. ಬಿಆರ್ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಸಮಾಜದ ಎಲ್ಲಾ ವರ್ಗದವರು ಮತ್ತು ಮುಖಂಡರು ಕಾರ್ಯಾಗಾರ ಕಾರ್ಯಕ್ರಮಕ್ಕೆ ಭಾವಹಿಸಿ ಯಶಸ್ವಿಗೊಳಿಸಬೇಕು ಎಂದು ಹೇಳಿದರು.



ಹೆಲಿಪ್ಯಾಡ್ ಸವಾರಿ ಪ್ರದರ್ಶನವನ್ನು ಸಚಿವ ಎನ್ ಚಲುವರಾಯಸ್ವಾಮಿ ಉದ್ಘಾಟಿಸಿದರು,


ಶಾಸಕರಾದ ಪಿ ರವಿಕುಮಾರ್, ಕೆ.ಎಂ ಉದಯ್, ಜಿಲ್ಲಾಧಿಕಾರಿ ಡಾ. ಕುಮಾರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ ಆರ್.ನಂದಿನಿ, ಪೊಲೀಸ್ ಅಧೀಕ್ಷಕಿ ವಿ.ಜೆ ಶೋಭಾ ರಾಣಿ, ಉಪ ವಿಭಾಗ ಅಧಿಕಾರಿ ಶಿವಮೂರ್ತಿ, ತಹಸೀಲ್ದಾರ್ ವಿಶ್ವನಾಥ್ ಇನ್ನಿತರರಿದ್ದರು.

ಪತ್ರಕರ್ತರ ಸಂಘ ಅಧ್ಯಕ್ಷರ ಆಯ್ಕೆ

ಶ್ರೀರಂಗಪಟ್ಟಣ: ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷರಾಗಿ ಜಿ.ಎನ್.ರವೀಶಗೌಡ ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು.

ಫೆ.24ರಿಂದ ಬೀರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕಾರ್ಯಕ್ರಮ

ಮದ್ದೂರು, ಫೆ.20– ತಾಲೂಕಿನ ಆಲೂರಿನ ಶ್ರೀ ಬೀರೇಶ್ವರಸ್ವಾಮಿ ಕ್ಷೇತ್ರದಲ್ಲಿ ಫೆ.24ರಿಂದ 26ರವರೆಗೆ ಮೂರು ದಿನಗಳ ಶ್ರೀ ಬೀರೇಶ್ವರ ದೇವಸ್ಥಾನದ ಜೀರ್ಣೋದ್ಧಾರ, ನೂತನ ರಾಜಗೋಪುರ, ವಿಮಾನ ಗೋಪುರ, ಕಳಸ ಪ್ರತಿಷ್ಠಾಪನೆ, ಗಣಪತಿ, ನಂದಿ, ನವಗ್ರಹಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಕಾಯಕ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕರು ತಿಳಿಸಿದ್ದಾರೆ.



ಫೆ.24ರಂದು ಸಂಜೆ ಮೂಲ ದೇವತಾ ಪ್ರಾರ್ಥನೆ, ಶ್ರೀಗಣಪತಿ ಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ. ನಂತರ ಸಂಜೆ 5 ಗಂಟೆಗೆ ಆಲೂರು ಮತ್ತು ಆಲೂರು ದೊಡ್ಡಿ ಗ್ರಾಮಸ್ಥರು ಮೀಸಲು ನೀರು ತರಲಿದ್ದಾರೆ. ಫೆ.25ರಂದು ಬೆಳಗ್ಗೆ ವೇದ ಪಾರಾಯಣ, ಯಾಗಶಾಲಾ ಪ್ರವೇಶ ನಡೆಯಲಿವೆ. ನಂತರ ಸಂಜೆ ವಿಗ್ರಹಗಳ ಪ್ರತಿಷ್ಠಾಪನೆ, ಮಹಾ ಮಂಗಳಾರತಿ ನಡೆಯಲಿದೆ.

ಫೆ.26ರಂದು ಬೆಳಗ್ಗೆ ವೇದ ಪಾರಾಯಣ ಪ್ರಧಾನ ಕಲಶಾರಾಧನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನಡೆಯಲಿದ್ದು, ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ನಂತರ ಆಲೂರು ಮತ್ತು ಆಲೂರು ದೊಡ್ಡಿಯ ಗ್ರಾಮದಲ್ಲಿ ದೇವರ ಉತ್ಸವ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 98456 59868 ಸಂಪರ್ಕಿಸಬಹುದು ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಬೆಂಗಳೂರಲ್ಲಿ ಸ್ನೇಹಮಯಿ ಕೃಷ್ಣ ಬಂಧನ

ಪೊಲೀಸ್ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದರು. ಸ್ನೇಹಮಯಿ ಕೃಷ್ಣ ವಿರುದ್ಧ ಫೆ.18ರಂದು ಪ್ರಕರಣ ದಾಖಲಿಸಿಕೊಂಡಿದ್ದ ಬೆಂಗಳೂರು ಸಿಸಿಬಿ ಪೊಲೀಸರು ಇಂದು ಬಂಧಿಸಿದ್ದಾರೆ.

ತನಿಖೆಯ ಸಮಯದಲ್ಲಿ ದೂರುದಾರರು ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಿಂದ ಸಾಕ್ಷ್ಯಗಳನ್ನು ಸಂಗ್ರಹಿಸಲಾಯಿತು. ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಲಾದ ಆಡಿಯೊ ಕ್ಲಿಪ್ ಅನ್ನು ಪರಿಶೀಲಿಸಲಾಯಿತು ಎಂದು ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ನ್ಯಾಯಾಲಯ ಹೊರಡಿಸಿದ್ದ ಸರ್ಚ್ ವಾರೆಂಟ್‌ನ ನಂತರ, ಪೊಲೀಸರು ಆರೋಪಿಯ ನಿವಾಸದಲ್ಲಿ ಶೋಧ ನಡೆಸಿ ಸಂಬಂಧಿತ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಕೃಷ್ಣ ಅವರಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಅಷ್ಟೇ ಎಂದು ಪೊಲೀಸರು ತಿಳಿಸಿದ್ದಾರೆ.

ಕೃಷ್ಣ ಮಾಡಿದ ಆರೋಪವೇನು: ಮುಂಬಡ್ತಿ ಪಡೆಯಲು ಕೋಟ್ಯಾಂತರ ರೂಪಾಯಿ ಲಂಚ ನೀಡಿದ್ದಾರೆ ಎಂದು ಆರೋಪಿಸಿ ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯಕ್ಕೆ (ಇಡಿ) ಸ್ನೇಹಮಯಿ ಕೃಷ್ಣ ದೂರು ಸಲ್ಲಿಸಿದ್ದಾರೆ.

ದೂರಿನಲ್ಲಿ, ಸುಮಾರು ರೂ. 9 ಕೋಟಿಗೂ ಹೆಚ್ಚು ಹಣವನ್ನು ಐದು ಚೀಲಗಳಲ್ಲಿ ಸಾಗಿಸಲಾಗಿತ್ತು ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ. ಒಂದು ಚೀಲದಲ್ಲಿದ್ದ ರೂ. 1.60 ಕೋಟಿ ಹಣವನ್ನು ಹಿರಿಯ ಐಎಎಸ್ ಅಧಿಕಾರಿಗೆ ಸಂಬಂಧಿಸಿದ ವ್ಯಕ್ತಿಗೆ ಲಂಚವಾಗಿ ನೀಡಲಾಗಿದೆ. ಈ ಹಣ ಮಾಜಿ ಮುಡಾ ಆಯುಕ್ತರದ್ದೇ ಎಂದು ದೂರಿದ್ದಾರೆ.

ಈ ಪ್ರಕರಣದಲ್ಲಿ ಬಳಸಲಾದ ಕಾರಿನ ಮಾಲೀಕ ಹಾಗೂ ಚಾಲಕರ ಬಗ್ಗೆ ತನಿಖೆ ನಡೆಸಬೇಕು, ಹಣದ ಮೂಲ ಮತ್ತು ಹಂಚಿಕೆಯ ಬಗ್ಗೆ ಪತ್ತೆಹಚ್ಚಬೇಕು, ಹಣವನ್ನು ನಗದು ಅಥವಾ ಆನ್‌ಲೈನ್ ಮೂಲಕ ಪಾವತಿಸಿರುವುದನ್ನು ಪರಿಶೀಲಿಸಬೇಕು. ಟವರ್ ಲೊಕೇಶನ್ ಮತ್ತು ಕರೆ ವಿವರ ದಾಖಲೆಗಳನ್ನು (WhatsApp ಕರೆಗಳು ಸೇರಿದಂತೆ) ಸಂಗ್ರಹಿಸಬೇಕು, ವಾಹನದ GPS ಡೇಟಾ ಹಾಗೂ ಸಂಬಂಧಿತ ಸ್ಥಳಗಳ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದಾರೆ. ಇದೇ ವೇಳೆ ತನಿಖೆಯಲ್ಲಿ ತಪ್ಪಿತಸ್ಥರು ಕಂಡುಬಂದಲ್ಲಿ ತಕ್ಷಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸಿಎಸ್ ಸ್ಪಷ್ಟೀಕರಣ: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಈ ಆರೋಪಗಳು ಆಧಾರರಹಿತವಾಗಿದ್ದು ಯಾವುದೇ ಸಾಕ್ಷ್ಯವಿಲ್ಲ ಎಂದು ಸ್ಪಷ್ಟಪಡಿಸಿ, ಸ್ನೇಹಮಯಿ ಕೃಷ್ಣ ಅವರಿಗೆ ವಿವರವಾದ ಆರು ಪುಟಗಳ ಲಿಖಿತ ಸ್ಪಷ್ಟೀಕರಣವನ್ನು ಕಳುಹಿಸಿದ್ದಾರೆ.

ಮಾರ್ಚ್‌ನಿಂದ ಅಧಿಕ ಬಿಸಿಲು

ಹೆಚ್ಚಾಗಲಿದ್ದು, ಕೇರಳ ಮತ್ತು ತಮಿಳುನಾಡು ಹೊರತುಪಡಿಸಿ ಇತರೆ ಪ್ರದೇಶಗಳಲ್ಲಿ ವಾಡಿಕೆಗಿಂತಲೂ ಬಿಸಿಲು ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಉತ್ತರ ಒಳನಾಡು ಕರ್ನಾ ಟಕದ ಬಹುತೇಕ ಭಾಗಗಳಿಗೆ ಮಾರ್ಚ್– ಮೇ ಅವಧಿಯಲ್ಲಿ ಉಷ್ಣ ಅಲೆ (ಹೀಟ್ ವೇವ್) ತೀವ್ರಗೊಳ್ಳುವ ಸಾಧ್ಯತೆಯಿದ್ದು, ರೆಡ್ ಅಲರ್ಟ್ ಘೋಷಿಸಿದೆ.

ಪ್ರಸ್ತುತ ಹೆಚ್ಚಾಗಿರುವ ತಾಪಮಾನವು 3 ರಿಂದ 6 ದಿನಗಳವರೆಗೆ ಮುಂದುವರಿಯುವ ಸಾಧ್ಯತೆ ಇದ್ದು, ನಂತರ ಕಡಿಮೆಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದೆ. ಈ ನಡುವೆ ಕರಾವಳಿ ಮತ್ತು ಉತ್ತರ ಒಳನಾಡು ಕರ್ನಾಟಕದ ಬಹುತೇಕ ಭಾಗಗಳಲ್ಲಿ ಕನಿಷ್ಠ ತಾಪಮಾನವೂ ಸಾಮಾನ್ಯಕ್ಕಿಂತ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಐಎಂಡಿ ಮಾಹಿತಿ ನೀಡಿದೆ.

ಮಾರ್ಚ್‌ನಿಂದ ಮೇವರೆಗೆ ಸಂಪೂರ್ಣ ಕರ್ನಾಟಕದಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚು ಇರುವ ಸಾಧ್ಯತೆ ಇದೆ. ಕರಾವಳಿ ಕರ್ನಾಟಕದಲ್ಲಿ ಗರಿಷ್ಠ ತಾಪಮಾನ ಶೇಕಡ 65 ರಿಂದ 75 ರಷ್ಟು ಹೆಚ್ಚಾಗುವ ಸಾಧ್ಯತೆ ಎಂದು ಐಎಂಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ನಡುವೆ ಹವಾಮಾನ ತಜ್ಞರು ಫೆಬ್ರವರಿಯಲ್ಲೇ ಉಷ್ಣತೆ ಏರಿಕೆಯಾಗುತ್ತಿರುವುದನ್ನು ಗಮನಿಸಿದ್ದು, ಮುಂದಿನ ತಿಂಗಳುಗಳಲ್ಲಿ ಇದು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ನಾಗರಿಕರು ಈ ಅವಧಿಯಲ್ಲಿ ಎಚ್ಚರಿಕೆಯಿಂದ ಇರಬೇಕು ಎಂದು ಐಎಂಡಿ ಸಲಹೆ ನೀಡಿದೆ.

ಮೈಸೂರು ನಿವಾಸದಲ್ಲಿ ತೀವ್ರ ಶೋಧ



ಮೈಸೂರಿನ ಭೈರವೇಶ್ವರನಗರದ ಸ್ನೇಹಮಯಿ ಕೃಷ್ಣ ಅವರ ಮನೆಯಲ್ಲಿ ಶೋಧ ಕಾರ್ಯ ಪೂರ್ಣಗೊಳಿಸಿ ಹೊರಬರುತ್ತಿರುವ ಬೆಂಗಳೂರು ಸಿಸಿಬಿ ಪೊಲೀಸ್ ತಂಡ.

ತಾಯಿ ವಾಸವಾಗಿರುವ ಬಂಡಿಪಾಳ್ಯದ ಮನೆಯಲ್ಲಿ ಬೆಂಗಳೂರು ಸಿಸಿಬಿ ಪೊಲೀಸರು ಶುಕ್ರವಾರ ಮಧ್ಯಾಹ್ನದಿಂದ ಸಂಜೆಯವರೆಗೆ ಶೋಧ ಕಾರ್ಯ ನಡೆಸಿದರು. ಈ ವೇಳೆ ಹಾರ್ಡ್‌ಡಿಸ್ಕ್, ಪೆನ್‌ಡ್ರೈವ್ ಸೇರಿದಂತೆ ಕೆಲ ದಾಖಲೆಗಳನ್ನು ಬೆಂಗಳೂರು ಸಿಸಿಬಿ ಪೊಲೀಸರಿಂದ ವಶಪಡಿಸಿಕೊಳ್ಳಲಾಗಿದೆ.

ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರ ವಿರುದ್ಧ ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡಿದ್ದರು. ಮುಂಬಡ್ತಿ ಪಡೆಯಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರಿಗೆ ನಟೇಶ್ ಕೋಟ್ಯಾಂತರ ರೂ. ಲಂಚ ನೀಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದರು. ಇದೇ ವಿಚಾರ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಾಗೂ ನಕಲಿ ಧ್ವನಿ ಕ್ಲಿಪ್ ಅನ್ನು ಅಪ್‌ಲೋಡ್ ಮಾಡಿ ತಮ್ಮ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ವಿರುದ್ಧ ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸ್ (ಸಿಸಿಬಿ) ಠಾಣೆಗೆ ನಟೇಶ್ ದೂರು ನೀಡಿದ್ದರು.

ಈ ಸಂಬಂಧ ಫೆ.18ರಂದು ಪ್ರಕರಣ ದಾಖಲಾಗಿ ತನಿಖೆ ಕೈಗೊಂಡಿದ್ದ ಬೆಂಗಳೂರು ಸಿಸಿಬಿ ಪೊಲೀಸರು, ಶುಕ್ರವಾರ ಬೆಂಗಳೂರು ನಗರ ಸಿವಿಲ್ ಕೋರ್ಟ್ ಬಳಿ ಸ್ನೇಹಮಯಿ ಕೃಷ್ಣ ಅವರನ್ನು ವಶಕ್ಕೆ ಪಡೆದಿದ್ದರು. ಇದರ ಬೆನ್ನಲ್ಲೇ ಬೆಂಗಳೂರು ನಗರದ 45ನೇ ಎಸಿಎಂಎಂ ಕೋರ್ಟ್‌ನಿಂದ ಪಡೆದ ಸರ್ಚ್ ವಾರಂಟ್‌ನೊಂದಿಗೆ ಮೈಸೂರಿಗೆ ಒಂದು ವ್ಯಾನ್ ಹಾಗೂ ಎರಡು ಜೀಪ್‌ನಲ್ಲಿ ಬಂದಿಳಿದ ಬೆಂಗಳೂರು ಸಿಸಿಬಿ ಪೊಲೀಸರು, ಮಧ್ಯಾಹ್ನದ ವೇಳೆಗೆ ಗೌರಿಶಂಕರನಗರದ ಭೈರವೇಶ್ವರನಗರದಲ್ಲಿರುವ ಸ್ನೇಹಮಯಿ ಕೃಷ್ಣ ಅವರ ಶ್ರೀ ಶಿವಕೃಪ ಫೈನಾನ್ಸ್ ಕಾರ್ಪೋರೇಷನ್ ಕಚೇರಿಯಲ್ಲಿ ಪ್ರಕರಣ ಸಂಬಂಧ ಶೋಧ ಕಾರ್ಯ ನಡೆಸಿದರು.

ಇದಾದ ಬಳಿಕ ಇಲ್ಲಿಗೆ ಸಮೀಪದಲ್ಲೇ ಇರುವ ಸ್ನೇಹಮಯಿ ಕೃಷ್ಣ ಅವರ ನಿವಾಸದಲ್ಲೂ ತಪಾಸಣೆ ನಡೆಸಿದರು. ಸ್ನೇಹಮಯಿ ಕೃಷ್ಣ ಅವರ ಪತ್ನಿ ಜಿ.ಎನ್.ವಿನೋದಾ ಅವರಿಗೆ ಸರ್ಚ್ ವಾರಂಟ್ ತೋರಿಸಿ ಮಧ್ಯಾಹ್ನ ಸುಮಾರು 2.30ರ ವೇಳೆಗೆ ಶೋಧ ಕಾರ್ಯ ಪ್ರಾರಂಭಿಸಿದ್ದ ಪೊಲೀಸರು, ಸಂಜೆ 5.10ರವರೆಗೂ ತಪಾಸಣೆಯಲ್ಲಿ ನಿರತರಾದರು. ಈ ವೇಳೆ ಹಾರ್ಡ್‌ಡಿಸ್ಕ್, ಸ್ನೇಹಮಯಿ ಕೃಷ್ಣರ ಶರ್ಟ್‌ನ ಜೇಬಿನಲ್ಲಿದ್ದ ಪೆನ್‌ಡ್ರೈವ್ ಹಾಗೂ ನಟೇಶ್ ನೀಡಿರುವ ದೂರಿಗೆ ಸಂಬಂಧಿಸಿದ ಪತ್ರ ದಾಖಲೆಗಳನ್ನು ವಶಕ್ಕೆ ಪಡೆದರು ಎನ್ನಲಾಗಿದೆ.

ಬಳಿಕ ಬಂಡಿಪಾಳ್ಯದಲ್ಲಿರುವ ಕೃಷ್ಣ ಅವರ ತಾಯಿ ಜಯಮ್ಮ ಅವರ ಮನೆಗೆ ತೆರಳಿದ ತನಿಖಾ ತಂಡವು, ಅಲ್ಲಿಯೂ ಪರಿಶೀಲನೆ ನಡೆಸಿತು. ಅಲ್ಲಿ ಅವರ ತಾಯಿ ಇರದ ಕಾರಣ ವಿನೋದಾ ಅವರೇ ತೆರಳಿ ಪೊಲೀಸರ ಶೋಧ ಕಾರ್ಯಕ್ಕೆ ಸಹಕರಿಸಿದರು. ಇಲ್ಲಿ ಸಂಜೆ 5.20ರಿಂದ ಸಂಜೆ 6.30ರವರೆಗೂ ಶೋಧ ಕಾರ್ಯ ನಡೆಸಲಾಯಿತು. ಆದರೆ ಇಲ್ಲಿ ಯಾವುದೇ ದಾಖಲೆ ವಶಪಡಿಸಿಕೊಂಡಿಲ್ಲ. ಇಬ್ಬರು ವಿಡಿಯೊಗ್ರಾಫರ್‌ಗಳು ಇಡೀ ಶೋಧ ಕಾರ್ಯದ ವಿಡೀಯೊ ದಾಖಲೀಕರಣ ಮಾಡಿಕೊಂಡರು. ಬೆಂಗಳೂರು ಸಿಸಿಬಿ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಎಂ.ಉಮೇಶ್ ಕುಮಾರ್ ನೇತೃತ್ವದಲ್ಲಿ ಇಬ್ಬರು ಮಹಿಳಾ ಪೊಲೀಸ್ ಪೇದೆಗಳೂ ಸೇರಿದಂತೆ 9 ಮಂದಿಯ ತಂಡ ಶೋಧ ಕಾರ್ಯ ನಡೆಸಿತು.

ಪುತ್ರನ ಆತಂಕ: ಸ್ನೇಹಮಯಿ ಕೃಷ್ಣ ಅವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡ ತಕ್ಷಣ ಅವರ ಹಿರಿಯ ಪುತ್ರ ವಿವೇಕ ಅವರು ಸಿಸಿಬಿ ಪೊಲೀಸ್ ಕಚೇರಿಗೆ ಧಾವಿಸಿದರು. ಆದರೆ, ಅಲ್ಲಿ ಪೊಲೀಸರು ಯಾವುದೇ ಮಾಹಿತಿಯನ್ನು ನೀಡದೇ ಇರುವುದಕ್ಕೆ ಆತಂಕ ವ್ಯಕ್ತಪಡಿಸಿದ ಅವರು, ನಮ್ಮ ತಂದೆಯ ಪ್ರಾಣಕ್ಕೆ ಅಪಾಯವಿದೆ. ಅವರಿಗೆ ಏನೇ ಆದರೂ ಸರ್ಕಾರವೇ ಅದಕ್ಕೆ ಕಾರಣವಾಗಬೇಕಾಗುತ್ತದೆ ಅಧಿಕಾರಿಗಳು ಯಾವುದೇ ಮಾಹಿತಿಯನ್ನು ನೀಡುತಿಲ್ಲ. ಇದರಿಂದ ನಮಗೆ ಆತಂಕವಾಗಿದೆ ಎಂದರು.

ಕ್ರಿಕೆಟ್ ಬಾಲ್‌ನಂತಿದ್ದ ಬಾಂಬ್ ಬ್ಯಾಟ್‌ಗೆ ತಾಗುತ್ತಲೇ ಸ್ಫೋಟ: ಬಾಲಕನಿಗೆ ಗಾಯ

ಮಂಗಳೂರು, ಫೆ20– ಚೆಂಡಿನಾ ಕಾರದ ಶಂಕಿತ ಬಾಂಬ್ ರೀತಿಯ ವಸ್ತುವಿ ನೊಂದಿಗೆ ಕ್ರಿಕೆಟ್ ಆಡಲು ಹೋದ ಬಾಲಕನೋರ್ವ ಗಾಯಗೊಂಡ ಘಟನೆ ದಕ್ಷಿಣ ಕನ್ನಡದಲ್ಲಿ ನಡೆದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಬಂದಾರು ಗ್ರಾಮದಲ್ಲಿ ಚೆಂಡಿನ ಆಕಾರದ ವಸ್ತುವೊಂದು ಸ್ಫೋಟಗೊಂಡು ಓರ್ವ ಬಾಲಕ ಗಂಭೀರವಾಗಿ ಗಾಯಗೊಂಡಿದ್ದಾನೆ. ಸದ್ಯ ಬಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಘಟನೆಯಲ್ಲಿ ಅಭೀಶ್ ಎಂಬ ಬಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಲಾಗಿದೆ. ಸದ್ಯ ಬಾಲಕ ಪವಾಡಸದೃಶವಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸದ್ಯ ಘಟನೆಯಿಂದ ಜನರಲ್ಲಿ ಆತಂಕ ಶುರುವಾಗಿದೆ.

ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ 9(B), 1(b) ಸ್ಫೋಟಕಗಳ ಕಾಯ್ದೆ, 125 ABNS ಆಕ್ಟ್ ಅಡಿ ಪ್ರಕರಣ ದಾಖಲಾಗಿದೆ. ಮೇಲ್ನೋಟಕ್ಕೆ ಇದು ಕಾಡು ಹಂದಿ ಬೇಟೆ ಆಡಲು ಇಟ್ಟಿದ್ದ ಬಾಂಬ್ ಎಂದು ಶಂಕಿಸಲಾಗಿದೆ.

ಮಾಜಿ ಸಚಿವ ಪಿಜಿಆರ್ ಸಿಂಧ್ಯಾಗೆ ಗೌರವ ಡಾಕ್ಟರೇಟ್



ಮೈಸೂರು, ಫೆ. 20– ಹಿರಿಯ ರಾಜಕೀಯ ಮುತ್ಸದ್ದಿ, ಮಾಜಿ ಗೃಹ ಸಚಿವರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತರಾದ ಪಿ ಜಿ ಆರ್ ಸಿಂಧ್ಯಾ ಅವರು ಗುಲ್ಬರ್ಗ ವಿಶ್ವವಿದ್ಯಾನಿಲಯ ಕೊಡ ಮಾಡುವ ಪ್ರತಿಷ್ಠಿತ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ. ಫೆ. 24ಕ್ಕೆ ಗುಲ್ಬರ್ಗ ವಿಶ್ವವಿದ್ಯಾನಿಲಯದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರಧಾನ ಮಾಡಲಿದ್ದಾರೆ.

ಅಧ್ಯಕ್ಷರಾಗಿ ನೇಮಕ



ಮೈಸೂರು, ಫೆ. 20– ಮೈಸೂರು ನಗರ ಜಿಲ್ಲಾ ಕೆ.ಪಿ.ಸಿ.ಸಿ ಬೀದಿ ಬದಿ ವ್ಯಾಪಾರಿಗಳ ಘಟಕದ ಅಧ್ಯಕ್ಷರಾಗಿ ಅಜ್ಮಲ್ ಪಾಷಾ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಎಂ ಜಾತಿ ಅಸ್ತ್ರ ಪ್ರಯೋಗ

ಉಸಿರು ಇರುವವರೆಗೆ ನಡೆಸುತ್ತೇನೆ. ರಣರಂಗವನ್ನು ಬಿಟ್ಟು ಓಡಿ ಹೋಗುವ ಹೇಡಿ ನಾನಾಗಲಾರೆ ಎಂದು ಬರೆದುಕೊಂಡಿದ್ದಾರೆ. ಮುಖ್ಯಮಂತ್ರಿಗಳು, ಬಿಜೆಪಿ ಅಥವಾ ಜೆಡಿಎಸ್ ನಾಯಕರನ್ನು ಉದ್ದೇಶಿಸಿ ಈ ರೀತಿ ಟ್ವೀಟ್ ಮಾಡಿದ್ದಾರೋ ಇಲ್ಲ ಸ್ವಪಕ್ಷೀಯರನ್ನೇ ಟಾರ್ಗೆಟ್ ಮಾಡಲು ಈ ರೀತಿ ಹೇಳಿದ್ದಾರಾ ಎನ್ನುವುದು ಚರ್ಚೆಗೆ ಗ್ರಾಸವಾಗಿದೆ. ಕಾರಣ ಕಾಂಗ್ರೆಸ್ಸಿನಲ್ಲಿ ಅಧಿಕಾರ ಹಸ್ತಾಂತರದ ಕೂಗು, ಈಗ ಜೋರಾಗುತ್ತಿರುವ ಹಿನ್ನೆಲೆಯಲ್ಲಿ ಸಿಎಂ ಹೇಳಿಕೆ ವಿಶೇಷ ಮಹತ್ವ ಪಡೆದುಕೊಂಡಿದೆ. ಸಿದ್ದರಾಮಯ್ಯನವರು ಹಲವು ಬಾರಿ ಈ ರೀತಿಯ ಹೇಳಿಕೆಯನ್ನು ನೀಡಿದ್ದಾರೆ. ಸಾಮಾನ್ಯ ಕುರಿಗಾಹಿ ಕುಟುಂಬದ ವ್ಯಕ್ತಿ ರಾಜ್ಯದ ಮುಖ್ಯಮಂತ್ರಿ ಅತ್ಯುನ್ನತ ಸ್ಥಾನಕ್ಕೆ ಏರಿದಾಗ, ಮೇಲ್ವರ್ಗದ ಕೆಲವರಿಗೆ ಇದನ್ನು ತಡೆದುಕೊಳ್ಳಲು ಸಾಧ್ಯವಾಗುವುದಿಲ್ಲ ಎನ್ನುವ ಅರ್ಥದಲ್ಲಿ ಹಿಂದೆಲ್ಲಾ ಸಾಕಷ್ಟು ಬಾರಿ ಹೇಳಿದ್ದುಂಟು. ಮುಖ್ಯಮಂತ್ರಿಗಳ ಈ ಹೇಳಿಕೆಗೆ ಬಿಜೆಪಿ ಮತ್ತು ಜೆಡಿಎಸ್ ವಿರೋಧ ವ್ಯಕ್ತಪಡಿಸಿವೆ. ತೊಂದರೆಯಲ್ಲಿ ಇದ್ದಾಗ, ಇವರಿಗೆ ಜಾತಿಯ ನೆನಪಾಗುತ್ತದೆ ಎಂದು ಲೇವಡಿ ಮಾಡಿವೆ.

ಪದೇ ಪದೆ ಬಂಧನದಿಂದ ಭಯವಾಗ್ತಿದೆ...

ಹೋಗಿದ್ದಾರೆ ಎಂದಾಗ, ಈಗಾಗಲೇ ಅವರು ನಮ್ಮ ಪೊಲೀಸರ ಜೊತೆ ಯಲ್ಲಿದ್ದಾರೆ ಎಂದರು. ನಮ್ಮ ಮನೆಯಲ್ಲಿದ್ದ ನನ್ನ ಪತಿ ಯವರ ಪೆನ್‌ಡ್ರೈವ್, ಹಾರ್ಡ್‌ಡಿಸ್ಕ್ ವಶಕ್ಕೆ ಪಡೆದಿದ್ದಾರೆ. ಜೊತೆಗೆ ನನ್ನ ಪತಿ ವಿರುದ್ಧದ ಪ್ರಕರಣವೊಂದಕ್ಕೆ ಸಂಬಂಧಿಸಿ ಕೆಲ ದಾಖಲೆ ಪಡೆದಿದ್ದಾರೆ. ಬಂಡಿಪಾಳ್ಯದ ನಮ್ಮ ಅತ್ತೆಯವರ ಮನೆಯಲ್ಲಿ ಏನನ್ನೂ ವಶಕ್ಕೆ ಪಡೆದಿಲ್ಲ. ನನ್ನ ಪತಿಯವರು ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಸಿಕ್ಕಿಸಬೇಕೆಂದು ಅವರು ಇಲ್ಲದ ಸಮಯದಲ್ಲಿ ಶೋಧ ಕಾರ್ಯ ನಡೆಸಿದ್ದಾರೆ ಎಂದು ಆರೋಪಿಸಿದರು. ನನಗೆ ಭಯವಿದೆ. ಏಕೆಂದರೆ ಅವರನ್ನು ಆಗಾಗ್ಗೆ ಬಂಧನ ಮಾಡಲಾಗುತ್ತಿದೆ. ನ್ಯಾಯಕ್ಕಾಗಿ ಹೋರಾಟ ಮಾಡುವವರಿಗೆ ಈ ರೀತಿ ದೌರ್ಜನ್ಯ ಮಾಡಿ ವಶಕ್ಕೆ ಪಡೆಯುವುದನ್ನು ಸಹಿಸಿಕೊಳ್ಳುವುದು ಕಷ್ಟ. ನಮ್ಮ ಪತಿ ಯಾವುದಕ್ಕೂ ಹೆದರುವುದಿಲ್ಲ. ಆದರೆ ನಮಗೆ ಭಯವಾಗುತ್ತದೆ. ವಾರದಲ್ಲಿ ಎರಡು ಬಾರಿ ಬೆಂಗಳೂರಿಗೆ ಹೋಗುತ್ತಲೇ ಇರುತ್ತಾರೆ. ಕಾರಣ ಕೇಳಿದರೆ ಕೇಸ್ ಇದೆ ಎನ್ನುತ್ತಿದ್ದರು. ಅಷ್ಟು ಬಿಟ್ಟರೆ ಬೇರೆ ವಿವರ ನನಗೆ ಗೊತ್ತಿಲ್ಲ ಎಂದು ಹೇಳಿದರು.

ಇಂದಿನಿಂದ ಸಫಾರಿ ಪುನರಾರಂಭ

ಮಾನವ ಜೀವ ರಕ್ಷಣೆಗೆ ಆದ್ಯತೆ: ವನ್ಯಜೀವಿಗಳ ರಕ್ಷಣೆಯ ಜೊತೆಗೆ ಕಾಡಿನಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ ಜೀವ ರಕ್ಷಣೆಯೂ ಅರಣ್ಯ ಇಲಾಖೆಯ ಪ್ರಥಮ ಆದ್ಯತೆ ಆಗಿದೆ. ಇದರ ಜೊತೆಗೆ ಬೆಳೆ ರಕ್ಷಣೆಗೂ ಒತ್ತು ನೀಡಬೇಕು. ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35ರಷ್ಟು ಹಣವನ್ನು ಅರಣ್ಯದಂಚಿನ ವಸತಿ ಪ್ರದೇಶಗಳಲ್ಲಿನ ಯುವಜನರಿಗೆ ಕೌಶಲ್ಯ ತರಬೇತಿ ನೀಡಲು, ಜಾನುವಾರುಗಳಿಗೆ ಮೇವು ಒದಗಿಸಲು, ಮಕ್ಕಳಿಗೆ ಶಿಕ್ಷಣ ಕೊಡಿಸಲು ವಿನಿಯೋಗಿಸಬೇಕು ಎಂದು ತಿಳಿಸಿದರು.

ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ: ಅರಣ್ಯ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ ಆಗಬೇಕಾದರೆ ಸ್ಥಳೀಯರ ನೆರವು, ಸಹಕಾರ, ಸಹಯೋಗ ಅತ್ಯಂತ ಮುಖ್ಯ. ಈ ನಿಟ್ಟಿನಲ್ಲಿ ಅರಣ್ಯ ಸಿಬ್ಬಂದಿ ಸ್ಥಳೀಯರೊಂದಿಗೆ ಸೌಹಾರ್ದಯುತವಾಗಿ ವರ್ತಿಸಬೇಕು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಸಂರಕ್ಷಣೆ ಮಾಡಬೇಕು ಎಂದರು.

ಇ–ಗಸ್ತು ಆರಂಭಿಸಿ: ಇಲಾಖೆಯ ಕಾಯಂ ಸಿಬ್ಬಂದಿ ಕಡ್ಡಾಯವಾಗಿ ಅರಣ್ಯ ಇಲಾಖೆ ಆಂತರಿಕವಾಗಿ ಅಭಿವೃದ್ಧಿಪಡಿಸಿರುವ ಇ–ಗಸ್ತು ತಂತ್ರಾಂಶವನ್ನು ಬಳಕೆ ಮಾಡಬೇಕು. ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೊರಗುತ್ತಿಗೆ ಸಿಬ್ಬಂದಿ ಇ–ಸ್ಟ್ರೈಪ್ ಬಳಕೆ ಮಾಡಲು ಸೂಚಿಸಬೇಕು. ಸಮಗ್ರ ಕಮಾಂಡ್ ಕೇಂದ್ರದಲ್ಲಿ ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಕೂಡಲೇ ಸಂಬಂಧಿತ ವಲಯದ ಅಧಿಕಾರಿ, ಸಿಬ್ಬಂದಿಗೆ ಸೂಚನೆ ನೀಡಬೇಕು. 1926 ದೂರವಾಣಿ ಸಂಖ್ಯೆಗೆ ಬರುವ ದೂರು ಮತ್ತು ಮಾಹಿತಿಗೆ ತಕ್ಷಣ ಸ್ಪಂದಿಸಬೇಕು ಎಂದು ಸೂಚಿಸಿದರು.

ಕಾಡ್ಗಿಚ್ಚು ಎಚ್ಚರಕ್ಕೆ ಸೂಚನೆ: ನಾಗರಹೊಳೆ, ಬಂಡೀಪುರ, ಬಿಆರ್‌ಟಿಯಲ್ಲಿ ಈ ಬೇಸಿಗೆಯಲ್ಲಿ ಕಾಡ್ಗಿಚ್ಚು ನಿಯಂತ್ರಿಸಲು ಕ್ರಮ ವಹಿಸುವಂತೆ ಸೂಚಿಸಿದ ಸಚಿವರು, ಬೇಸಿಗೆಯಲ್ಲಿ ಹುಲಿ, ಚಿರತೆ, ಆನೆ ಸೇರಿದಂತೆ ಯಾವುದೇ ವನ್ಯಜೀವಿ ಆಹಾರ ಮತ್ತು ನೀರಿನ ಕೊರತೆಯಿಂದ ಕಾಡಿನಿಂದ ಹೊರಬಾರದಂತೆ ಕ್ರಮ ಕೈಗೊಳ್ಳಲು ತಿಳಿಸಿದರು.

ಮೈಸೂರು ನಗರದಲ್ಲಿ ಹೆಚ್ಚಿನ ಸಸಿ ನೆಡಲು ಸೂಚನೆ: ಮುಂಬರುವ ಮಳೆಗಾಲದಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯ ಪಟ್ಟಣ, ನಗರ ಪ್ರದೇಶಗಳ ರಸ್ತೆಯ ಬದಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಟ್ಟು ಹಸಿರು ಹೊದಿಕೆ ಹೆಚ್ಚಿಸಬೇಕು. ವೃಕ್ಷ ಸಂರಕ್ಷಣೆ ಮತ್ತು ವೃಕ್ಷ ಸಂವರ್ಧನೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ಸಿಸಿಎಫ್ ಡಾ.ಮಾಲತಿ ಪ್ರಿಯಾ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಿಎಫ್ ಎಸ್.ಪ್ರಭಾಕರನ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ. ಸೀಮಾ, ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಶ್ರೀಪತಿ, ಸೋನಾಲ್, ಕೆ.ಪರಮೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಟ್ರೀ ಕಮಿಟಿ ರಚನೆ ಸಂಬಂಧ ಶೀಘ್ರದಲ್ಲೇ ಸಭೆ

ಗ್ರಾಹಕ ಪರಿಷತ್‌ಗೆ ಡಿಸಿಎಫ್ ಪರಮೇಶ್ ಭರವಸೆ



ಮೈಸೂರು ಗ್ರಾಹಕರ ಪರಿಷತ್ ವತಿಯಿಂದ ಡಿಸಿಎಫ್ ಪರಮೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು.ಫೆ.20– ಮೈಸೂರಿನಲ್ಲಿ ಪರಿಸರ ಮಾಲಿನ್ಯ ಮತ್ತು ಮರಗಳ ಹನನ ಸೇರಿದಂತೆ ಹಸಿರು ಸಮಸ್ಯೆ ತಡೆ ಸಂಬಂಧ ಮರ ಸಂರಕ್ಷಣಾ ಸಮಿತಿ (ಟ್ರೀ ಕಮಿಟಿ) ರಚನೆ ಮಾಡುವ ಸಲುವಾಗಿ ಶೀಘ್ರದಲ್ಲೇ ಸಭೆ ಕರೆಯಲಾಗುವುದು ಎಂದು ಡಿಸಿಎಫ್ ಪರಮೇಶ್ ತಿಳಿಸಿದ್ದಾರೆ.

ಈ ಸಂಬಂಧ ಶುಕ್ರವಾರ ಅರಣ್ಯ ಭವನದಲ್ಲಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಮೈಸೂರು ಗ್ರಾಹಕರ ಪರಿಷತ್ ನಿಯೋಗಕ್ಕೆ ಈ ಭರವಸೆ ನೀಡಿದ್ದಾರೆ ಎಂದು ಮೈಸೂರು ಗ್ರಾಹಕರ ಪರಿಷತ್ ಸಂಚಾಲಕ ಡಿ.ವಿ.ದಯಾನಂದ್ ಸಾಗರ್ ತಿಳಿಸಿದ್ದಾರೆ.

ಮೈಸೂರು ಹಚ್ಚ ಹಸಿರಿನ ತಾಣ. ಸ್ವಚ್ಛತೆಯ ಪರಂಪರೆ ಹೊಂದಿದ್ದು, ಸುಂದರವಾದ ಉದ್ಯಾನವನಗಳ ನಗರವಾಗಿ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಾಲಿನ್ಯ, ಶಾಖ ಮತ್ತು ಧೂಳಿನಿಂದ ಹವಾಮಾನ ಬದಲಾವಣೆಗಳಾಗುತ್ತಿದೆ. ಇದರ ಜೊತೆಗೆ ಅಭಿವೃದ್ಧಿಯ ಹೆಸರಲ್ಲಿ ದಿನನಿತ್ಯ ಮರಗಳ ತೆರವು ಸೇರಿದಂತೆ ಇನ್ನಿತರ ಕಾರಣಗಳಿಂದ ಮೈಸೂರಿನ ಹಸಿರೀಕರಣದ ಮೇಲೆ ಹೊಡೆತ ಬೀಳುತ್ತಿದೆ ಎಂದು ಮೈಸೂರು ಗ್ರಾಹಕ ಪರಿಷತ್ ನಿಯೋಗವು ಡಿಸಿಎಫ್ ಪರಮೇಶ್ ಅವರಲ್ಲಿ ಮನವಿ ಸಲ್ಲಿಸಿ ಚರ್ಚಿಸಿತು ಎಂದು ಅವರು ಹೇಳಿದ್ದಾರೆ.

ಈ ಸಂಬಂಧ ಟ್ರೀ ಕಮಿಟಿ ರಚನೆ ಮಾಡಿದರೆ ಮೈಸೂರಿನಲ್ಲಿ ಪ್ರಕೃತಿ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆಯ ಬಹುದು ಎಂದು ಮನವರಿಕೆ ಮಾಡಿ ಕೊಟ್ಟಾಗ ಪರಮೇಶ್ ಅವರು ಶೀಘ್ರ ದಲ್ಲೇ ಟ್ರೀ ಕಮಿಟಿ ಮಾಡುವ ಸಂಬಂಧ ಸರ್ಕಾರದಿಂದ ಅನುಮತಿ ಪಡೆದು, ಶೀಘ್ರದಲ್ಲೇ ಸಭೆ ಕರೆಯಲಾಗುವುದು ಎಂದು ತಿಳಿಸಿದರು ಎಂದು ದಯಾನಂದ್ ಪ್ರತಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮೈಗ್ರಾಪ ಅಧ್ಯಕ್ಷ ರಾಯ ಜೋಸೆಫ್, ಮೇಜರ್ ಜನರಲ್ ಒಂಬತ್ಕೆರೆ ಇಸಿ ಮೆಂಬರ್ ಭಾಮಿ ವಿ ಶೆಣೈ ಹಾಗೂ ಡಿ. ವಿ.ದಯಾನಂದ್ ಸಾಗರ್ ಸಂಚಾಲಕರು ಮೈಸೂರು ಗ್ರಾಹಕರ ಪರಿಷತ್ ಭಾಗವಹಿಸಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.20– ಸಿದ್ದಲಿಂಗಪುರ ಫೀಡರ್ ವ್ಯಾಪ್ತಿಯಲ್ಲಿ ಕಾಮಗಾರಿ ಕೆಲಸದ ನಿಮಿತ್ತ ಫೆ.22 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಘಂಟೆಯವರೆಗೆ ಕೆ.ಆರ್ ಮಿಲ್ ಕಾಲೋನಿ, ಸಿದ್ದಲಿಂಗಪುರ, ಕಳಸ್ತವಾಡಿ, ನಾಗನಹಳ್ಳಿ, ಲಕ್ಷ್ಮೀಪುರ, ಕೆ.ಆರ್ ಮಿಲ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸನ್ಮಾನ



ಮೈಸೂರು ತಾಲೂಕು ರಮ್ಮನಹಳ್ಳಿ ಗ್ರಾಮದ ಮಹದೇವ ಮತ್ತು ಶ್ರೀಮತಿ ಚಂದ್ರಕಲಾ ಅವರ ಪುತ್ರಿ ಎಂ. ಸೌಂದರ್ಯ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದು, ಅವರನ್ನು ಮೈಸೂರು ತಾಲೂಕು ನಾಯಕ ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ, ಸಮಾಜದ ಹಿರಿಯ ಮುಖಂಡರಾದ ಕ್ಯಾತಮಾರನಹಳ್ಳಿ ವೆಂಕಟೇಶ್, ಟೆನ್ನಿಸ್ ಗೋಪಿ, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ವೆಂಕಟಯ್ಯ, ರಮ್ಮನಹಳ್ಳಿ ರಾಜ ಶೇಖರ್, ಶಂಕರ್, ಮರಂಕಯ್ಯ, ರಂಗಸ್ವಾಮಿ, ಇಲವಾಲ ಕೃಷ್ಣ, ರಮ್ಮನಹಳ್ಳಿ ಮಂಜು, ಪೈಲ್ವಾನ್ ಜಯಸಿಂಹ, ಕೆಂಪನಾಯಕ, ಯಜಮಾನ್ ಚಿಕ್ಕಜವರಿ ಸನ್ಮಾನಿಸಿ, ಶುಭ ಕೋರಿದರು.

ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಆದಿ ಚುಂಚನಗಿರಿ ವಿದ್ಯಾರ್ಥಿಗಳ ಸಾಧನೆ



ಪ್ರಣೀತ್ ಆದಿತ್ಯಾ ವರ್ಷಾ ವಿಶ್ವಜೀತ್ ಪ್ರಜನ್



ಯೋಗಿತಾ ಹರ್ಷಿತಾ ಸಂಜನಾ ರಾಘವ್ ವಿಕಾಸ್ ಸಿದ್ದಾರ್ಥ್

ಮೈಸೂರು, ಫೆ.20–ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀ ಆದಿ ಚುಂಚನಗಿರಿ ಶಿಕ್ಷಣ ಸಂಸ್ಥೆ, ಬಿಜಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು 2026ನೇ ಸಾಲಿನ ಜೆಇಇ ಮೇನ್ಸ್ ಸೆಷನ್–1 ಪರೀಕ್ಷೆಯಲ್ಲಿ ಉನ್ನತ ರ್‍ಯಾಂಕ್‌ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಸಂಸ್ಥೆಯ ಕಾರ್ಯದರ್ಶಿ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಆಡಳಿತಾಧಿಕಾರಿ ಡಾ.ಆರ್. ಎಸ್.ನರಸೇಗೌಡ, ಶೈಕ್ಷಣಿಕ ಸಂಯೋಜಕರಾದ ಆರ್.ರಂಗನಾಥ್ ಬಾಬು ಮತ್ತು ಪ್ರಾಂಶುಪಾಲರು, ಉಪನ್ಯಾಸಕರು ಈ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಫೆ.27ರಿಂದ ದಕ್ಷಿಣ ಭಾರತದ ಆರನೇ ಕಿಸಾನ್ ಸ್ವರಾಜ್ ಸಮ್ಮೇಳನ

●ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರಣಪ್ಪ ಹಲಸೆ ಮಾಹಿತಿ ●ದೇಶದ 11 ರಾಜ್ಯಗಳ ಸಾವಿರಕ್ಕೂ ಅಧಿಕ ಪ್ರತಿನಿಧಿಗಳು ಭಾಗಿ

ಮೈಸೂರು, ಫೆ.20(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಫೆ.27ರಿಂದ ಮಾ.1ರವರೆಗೆ ದಕ್ಷಿಣ ಭಾರತದ '6ನೇ ಕಿಸಾನ್ ಸ್ವರಾಜ್ ಸಮ್ಮೇಳನ' ಆಯೋಜಿಸಲಾಗಿದೆ ಎಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ (ಎಎಸ್‌ಹೆಚ್‌ಎ) ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಹಯೋಗದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಘಟಿಕೋತ್ಸವ ಭವನದಲ್ಲಿ ಫೆ.27ರಂದು ಬೆಳಗ್ಗೆ 9.30ಕ್ಕೆ ಸಮ್ಮೇಳನ ಆರಂಭವಾಗಲಿದೆ. ಸಭಾ ಕಾರ್ಯಕ್ರಮದ ನಂತರ ಅಧಿವೇಶನ ಜರುಗಲಿದ್ದು, ದಕ್ಷಿಣ ಭಾರತದ ಎಲ್ಲಾ ರಾಜ್ಯಗಳು ಸೇರಿದಂತೆ ದೇಶದ 11 ರಾಜ್ಯಗಳಿಂದ ಒಂದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಫೆ.27ರಿಂದ ಮಾ.1ರವರೆಗೆ ನಡೆಯುವ ದಕ್ಷಿಣ ಭಾರತದ '6ನೇ ಕಿಸಾನ್ ಸ್ವರಾಜ್ ಸಮ್ಮೇಳನ'ದ ಪೋಸ್ಟರ್ ಅನ್ನು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಬಿಡುಗಡೆ ಮಾಡಿದರು.

ಪ್ರಶಸ್ತಿ ಪುರಸ್ಕೃತ ರೈತರು ಭಾಗಿ: ಈ ಸಮ್ಮೇಳನದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸುಭಾಷ್ ಶರ್ಮಾ ಅವರಂತಹ ನೈಸರ್ಗಿಕ ಕೃಷಿಕರು ಮತ್ತು ತಳಿ ಸಂರಕ್ಷಕ ಪ್ರಶಸ್ತಿ ಪುರಸ್ಕೃತ ಹಲವಾರು ರೈತರು ಭಾಗವಹಿಸಲಿದ್ದಾರೆ. ಜೊತೆಗೆ, ಆಂಧ್ರಪ್ರದೇಶ ಸರ್ಕಾರದ ನೈಸರ್ಗಿಕ ಕೃಷಿ ವಿಭಾಗದ ವಿಶೇಷ ಮುಖ್ಯ ಕಾರ್ಯದರ್ಶಿ ಟಿ. ವಿಜಯ್ ಕುಮಾರ್ ಮತ್ತು ಛತ್ತೀಸ್‌ಗಢದ ದಂತೇವಾಡ ಜಿಲ್ಲೆಯನ್ನು ಸಂಪೂರ್ಣ ಸಾವಯವ ಜಿಲ್ಲೆಯನ್ನಾಗಿ ಪರಿವರ್ತಿಸಲು ಅಡಿಪಾಯ ಹಾಕಿದ ಹಿರಿಯ ಅಧಿಕಾರಿ ದೈವಸೇನಾಪತಿ ಅವರಂತಹ ನೀತಿ ನಿರೂಪಕರು ಪಾಲ್ಗೊಳ್ಳಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಮತ್ತು ರೈತರಿಗಾಗಿ ಕೃಷಿ ಕಲಿಕಾ ಪ್ರದರ್ಶನಗಳನ್ನು ಆಯೋಜಿಸಲಿದೆ. ಇಲ್ಲಿ ನೈಸರ್ಗಿಕ ಮತ್ತು ಸಾವಯವ ಕೃಷಿಕರು ಹಾಗೂ ರೈತ ಒಕ್ಕೂಟಗಳು ತಮ್ಮ ರಾಸಾಯನಿಕ ಮುಕ್ತ ಉತ್ಪನ್ನಗಳನ್ನು ಮಾರಾಟ ಮಾಡಲು ಮಳಿಗೆಗಳನ್ನು ತೆರೆಯಲಿದ್ದಾರೆ. ಮೈಸೂರಿನ ಜನತೆಯ ನಾಲಿಗೆಗೆ ರುಚಿ ನೀಡಲು ವೈವಿಧ್ಯಮಯ ಸಾವಯವ ಆಹಾರ ಮಳಿಗೆಗಳ ವ್ಯವಸ್ಥೆಯೂ ಇರಲಿದೆ ಎಂದು ತಿಳಿಸಿದರು.

ವಿಶೇಷ ಕಾರ್ಯಾಗಾರ: ನಗರ ಪ್ರದೇಶದಲ್ಲಿ ಕೈ ತೋಟ ಅಥವಾ ತಾರಸಿ ತೋಟ ಮಾಡಲು ಆಸಕ್ತಿಯಿರುವ ನಾಗರಿಕರಿಗಾಗಿ ವಿಶೇಷ ಕಾರ್ಯಾಗಾರ ಮತ್ತು ನೇರ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿದೆ. ಈ ಸಮ್ಮೇಳನದ ವಿಶಿಷ್ಟ ಆಕರ್ಷಣೆಯೆಂದರೆ ಆಂಧ್ರಪ್ರದೇಶದ ಪೊಂಡೂರಿನ ಮಹಿಳೆಯರಿಂದ ನಡೆಯಲಿರುವ ಪ್ರಸಿದ್ಧ 'ಪಟ್ನುಲು' ನೂಲು ತೆಗೆಯುವ ನೇರ ಪ್ರಾತ್ಯಕ್ಷಿಕೆ. ಹತ್ತಿಯಿಂದ ಬೀಜ ಬೇರ್ಪಡಿಸುವುದರಿಂದ ಹಿಡಿದು, ನೂಲು ತೆಗೆಯುವುದು ಮತ್ತು ನೇಯ್ಗೆಯವರೆಗೆ ಸಂಪೂರ್ಣವಾಗಿ ಕೈಯಿಂದಲೇ ಅತ್ಯುತ್ತಮ ಗುಣಮಟ್ಟದ ಬಟ್ಟೆ ತಯಾರಿಸುವ ಅಪರೂಪದ ಪರಂಪರೆ ಇದಾಗಿದೆ. ಸುಸ್ಥಿರ ಮತ್ತು ಆರೋಗ್ಯಕರ ಸಂಪ್ರದಾಯಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಸಮ್ಮೇಳನದಲ್ಲಿ ಸಾಂಪ್ರದಾಯಿಕ ಎಣ್ಣೆ ಗಾಣದ (ಎತ್ತುಗಳಿಂದ ನಡೆಸುವ) ಪ್ರದರ್ಶನವೂ ಇರಲಿದೆ. ಇದು ಗ್ರಾಹಕರು ಉತ್ತಮ ಹಾಗೂ ಆರೋಗ್ಯಕರ ಆಹಾರ ಪದ್ಧತಿಯತ್ತ ಮುಖ ಮಾಡುವಂತೆ ಪ್ರೇರೇಪಿಸಲಿದೆ ಎಂದು ಅಭಿಪ್ರಾಯಪಟ್ಟರು.

ಸುಮಾರು 30 ರೈತರು ತಾವು ಸಂರಕ್ಷಿಸಿರುವ ಸಾವಿರಕ್ಕೂ ಹೆಚ್ಚು ತಳಿಯ ಸಾಂಪ್ರದಾಯಿಕ ಬೀಜಗಳ ಪ್ರದರ್ಶನ ಮಾಡಲಿದ್ದಾರೆ. ವಿವಿಧ ಬಗೆಯ ಗೆಡ್ಡೆ–ಗೆಣಸುಗಳು ಮತ್ತು ಅಪರೂಪದ ತರಕಾರಿಗಳ ಪ್ರದರ್ಶನವು ಇಲ್ಲಿನ ವಿಶೇಷ ಆಕರ್ಷಣೆಯಾಗಿದೆ ಎಂದರು.

ಸಂವಾದ: ಗುಜರಾತ್‌ನ ಬನ್ನಿ ಗೀರ್ ಗೋಶಾಲೆಯ 'ಗೋ–ಕೃಪಾಮೃತ'ದ ಮೂಲ ಅನುಶೋಧಕರಾದ ಗೋಪಾಲ್ ಭಾಯ್ ಸುತಾರಿಯಾ ಅವರೊಂದಿಗೆ ಸಂವಾದ ನಡೆಯಲಿದೆ. ಹೈದರಾಬಾದ್‌ನ ಪ್ರಶಸ್ತಿ ವಿಜೇತ ಕೃಷಿ ವಿಜ್ಞಾನಿ ಡಾ. ಜಿ.ವಿ. ರಾಮಾಂಜನೇಯುಲು ಅವರು ಚರ್ಚೆಗಳಿಗೆ ಆಧುನಿಕ ವೈಜ್ಞಾನಿಕ ಆಯಾಮವನ್ನು ನೀಡಲಿದ್ದಾರೆ. ಸಮ್ಮೇಳನದಲ್ಲಿ ಭಾಗವಹಿಸುವವರೊಂದಿಗೆ ಹಲವಾರು ಪ್ರಸಿದ್ಧ ರೈತರು ಸಂವಾದ ನಡೆಸಿ, ತಮ್ಮ ಕೃಷಿ ಅನುಭವ ಮತ್ತು ಪರಿಣತಿಯನ್ನು ಹಂಚಿಕೊಳ್ಳಲಿದ್ದಾರೆ ಎಂದರು.

ಕಿಸಾನ್ ಸ್ವರಾಜ್ ಸಮ್ಮೇಳನ 2026 ವಿವಿಧ ಕ್ಷೇತ್ರಗಳ ಜನರನ್ನು ಒಗ್ಗೂಡಿಸಿ, ರೈತ–ಕೇಂದ್ರಿತ ಮತ್ತು ನ್ಯಾಯಯುತ ಕೃಷಿ ಭವಿಷ್ಯಕ್ಕಾಗಿ ಸಂಪನ್ಮೂಲ ಹಂಚಿಕೆಯ ದೃಷ್ಟಿಕೋನವನ್ನು ರೂಪಿಸುವ ಗುರಿಯನ್ನು ಹೊಂದಿದೆ. ಕೃಷಿಕರು, ಚಿಂತಕರು ಮತ್ತು ತಳಮಟ್ಟದ ನಾಯಕರನ್ನು ಒಂದೆಡೆ ಸೇರಿಸುವ ಮೂಲಕ ಆಹಾರ ಸಾರ್ವಭೌಮತ್ವ ಪರಿಸರ ಸುಸ್ಥಿರತೆ ಮತ್ತು ಭಾರತದ ರೈತ ಸಮುದಾಯಗಳಿಗೆ ಗೌರವಯುತ ಜೀವನೋಪಾಯವನ್ನು ಒದಗಿಸುವ ಪ್ರಯತ್ನಗಳನ್ನು ಇದು ಬಲಪಡಿಸುತ್ತದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ: ಫೆ.27 ರಂದು ರಾತ್ರಿ 8 ಗಂಟೆಗೆ ಖ್ಯಾತ ಗಾಯಕ ವಾಸು ದೀಕ್ಷಿತ್ ಅವರಿಂದ ಗಾಯನ ಕಾರ್ಯಕ್ರಮವಿದೆ. ಫೆ.28 ರಂದು ಅಭಿವ್ಯಕ್ತಿ ಕಲಾ ಕೇಂದ್ರದ ಕಲಾವಿದರಿಂದ ಭರತನಾಟ್ಯ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಸಮ್ಮೇಳದಲ್ಲಿ ಸುಮಾರು 40 ಹೆಚ್ಚು ಗೋಷ್ಠಿಗಳು, ಅಧಿವೇಶನಗಳು ನಡೆಯಲಿವೆ. ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಾರತದ ಕೃಷಿ ಪರಂಪರೆಯನ್ನು ಅರಿತುಕೊಳ್ಳಬೇಕು. ಹೆಚ್ಚಿನ ಮಾಹಿತಿ ಹಾಗೂ ಸಮ್ಮೇಳನದಲ್ಲಿ ಭಾಗವಹಿಸಲು ಕುರಿತಂತೆ ದೂ: 8105579839 ಸಂಪರ್ಕಿಸಬಹುದು ಎಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಡೀನ್ ಪ್ರೊ. ಎಂ. ರಾಮನಾಥನ್ ನಾಯ್ಡು, ಆಶಾ–ಕಿಸಾನ್ ಸ್ವರಾಜ್ ಸಂಚಾಲಕಿ ಕವಿತಾ ಕುರುಗಂಟಿ, ಕವಿತಾ ಶ್ರೀನಿವಾಸನ್,ಡಾ. ಅರ್ .ಸಂತೋಷ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಸ್ಕೂಟರ್‌ಗೆ ಕಾರು ಡಿಕ್ಕಿ: ಓರ್ವ ಸಾವು, ಮತ್ತೊಬ್ಬರಿಗೆ ತೀವ್ರ ಗಾಯ



ದರ್ಶನ್

ಮೈಸೂರು, ಫೆ.20(ಎಂಕೆ)– ಕಾರು, ಸ್ಕೂಟರ್ ಡಿಕ್ಕಿ ಹೊಡೆದು ಸ್ಕೂಟರ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರಿನ ಬೋಗಾದಿ–ಗದ್ದಿಗೆ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ಟಿ.ಕೆ.ಲೇಔಟ್ ನಿವಾಸಿ ದರ್ಶನ್ (27) ಮೃತ ದುರ್ದೈವಿ. ಗುರುವಾರ ರಾತ್ರಿ 10 ಸುಮಾರಿಗೆ ಎಸ್‌ಬಿಎಂ ಬಡಾವಣೆ ಕಡೆಯಿಂದ ತನ್ನ ಸ್ನೇಹಿತ ಮನು ಜೊತೆಗೆ ಸ್ಕೂಟರ್‌ನಲ್ಲಿ ಗದ್ದಿಗೆ ರಸ್ತೆಗೆ ಪ್ರವೇಶಿಸುತ್ತಿದ್ದಂತೆ, ಗದ್ದಿಗೆ ಕಡೆಯಿಂದ ಬೋಗಾದಿ ಕಡೆಗೆ ವೇಗವಾಗಿ ಬರುತ್ತಿದ್ದ ಹುಂಡೈ ಐ10 ಕಾರು ಡಿಕ್ಕಿ ಹೊಡೆದಿದೆ.

ಪರಿಣಾಮ ದರ್ಶನ್ ಸ್ಥಳದಲ್ಲೇ ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡಿರುವ ಮನು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಘಾತದಿಂದ ಎರಡೂ ವಾಹನಗಳು ಭಾಗಶಃ ನಜ್ಜುಗುಜ್ಜಾಗಿದ್ದು, ಕುವೆಂಪುನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನು ಬೋಗಾದಿ–ಗದ್ದಿಗೆ ಮುಖ್ಯ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿದ್ದು, ಎಸ್‌ಬಿಎಂ ಲೇಔಟ್ ಜಂಕ್ಷನ್‌ನ ಬಳಿ ರಸ್ತೆಯ ಎರಡೂ ಕಡೆ ಹಂಪ್ ಹಾಕಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದ್ದಾರೆ.

ಇಂದಿನಿಂದ ಎಂಎಸ್ ಗೋಲ್ಡ್‌ನಲ್ಲಿ ಫ್ಯಾಬೂಲೆಸ್ ಫೆಬ್ರವರಿ ಕೊಡುಗೆಗಳು

ಮೈಸೂರು, ಫೆ.20– ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಅತಿ ದೊಡ್ಡ ಮತ್ತು ಐಶಾರಾಮಿ ಚಿನ್ನಾಭರಣ ಮಳಿಗೆಯಾದ ಎಂಎಸ್ ಗೋಲ್ಡ್ ಭರ್ಜರಿ ಕೊಡುಗೆ ನೀಡಿದೆ.



ಎಂಎಸ್ ಗೋಲ್ಡ್ ಮಳಿಗೆಯ ಫ್ಯಾಬುಲೆಸ್ ಫೆಬ್ರವರಿ ಎಂಬ ಶೀರ್ಷಿಕೆಯಡಿಯಲ್ಲಿ ಗ್ರಾಹಕರಿಗೆ ಅತ್ಯಾಕರ್ಷಕ ಕೊಡುಗೆಯನ್ನು ಫೆ. 21,22 ಹಾಗೂ 23 ರವರೆಗೆ ನೀಡುತ್ತಿದೆ. ಆಕರ್ಷಕ ವಿನ್ಯಾಸಗಳು, ಅತ್ಯಾಧುನಿಕ ಶ್ರೇಣಿಯ ಆಭರಣಗಳು, ಹೇರಿಟೇಜ್ ಜ್ಯುವೆಲ್ಲರಿ ಕಲೆಕ್ಷನ್‌ಗಳು ವಿವಿಧ ಬಗೆಯ ಆಭರಣ ಶ್ರೇಣಿಗಳು ಲಭ್ಯವಿದೆ. ಆಯ್ದ ಆಭರಣಗಳ ಮೇಲೆ ಶೇ.2.9% ಮೇಕಿಂಗ್ ಚಾರ್ಜ್ ಮಾತ್ರ ಇದೆ. ಈ ಅವಧಿಯಲ್ಲಿ ಯಾವುದೇ ರೀತಿಯಾ ವೇಸ್ಟೇಜ್ ಇರುವುದಿಲ್ಲ. ಸಂಸ್ಥೆಯು ತನ್ನದೆ ಆದ ಆಭರಣ ತಯಾರಿಕಾ ಕಾರ್ಖಾನೆಯನ್ನು ಹೊಂದಿದ್ದು ಗ್ರಾಹಕರಿಗೆ ಇತ್ತೀಚಿನ ಚಿನ್ನದ ದರ ಏರಿಕೆಯ ಬಿಸಿ ತಾಗದಿರಲಿ ಎಂದು ಮೂರು ದಿನಗಳ ಅತ್ಯದ್ಭುತ ಕೊಡುಗೆಯನ್ನು ನೀಡುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಎಂಎಸ್ ಗೋಲ್ಡ್ ಶಾಖೆಯ ದೂರವಾಣಿ 9932891919 ಗೆ ಸಂಪರ್ಕಿಸಬಹುದು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಫೆ.20– ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಫೆ21 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಘಂಟೆಯವರೆಗೆ ಇನಾಂ ಉತ್ತನಹಳ್ಳಿ, ಎಂ.ಸಿ ಹುಂಡಿ, ಕೀಳನಪುರ, ಎಸ್.ಆರ್ ಹುಂಡಿ, ಮೇಗಳಾ ಪುರ, ದುದ್ದಗೆರೆ, ಮಾಧವಗೆರೆ, ಮಹಾದೇವಿ ಕಾಲೋನಿ, ಪಿ.ಜಿ ಹುಂಡಿ, ಚಟ್ನಹಳ್ಳಿ, ಚಟ್ನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥ ಪುರ, ಲಕ್ಷ್ಮೀಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಕುಪ್ಪೇಗಾಲ, ಜಾಗ್ವರ್ ಸಿಮೆಂಟ್, ಶಿವಶಂಕರ ಪೋಲ್ ಫ್ಯಾಕ್ಟರಿ, ರಾಜಶ್ರೀ ಇಂಡಸ್ಟ್ರೀಸ್, ಟಿ. ನರಸೀಪುರ ಮುಖ್ಯ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ಆರ್.ಬಿ.ಐ ರಸ್ತೆ, ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಸುತ್ತಮುತ್ತ ವಿಪ್ರೋರಸ್ತೆ, ಆರ್.ಬಿ.ಐ ಮೇನ್‌ಗೇಟ್ ಸುತ್ತ ಮುತ್ತಲಿನ ಪ್ರದೇಶಗಳು. ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಯಾದವಗಿರಿ ಕೈಗಾರಿಕ ಪ್ರದೇಶ, ಮಂಜುನಾಥಪುರ, ಜಾವಾ ಸರ್ಕಲ್, ಜಾಯ್ ಐಸ್‌ಕ್ರೀಮ್ ಫ್ಯಾಕ್ಟರಿ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ

ರೈತರ ಮಕ್ಕಳ ವಿವಾಹವಾಗುವ ಹೆಣ್ಣು ಮಕ್ಕಳ ಹೆಸರಿಗೆ 10 ಲಕ್ಷ ಠೇವಣಿ; ಬಜೆಟ್‌ನಲ್ಲಿ ಘೋಷಿಸಲು ರೈತ ನಾಯಕ ಆಗ್ರಹ

ಕೃಷಿ ಅವಲಂಬಿತ ಯುವಕರಿಗೆ ಹೆಣ್ಣು ಸಿಗದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲು ಮನವಿ

ಮೈಸೂರು, ಫೆ.20(ಎಂಟಿವೈ)– ರೈತರ ಮಕ್ಕಳನ್ನು ವಿವಾಹವಾಗುವ ಹೆಣ್ಣು ಮಕ್ಕಳಿಗೆ ರಾಜ್ಯ ಸರ್ಕಾರ 10 ಲಕ್ಷ ಠೇವಣಿ ಇಡುವ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಘೋಷಿಸುವ ಮೂಲಕ ಯುವ ರೈತರನ್ನು ಪ್ರೋತ್ಸಾಹಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಮಕ್ಕಳಿಗೆ ಯಾರೂ ಹೆಣ್ಣು ಕೊಡಲು ಮುಂದಾಗುತ್ತಿಲ್ಲ. ಇದರಿಂದಾಗಿ 45 ವರ್ಷವಾದರೂ ಮದುವೆ ಭಾಗ್ಯವಿಲ್ಲದೆ ಕಂಗಾಲಾಗಿದ್ದಾರೆ. ಇದರಿಂದ ಉಂಟಾಗುವ ಖಿನ್ನತೆ, ಆತ್ಮಹತ್ಯೆಯಂತಹ ದುಷ್ಪರಿಣಾಮಗಳನ್ನು ನಿಯಂತ್ರಣ ಮಾಡುವುದು ಸರ್ಕಾರದ ಸಾಮಾಜಿಕ ಜವಾಬ್ದಾರಿ. ರೈತ ಯುವಕರನ್ನು ರೈತ ಹೆಣ್ಣು ಮಕ್ಕಳೇ ಮದುವೆಯಾಗಲು ನಿರಾಕರಿಸುತ್ತಿರುವುದು ವಿಷಾದನೀಯ. ಬಹುತೇಕ ರೈತ ಯುವಕರು ಅವಿವಾಹಿತರಾಗಿ ಉಳಿಯುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಯಂತೆ ಯುವ ರೈತರಿಗೆ ಹೆಣ್ಣು ಸಿಗದಿರುವುದು ಕೂಡ ಬಹುದೊಡ್ಡ ಸಮಸ್ಯೆಯಾಗಿದೆ ಎಂದು ವಿಷಾದಿಸಿದರು.



ಈ ಸಮಸ್ಯೆಗೆ ರಾಜ್ಯ ಸರ್ಕಾರ ಪರಿಹಾರ ಕಂಡು ಹಿಡಿಯಬೇಕು. ರೈತ ಯುವಕರನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ಕನಿಷ್ಠ 10 ಲಕ್ಷ ಠೇವಣಿ ಇಡಬೇಕು. ಕೃಷಿ ಅಥವಾ ಕೃಷಿಪೂರಕ ಸಣ್ಣ ಉದ್ದಿಮೆ ಗಳನ್ನು ಸ್ಥಾಪಿಸಲು ಸರ್ಕಾರವೇ ಭದ್ರತೆ ನೀಡಿ ಬಡ್ಡಿ ರಹಿತ ಸಾಲ ಒದಗಿಸಿ ಉತ್ತೇಜನ ನೀಡಬೇಕು ಎಂದು ಒತ್ತಾಯಿಸಿದರು.

ಸಫಾರಿ ಸ್ಥಗಿತಕ್ಕೆ ಒತ್ತಾಯ: ಬಂಡೀಪುರ–ನಾಗರಹೊಳೆ ಅಭಯಾರಣ್ಯಗಳಲ್ಲಿ ಸಫಾರಿಯನ್ನು ಸ್ಥಗಿತಗೊಳಿಸಬೇಕು. ಮೈಸೂರು–ಚಾಮರಾಜನಗರ ಜಿಲ್ಲೆಗಳ ಕಾಡಂಚಿನ ಗ್ರಾಮಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷಗಳಿಂದ ಸಾವು–ನೋವು ಸಂಭವಿಸುತ್ತಿವೆ. ಸರಣಿ ಹುಲಿ ದಾಳಿಯ ಪರಿಣಾಮ ಸಫಾರಿಯನ್ನು ಸ್ಥಗಿತಗೊಳಿಸಿದ ಬಳಿಕ ಮಾನವ ವನ್ಯಜೀವಿ ಸಂಘರ್ಷ ಕಡಿಮೆಯಾಗಿತ್ತು. ಇದನ್ನು ಅರಣ್ಯ ಸಚಿವರು ಕೂಡ ಮನಗಂಡಿದ್ದರು. ಆದರೀಗ ಮತ್ತೆ ಸಫಾರಿ ಆರಂಭಿಸಿರುವುದು ಸರಿಯಲ್ಲ. ಇದರಿಂದ ವನ್ಯಜೀವಿ ಮತ್ತು ಮಾನವ ಸಂಘರ್ಷ ಮತ್ತೆ ಹೆಚ್ಚಾಗಲಿದೆ. ಯಾವುದೇ ಕಾರಣಕ್ಕೂ ಸಫಾರಿ ನಡೆಸಲು ರಾಜ್ಯ ಸರ್ಕಾರ ಅವಕಾಶ ನೀಡಬಾರದು. ಈ ವಿಚಾರದಲ್ಲಿ ಸರ್ಕಾರ ಯಾವುದೇ ಒತ್ತಡಕ್ಕೂ ಮಣಿಯಬಾರದು. ರೈತರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು.

ವನ್ಯಪ್ರಾಣಿ–ಮಾನವ ಸಂಘರ್ಷ ಹೆಚ್ಚುತ್ತಲೇ ಇದ್ದು, ಇದನ್ನು ನಿಯಂತ್ರಿಸಲು ಈ ಆಯವ್ಯಯದಲ್ಲಿ ಅಧಿಕ ಅನುದಾನ ನೀಡಬೇಕು. ವನ್ಯಪ್ರಾಣಿಗಳ ಹಾವಳಿಗೆ ತುತ್ತಾಗಿ ಮಡಿದವರ ಕುಟುಂಬಕ್ಕೆ ಹಾಲಿ ಇರುವ 20 ಲಕ್ಷ ರೂ. ಪರಿಹಾರ ಧನವನ್ನು 50 ಲಕ್ಷಕ್ಕೆ ಹೆಚ್ಚಿಸಬೇಕು. ಸಂತ್ರಸ್ತರ ಕುಟುಂಬಕ್ಕೆ ಒಂದು ಖಾಯಂ ಉದ್ಯೋಗ ನೀಡಬೇಕು. ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಸಂಪೂರ್ಣ ಸರ್ಕಾರವೇ ಭರಿಸಬೇಕು. ಮೃತರ ಕುಟುಂಬದ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದರು.

ಕೃಷಿಕರು ಕೃಷಿ ಚಟುವಟಿಕೆಗಳಲ್ಲಿ ತೊಡಗಿದಾಗ ಆಗುವ ವಿದ್ಯುತ್ ಅವಘಡ, ಯಂತ್ರಗಳಿಂದಾಗುವ ಅನಾಹುತ, ವಿಷಜಂತುಗಳಿಂದಾಗುವ ಅನಾಹುತಗಳಿಗೆ ಈಗ ನೀಡುತ್ತಿರುವ ಪರಿಹಾರ ಕಡಿಮೆ ಇದ್ದು. ಇದನ್ನು ಹೆಚ್ಚಿಸಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸರ್ಕಾರ ನಿಗದಿ ಮಾಡಿರುವ ಶುಲ್ಕ ಅತ್ಯಂತ ದುಬಾರಿಯಾಗಿದ್ದು, ಇದನ್ನು ಕೈಬಿಟ್ಟು ಹಳೇ ಪದ್ಧತಿಯನ್ನು ಮುಂದುವರಿಸಬೇಕು. ಕನಿಷ್ಠ ಹಗಲು 12 ಗಂಟೆ 3 ಫೇಸ್ ವಿದ್ಯುತ್ ನೀಡಲು ತೀರ್ಮಾನಿಸಬೇಕು ಸೌರಶಕ್ತಿ ವಿದ್ಯುತ್ ಸಂಪರ್ಕವನ್ನು ಮತ್ತಷ್ಟು ವ್ಯಾಪಕಗೊಳಿಸಬೇಕು. ತೋಟದ ಮನೆಗಳಿಗೂ ಗೃಹ ಬಳಕೆಯ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಬೇಕು, ವಿದ್ಯುತ್ ಬಿಲ್‌ಗೆ ಸಂಬಂಧಿಸಿದಂತೆ ಎಲ್ಲರಿಗೂ ಅನ್ವಯವಾಗುವ ನಿಯಮಗಳನ್ನು ಇವರಿಗೂ ಅನ್ವಯಿಸಬೇಕು ಎಂದು ಮನವಿ ಮಾಡಿದರು.

ರೈತ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ಕರೆಯ ಮೇರೆಗೆ ಕರ ನಿರಾಕರಣ ಚಳವಳಿಯಲ್ಲಿ ಗೃಹ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿರುವ ಕುಟುಂಬಗಳ ಬಾಕಿಯನ್ನು ಸಂಪೂರ್ಣ ಮನ್ನಾ ಮಾಡಬೇಕು. ಕೃಷಿ ಉಪಕರಣಗಳ ಮೇಲೆ ಶೇ: 18 ಜಿ.ಎಸ್.ಟಿ ವಿಧಿಸುತ್ತಿರುವುದು ದುಬಾರಿ ಆಗಿದ್ದು, ರಾಜ್ಯ ಸರ್ಕಾರ ತನ್ನ ಪಾಲನ್ನು ಕನಿಷ್ಠ ದರಕ್ಕೆ ಇಳಿಸಬೇಕು .ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮೇಲು ಒತ್ತಡ ತರಬೇಕು. ಸರ್ವೆ ವೆಚ್ಚವನ್ನು ಕಡಿತಗೊಳಿಸಬೇಕು. ಹದ್ದುಬಸ್ತು ಪೋಡಿ ದುರಸ್ತಿ ಸ್ಕೆಚ್, ಹೌಸಿಂಗ್ ಇ–ಸ್ವತ್ತು ನಕ್ಷೆ ಸರ್ಕಾರಿ ಸೇವೆಯಾಗಿದ್ದು, ಅದಕ್ಕೆ ದುಬಾರಿ ಶುಲ್ಕ ವಿಧಿಸಲಾಗುತ್ತಿದೆ. ಶುಲ್ಕವನ್ನು ಮೊದಲಿದ್ದ ದರಕ್ಕೆ ಇಳಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ನಾಗನಹಳ್ಳಿ ವಿಜಯೇಂದ್ರ, ಮರಂಕಯ್ಯ ಇದ್ದರು.

ದೇಶ - ವಿದೇಶ

ಕಾರು–ಲಾರಿ ಮುಖಾಮುಖಿ ಡಿಕ್ಕಿ: ಸ್ಥಳದಲ್ಲೇ 7 ಜನ ಸಾವು



ವಲ್ಸಾದ್, ಫೆ.20– ಗುಜರಾತ್‌ನ ವಲ್ಸಾದ್ ಜಿಲ್ಲೆಯ ಕಪ್ರಡಾ (Kaprada) ತಾಲೂಕಿನಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಏಳು ಜನರು ಸಾವನ್ನಪ್ಪಿದ್ದಾರೆ. ಅತಿ ವೇಗವಾಗಿ ಬಂದ ಸರಕು ಸಾಗಣೆ ಲಾರಿ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಕಾರಿನಲ್ಲಿದ್ದ ಏಳು ಮಂದಿ ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಭೇಟಿ ನೀಡಿದ್ದು, ಅಪಘಾತಕ್ಕೆ ನಿಖರ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಗಾಯಗೊಂಡವರನ್ನು ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರ ದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ತನಿಖೆಯನ್ನು ಚುರುಕುಗೊಳಿಸಲು ಸೂಚಿಸಿದ್ದಾರೆ.

ಹತ್ತು ದಿನ ಟೈಂ ಕೊಡ್ತೀನಿ, ಹೇಳಿದ್ದು ಕೇಳದೆ ಇದ್ರೆ ಯುದ್ಧ ಗ್ಯಾರಂಟಿ!

ಇರಾನ್‌ಗೆ ಗಡುವು ಕೊಟ್ಟ ಟ್ರಂಪ್

ವಾಷಿಂಗ್ಟನ್, ಫೆ.20–ಅಮೆರಿಕ ಮತ್ತು ಇರಾನ್ (Iran) ನಡುವಿನ ಉದ್ವಿಗ್ನತೆ ಉತ್ತುಂಗಕ್ಕೇರಿದೆ. ಟ್ರಂಪ್ ಒಂದರ ನಂತರ ಒಂದರಂತೆ ಬೆದರಿಕೆಗಳನ್ನು ಹಾಕುತ್ತಿದ್ದಾರೆ. ಈಗ ಅಮೆರಿಕ ಇರಾನ್‌ಗೆ ಕೇವಲ ಹತ್ತು ದಿನಗಳ ಗಡುವು ನೀಡಿದೆ. ತಾವು ಹೇಳಿದ ಹಾಗೆ ಕೇಳದಿದ್ದರೆ ಯುದ್ಧ ಗ್ಯಾರಂಟಿ ಎಂದು ಟ್ರಂಪ್ ಹೇಳಿದ್ದಾರೆ. ಪರಿಣಾಮಗಳು ಭೀಕರವಾಗಿರುತ್ತವೆ ಎಂದು ಹೇಳುವ ಮೂಲಕ ಖಮೇನಿಗೆ ಅಲ್ಟಿಮೇಟಮ್ ನೀಡಿದ್ದಾರೆ. ಟ್ರಂಪ್ ಅವರ ಈ ಅಂತಿಮ ಎಚ್ಚರಿಕೆ ಮಧ್ಯಪ್ರಾಚ್ಯದಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ. ಅಮೆರಿಕ ರಣ ಕಹಳೆ ಮೊಳಗಿಸಿದೆ .



ಗುರುವಾರ ನಡೆದ ಗಾಜಾ ಶಾಂತಿ ಮಂಡಳಿಯ ಸಭೆಯಲ್ಲಿ ಅಧ್ಯಕ್ಷ ಟ್ರಂಪ್, ಟೆಹ್ರಾನ್‌ಗೆ ನೇರ ಎಚ್ಚರಿಕೆ ನೀಡಿದ್ದಾರೆ. ಮುಂದಿನ 10 ದಿನಗಳಲ್ಲಿ, ಇರಾನ್‌ನೊಂದಿಗೆ ಒಪ್ಪಂದವಾಗುತ್ತದೆಯೇ ಅಥವಾ ಯುದ್ಧವಾಗುತ್ತದೆಯೇ ಎಂಬುದು ಇಡೀ ಜಗತ್ತಿಗೆ ತಿಳಿಯಲಿದೆ. ಯಾವುದೇ ಒಪ್ಪಂದಕ್ಕೆ ಬರದಿದ್ದರೆ ಮುಂದಿನ ಹೆಜ್ಜೆ ಇಡಬೇಕಾಗುತ್ತದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಈ ಮುಂದಿನ ಹೆಜ್ಜೆ ಎಂದರೆ ಇರಾನ್‌ನ ಪರಮಾಣು ಸೌಲಭ್ಯಗಳ ಮೇಲೆ ನೇರವಾಗಿ ದಾಳಿ ಮಾಡುವ ಎಚ್ಚರಿಕೆ ಆಗಿದೆ.

ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದ ರೈಲಿನ ಮೇಲೆ ಕಲ್ಲು ತೂರಾಟ

ನವದೆಹಲಿ, ಫೆ.20– ಉತ್ತರ ಪ್ರದೇಶದ ಹರ್ಡೋಯಿ ಜಿಲ್ಲೆಯಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಕಲ್ಲು ತೂರಾಟ ನಡೆದಿರುವುದು ವರದಿಯಾಗಿದೆ. ಈ ಘಟನೆಯಲ್ಲಿ ರೈಲಿನ ಸಿ4 ಬೋಗಿಗೆ ಹಾನಿಯಾಗಿದ್ದು, ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.



ಲಖನೌ–ದೆಹಲಿ ವಂದೇ ಭಾರತ್ ರೈಲಿನಲ್ಲಿ ಮೇರಠ್‌ಗೆ ಮರಳುತ್ತಿದ್ದ ವೇಳೆ ಹರ್ಡೋಯಿ ಜಿಲ್ಲೆಯ ಒಂದು ಗ್ರಾಮದಲ್ಲಿ ಈ ಕಲ್ಲು ತೂರಾಟ ನಡೆದಿದೆ. ಮೋಹನ್ ಭಾಗವತ್ ಅವರಿಗೆ ಯಾವುದೇ ಗಾಯವಾಗಿಲ್ಲ. ನಿನ್ನೆ ಮಧ್ಯಾಹ್ನ ಸುಮಾರು 3:20ಕ್ಕೆ ಹರ್ಡೋಯಿ ಜಿಲ್ಲೆಯ ಕೌಢಾ ಗ್ರಾಮದ ಸಮೀಪ ಈ ಘಟನೆ ನಡೆದಿದೆ. ಘಟನೆಯಲ್ಲಿ ರೈಲಿನ ಒಂದು ಕಿಟಕಿಯ ಗಾಜು ಒಡೆದಿದೆ.

ಆರ್‌ಪಿಎಫ್ ತನಿಖೆ ಆರಂಭ: ಈ ಪ್ರಕರಣದ ತನಿಖೆಯನ್ನು ಮೇರಠ್‌ನ ರೈಲ್ವೆ ರಕ್ಷಣಾ ಪಡೆ (RPF) ನಡೆಸಲಿದೆ. ಮೋಹನ್ ಭಾಗವತ್ ಸಂಪೂರ್ಣ ಸುರಕ್ಷಿತರಾಗಿದ್ದರು. ಅವರು ನಿನ್ನೆ ರಾತ್ರಿ ಸುಮಾರು 9 ಗಂಟೆಗೆ ತೀವ್ರ ಭದ್ರತೆಯ ನಡುವೆ ಮೇರಠ್ ರೈಲು ನಿಲ್ದಾಣದಲ್ಲಿ ಇಳಿದು, ಶತಾಬ್ದಿ ನಗರದಲ್ಲಿರುವ ಮಾಧವ ಕುಂಜ್‌ಗೆ ತೆರಳಿದರು. ಇಂದು ಮತ್ತು ನಾಳೆ ನಡೆಯುವ ಎರಡು ದಿನಗಳ ಸಂವಾದ ಕಾರ್ಯಕ್ರಮದಲ್ಲಿ ಅವರು ಕ್ರೀಡಾಪಟುಗಳು ಮತ್ತು ಬುದ್ಧಿಜೀವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಫುಟ್ಬಾಲ್ ಆಡುತ್ತಿದ್ದಾಗ ಕುಸಿದು ಬಿದ್ದು ಶಿಲ್ಲಾಂಗ್ ಸಂಸದ ರಿಕಿ ಸಿಂಗ್ಕಾನ್ ಸಾವು

ಶಿಲ್ಲಾಂಗ್, ಫೆ.20– ಸ್ನೇಹಿತರ ಜೊತೆ ಫುಟ್ಬಾಲ್ ಆಡುತ್ತಿದ್ದಾಗಲೇ ಹೃದಯಾಘಾತ ಸಂಭವಿಸಿ ಶಿಲ್ಲಾಂಗ್ ಲೋಕಸಭಾ ಸದಸ್ಯ ರಿಕಿ ಎಜೆ ಸಿಂಗ್ಕಾನ್ ಮೃತಪಟ್ಟಿರುವ ದಾರುಣ ಘಟನೆ ವರದಿಯಾಗಿದೆ.



ಮೇಘಾಲಯದ ವಾಯ್ಸ್ ಆಫ್ ಪೀಪಲ್ ಪಕ್ಷದಿಂದ ಸಂಸದರಾಗಿ ಆಯ್ಕೆಯಾಗಿದ್ದ 54 ವರ್ಷ ವಯಸ್ಸಿನ ರಿಕಿ, ಸ್ನೇಹಿತರ ಜತೆ ಆಟವಾಡುತ್ತಿದ್ದಾಗ ಕುಸಿದು ಬಿದ್ದರು. ತಕ್ಷಣವೇ ಅವರನ್ನು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಬಳಿಕ ಅವರನ್ನು ನಗರದ ಡಾ.ಎಚ್.ಗೋರ್ಡೋನ್ ರಾಬರ್ಟ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಅವರು ರಾತ್ರಿ 8.42ರ ವೇಳೆಗೆ ಮೃತಪಟ್ಟರು ಎಂದು ಅಧಿಕೃತ ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಕೊನ್ರಾಡ್ ಕೆ.ಸಂಗ್ಮಾ ಈ ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿದ್ದು, ಸಿಂಗ್ಕಾನ್ ಅತ್ಯಂತ ಬದ್ಧತೆಯ ಜನಪ್ರತಿನಿಧಿಯಾಗಿದ್ದರು ಎಂದಿದ್ದಾರೆ. ಸಿಂಗ್ಕಾನ್ ಅವರು ಶಿಲ್ಲಾಂಗ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಅವರು 2024ರ ಚುನಾವಣೆಯಲ್ಲಿ ಕಾಂಗ್ರೆಸ್ ಸಂಸದ ವಿನ್ಸೆಂಟ್ ಎಚ್ ಪಾಲಾ ವಿರುದ್ಧ 3.7 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು.

ರಾಹುಲ್ ಗಾಂಧಿಯನ್ನು ಶೂಟ್ ಮಾಡುತ್ತೇನೆ: ಬೆದರಿಕೆ ಹಾಕಿದ ವ್ಯಕ್ತಿ ಬಂಧನ

ನವದೆಹಲಿ, ಫೆ.20–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ಇತರ ಸಂಸದರನ್ನು ಗುಂಡಿಕ್ಕುವುದಾಗಿ ಬೆದರಿಕೆ ಹಾಕಿದ ವಿಡಿಯೋವನ್ನು ಅಪ್‌ಲೋಡ್ ಮಾಡಿದ ಆರೋಪದ ಮೇಲೆ ರಾಜಸ್ಥಾನದ ಕೋಟಾದಲ್ಲಿ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.



ಪೊಲೀಸರ ಪ್ರಕಾರ, ವಿಡಿಯೋದಲ್ಲಿ ಕಾಣಿಸಿಕೊಂಡ ವ್ಯಕ್ತಿ ತನ್ನನ್ನು ರಾಜ್ ಸಿಂಗ್ ಎಂದು ಪರಿಚಯಿಸಿಕೊಂಡು, ಕರಣಿ ಸೇನೆಯ ಕೋಟಾ ಘಟಕದ ವಕ್ತಾರ ಎಂದು ಹೇಳಿಕೊಂಡಿದ್ದಾನೆ.

ವಿಡಿಯೋದಲ್ಲಿ ಸಿಂಗ್, 25 ಕಾಂಗ್ರೆಸ್ ಸಂಸದರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಅಪಮಾನಕಾರಿ ಮಾತುಗಳನ್ನು ಹೇಳಿದ್ದಾರೆ ಎಂದು ಕರಣಿ ಸೇನೆ ಕಾರ್ಯಕರ್ತರು ಅಸಮಾಧಾನಗೊಂಡಿದ್ದಾರೆ ಎಂದು ಹೇಳುತ್ತಾನೆ.

ಇದನ್ನು ರಾಹುಲ್ ಗಾಂಧಿಯ ಆದೇಶದ ಮೇರೆಗೆ ಮಾಡಲಾಗಿದೆ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಸಂಸದರು ಓಂ ಬಿರ್ಲಾ ಅವರಿಗೆ ಕ್ಷಮೆ ಕೇಳದಿದ್ದರೆ, ಅವರನ್ನು ಅವರ ಮನೆಗಳ ಮುಂದೆ ಗುಂಡಿಕ್ಕಲಾಗುವುದು ಎಂದು ವಿಡಿಯೋದಲ್ಲಿ ಬೆದರಿಕೆ ಹಾಕಿದ್ದಾನೆ.

ಕಾಡಾನೆ ದಾಳಿಗೆ ಮಹಿಳೆ ತೀವ್ರ ಗಾಯ





ಹಾನಿಗೀಡಾಗಿರುವ ಜೀಪು

ಕಾಡಾನೆ ದಾಳಿಗೆ ತುತ್ತಾದ ಕಾರ್ಮಿಕ ಮಹಿಳೆಗೆ ಮಾಲ್ದಾರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು.

ಸಿದ್ದಾಪುರ, ಫೆ.20–ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ಮಹಿಳೆ ಗಾಯಗೊಂಡು ಇತರ ಕಾರ್ಮಿಕರು ಪ್ರಾಣಾಪಾಯದಿಂದ ಪಾರಾದ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ತಟ್ಟಳ್ಳಿಯಲ್ಲಿ ನಡೆದಿದೆ.

ಮಧ್ಯಾಹ್ನದ ವೇಳೆ ಸಮೀಪದ ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಮೇಲೆ ಕಾಡಾನೆ ದಾಳಿಗೆ ಯತ್ನಿಸಿದ ಸಂದರ್ಭ ಕಾರ್ಮಿಕ ಮಹಿಳೆ ಸುನಿತಾ ಕಾಡಾನೆ ದಾಳಿಯಿಂದ ಬಿದ್ದು ಗಂಭೀರ ಗಾಯಗೊಂಡು ಮಾಲ್ದಾರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಬಳಿಕ ಸಿದ್ದಾಪುರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕಾಫಿ ತೋಟದಲ್ಲಿದ್ದ ಇತರ ಕಾರ್ಮಿಕರು ಪ್ರಾಣಾಪಾಯದಿಂದ ಓಡಿ ಪಾರಾಗಿದ್ದಾರೆ.

ತಕ್ಷಣ ಸ್ಥಳಕ್ಕೆ ಆಗಮಿಸಿದ ಆರ್‌ಆರ್‌ಟಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಕಾಫಿ ತೋಟದಲ್ಲಿದ್ದ ಕಾಡಾನೆಯನ್ನು ಕಾಡಿಗಟ್ಟಲು ಮುಂದಾಗಿದ್ದಾರೆ. ಈ ಸಂದರ್ಭ ಕಲ್ಲಳ-ತಟ್ಟಳ್ಳಿ ಮಾರ್ಗದ ರಸ್ತೆಯಲ್ಲಿ ಕಾರ್ಮಿಕರನ್ನು ಕರೆತಂದಿದ್ದ ಜೀಪು ನಿಲ್ಲಿಸಲಾಗಿತ್ತು. ಕಾಫಿ ತೋಟದಿಂದ ರಸ್ತೆಗೆ ಬಂದ ಕಾಡಾನೆ ಪ್ರವೀಣ ಎಂಬವರಿಗೆ ಸೇರಿದ ಜೀಪಿನ ಮೇಲೆ ದಾಳಿ ಮಾಡಿ ಜಖಂಗೊಳಿಸಿದೆ.

ಆನೆ ಅಟ್ಟಲು ತೆರಳಿದ ಅರಣ್ಯ ಇಲಾಖೆ ಸಿಬ್ಬಂದಿಗಳ ಮೇಲು ಕಾಡಾನೆ ದಾಳಿಗೆ ಯತ್ನಿಸಿತ್ತಾದರೂ ಆನೆಯನ್ನು ಕಾಡಿಗಟ್ಟುವಲ್ಲಿ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ. ಕೆಲವು ದಿನಗಳಿಂದ ನಿರಂತರವಾಗಿ ಕಾಡಾನೆ ಕಾರ್ಮಿಕರ ಮೇಲೆ ದಾಳಿಗೆ ಮುಂದಾಗುತ್ತಿದೆ. ಆತಂಕ ಸೃಷ್ಟಿಸುತ್ತಿರುವ ಕಾಡಾನೆಯನ್ನು ಸೆರೆಹಿಡಿದು ಸ್ಥಳಾಂತರಿಸಬೇಕೆಂದು ಕಾರ್ಮಿಕ ಸಂಘಟನೆಯ ಮುಖಂಡ ಮಣಿ ಒತ್ತಾಯಿಸಿದ್ದಾರೆ.

ಬರಹಗಾರರನ್ನು ಪ್ರೋತ್ಸಾಹಿಸುವ ಕಾರ್ಯ ನಿರಂತರವಾಗಿ ನಡೆಯಲಿ: ಬಾಲಸುಬ್ರಮಣ್ಯ



ಮಡಿಕೇರಿ, ಫೆ.20–ಬರಹಗಾರರನ್ನು ಪ್ರೋತ್ಸಾಹಿಸುವ ಕಾರ್ಯ ನಿರಂತರವಾಗಿ ಕೊಡಗಿನಲ್ಲಿ ನಡೆಯಬೇಕು ಎಂದು ಹಿರಿಯ ಸಾಹಿತಿ ಬಾಲಸುಬ್ರಮಣ್ಯ ಕಂಜರ್ಪಣೆ ಹೇಳಿದ್ದಾರೆ.

ನಗರದ ರೆಡ್ ಬ್ರಿಕ್ಸ್ ಇನ್‌ನ ಸತ್ಕಾರ್ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕೊಡಗು ಪತ್ರಕರ್ತರ ಸಂಘದ ಸಹಯೋಗದಲ್ಲಿ ಬಿ.ಎಸ್. ಗೋಪಾಲ ಕೃಷ್ಣ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ಕೆ.ಬಿ. ಸೂರ್ಯ ಕುಮಾರ್ ಅವರಿಗೆ 'ವೈದ್ಯ ಕಂಡ ವಿಸ್ಮಯ' ಕೃತಿಗಾಗಿ ಪ್ರಶಸ್ತಿ ಪ್ರದಾನ ಮಾಡಿ, ಕೃತಿ, ಲೇಖನ ರಚನೆಗೆ ವಯಸ್ಸಿನ ನಿರ್ಬಂಧ ಇಲ್ಲ. ಯಾವುದೇ ವಯಸ್ಸಿನಲ್ಲಿಯೂ ಉತ್ತಮ ಲೇಖನ, ಕೃತಿ ರಚನೆ ಸಾಧ್ಯವಿದೆ. ಸೂರ್ಯ ಕುಮಾರ್ ಅವರೇ ಈ ಮಾತಿಗೆ ಉತ್ತಮ ನಿದರ್ಶನ ವಾಗಿದ್ದಾರೆ ಎಂದು ಪ್ರಶಂಸಿಸಿದರು.

ಹಿರಿಯ ಸಾಹಿತಿ ಬಿ.ಎ. ಷಂಶುದ್ದೀನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಹಿರಿಯ ಪತ್ರ ಕರ್ತರಾದ ಜಿ.ರಾಜೇಂದ್ರ, ಬಿ.ಜಿ.ಅನಂತ ಶಯನ ಮೊದಲಾದವರು ಮಾತನಾಡಿ ಹಿರಿಯ ಪತ್ರಕರ್ತ ಗೋಪಾಲಕೃಷ್ಣರ ಸೇವೆಯನ್ನು ಸ್ಮರಿಸಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, ಪ್ರತೀ ವೈದ್ಯನಲ್ಲಿಯೂ ಬರಹಗಾರನಿದ್ದಾನೆ. ಆದರೆ ವೈದ್ಯರ ಬರಹ ಔಷಧಿ ವ್ಯಾಪಾರಸ್ಥ ಎಂಬ ಮಾತಿದೆ. ವೈದ್ಯ ನೋರ್ವ ಲೇಖಕನೂ ಆದಾಗ ಅವರೊಳಗಿನ ಅನೇಕ ವಿಚಾರಗಳ ಜ್ಞಾನ ಓದುಗನಿಗೂ ನಿಲುಕುತ್ತದೆ. ಇದಕ್ಕೆ ಡಾ.ಸೂರ್ಯ ಕುಮಾರ್ ಅವರ ವೈದ್ಯಕೀಯ ಕ್ಷೇತ್ರದ ಕುರಿತ ಕುತೂಹಲಕಾರಿ ಕೃತಿಗಳೇ ಉದಾಹರಣೆಯಾಗಿದೆ ಎಂದು ಹೇಳಿದರು. ಪ್ರಶಸ್ತಿ ಸ್ವೀಕರಿಸಿದ ಲೇಖಕ ಡಾ.ಕೆ.ಬಿ. ಸೂರ್ಯ ಕುಮಾರ್ ಮಾತನಾಡಿ, ಲೇಖಕನಿಗೆ ಓದುಗರೇ ದೇವರು. ಓದುಗರು ಮೆಚ್ಚಿದರೆ ಮಾತ್ರ ಲೇಖಕ ಬೆಳೆಯಲು ಸಾಧ್ಯ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಕೃತಿ ಇತರ ವೈದ್ಯರುಗಳಿಗೆ ಸ್ಫೂರ್ತಿಯಾಗಲಿ. ಇತರ ವೈದ್ಯರುಗಳು ಕೂಡ ಸೂರ್ಯಕುಮಾರ್ ಅವರಂತೆ ಸಾಹಿತ್ಯದತ್ತ ಒಲವು ತೋರುವಂತಾಗಲಿ ಎಂದರು.

ಗೀತಾ ಸೂರ್ಯಕುಮಾರ್, ರಾಜಲಕ್ಷ್ಮಿ ಗೋಪಾಲ ಕೃಷ್ಣ, ಜಿ.ಚಿದ್ವಿಲಾಸ್ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತಲಿನ ಸಾಹಿತ್ಯಾಭಿಮಾನಿಗಳು ಪಾಲ್ಗೊಂಡಿದ್ದರು. ವಿದೂಷಿ ಮೇಘಾ ಭಟ್ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಪುದಿನೆರವನ ರೇವತಿ ರಮೇಶ್, ಖಜಾಂಚಿ ಎಸ್.ಎಸ್.ಸಂಪತ್ ಕುಮಾರ್, ಪತ್ರಕರ್ತರ ಸಂಘದ ನಿರ್ದೇಶಕ ಉಜ್ವಲ್ ರಂಜಿತ್, ಸ್ಪರ್ಧೆಯ ತೀರ್ಪುಗಾರ ಸುಬ್ರಾಯ ಸಂಪಾಜೆ, ಪ್ರತಿಮಾ ಹರೀಶ್‌ರೈ, ರಜನಿ ಮತ್ತಿತರರಿದ್ದರು.

ಗೂಡ್ಸ್ ವಾಹನಕ್ಕೆ ಕಾಡುಕೋಣ ಡಿಕ್ಕಿ



ಸಿದ್ದಾಪುರ, ಫೆ.20–ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದಲ್ಲಿ ಗೂಡ್ಸ್ ವಾಹನಕ್ಕೆ ಕಾಡುಕೋಣ ಒಂದು ಡಿಕ್ಕಿ ಹೊಡೆದ ಪರಿಣಾಮ ವಾಹನ ಪಲ್ಟಿಯಾದ ಘಟನೆ ಬೆಳಗ್ಗೆ ನಡೆದಿದೆ.

ಕರಡಿಗೋಡು ಗ್ರಾಮಕ್ಕೆ ತೆರಳುತ್ತಿದ್ದ ಗೂಡ್ಸ್ ವಾಹನಕ್ಕೆ ಅಡ್ಡ ಬಂದು ಡಿಕ್ಕಿಯಾದ ಪರಿಣಾಮ ವಾಹನ ಪಲ್ಟಿಯಾಗಿ ಚಾಲಕ ಸೇರಿದಂತೆ ವಾಹನದಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗೂಡ್ಸ್ ವಾಹನದ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದರೆ, ಡಿಕ್ಕಿಯ ರಭಸಕ್ಕೆ ಕಾಡುಕೋಣದ ಕಾಲು ಮುರಿತಕ್ಕೊಳಗಾಗಿ ಕಾಫಿ ತೋಟದಲ್ಲಿ ಮಲಗಿದೆ.

ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪಶು ವೈದ್ಯರನ್ನು ಕರೆಯಿಸಿ ಕಾಡುಕೋಣಕ್ಕೆ ಪ್ರಥಮ ಚಿಕಿತ್ಸೆ ನೀಡಿದರು. ಬಳಿಕ ಹೆಚ್ಚಿನ ಚಿಕಿತ್ಸೆಗೆ ಆನೆಚೌಕೂರು ವನ್ಯ ಜೀವಿ ಸಂರಕ್ಷಣಾ ಕೇಂದ್ರಕ್ಕೆ ವಾಹನದಲ್ಲಿ ಸ್ಥಳಾಂತರಿಸಲಾಯಿತು. ವಿರಾಜಪೇಟೆ ವಲಯ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಂ, ಉಪವಲಯ ಅರಣ್ಯಾಧಿಕಾರಿ ಸಂಜೀತ್ ಸೋಮಯ್ಯ, ತಿತಿಮತಿ ವಲಯ ಅರಣ್ಯಾಧಿಕಾರಿ ಗಂಗಾಧರ್, ಆನೆ ಚೌಕೂರು ವಲಯ ಅರಣ್ಯಾಧಿಕಾರಿ ದೇವರಾಜ್ ಮತ್ತು ಆರ್‌ಆರ್‌ಟಿ ಸಿಬ್ಬಂದಿಗಳು ಭೇಟಿ ನೀಡಿದ್ದರು.

ಗಾಂಜಾ, ಎಂಡಿಎಂಎ ಮಾರಾಟ: ಐವರ ಬಂಧನ

ಮಡಿಕೇರಿ, ಫೆ.20–ಮಡಿಕೇರಿ ಗ್ರಾಮಾಂತರ ಠಾಣಾ ವ್ಯಾಪ್ತಿಯ ಕಿಗ್ಗಾಲು ಮತ್ತು ಕಡಗದಾಳು ಗ್ರಾಮದಲ್ಲಿ ಗಾಂಜಾ ಮತ್ತು ಎಂಡಿಎಂಎ ಮಾರಾಟ ಮಾಡುತ್ತಿದ್ದ 5 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಕಿಗ್ಗಾಲು ಗ್ರಾಮದ ಕಾರ್ತಿಕ್(27), ಹೆಚ್.ಜಿ.ಹರ್ಷವರ್ಧನ್ (26), ನೀರು ಕೊಲ್ಲಿ ಸಾಜೀರ್(39), ಶಾರೂಖ್(28), ಇಬ್ನಿವಳವಾಡಿಯ ನಿಯಾಸ್(39) ಎಂಬವರನ್ನು ಬಂಧಿಸಲಾಗಿದೆ.

ಆರೋಪಿಗಳ ಬಳಿ ಇದ್ದ 245 ಗ್ರಾಂ ಗಾಂಜಾ ಮತ್ತು 28.50 ಗ್ರಾಂ ಎಂಡಿಎಂಎ ಕೃತ್ಯಕ್ಕೆ ಬಳಸಿದ 1 ಆಟೋ ರಿಕ್ಷಾ ಮತ್ತು 1 ಕಾರನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಿವಿಲ್ ನ್ಯಾಯಾಧೀಶರಾಗಿ ಸಿಮ್ರಾನ್ ಆಯ್ಕೆ

ವಿರಾಜಪೇಟೆ, ಫೆ.20–ಪಟ್ಟಣದ ನಿವಾಸಿ ಸೈಯದಾ ಕಾಶ್ಮೀರ ಸಿಮ್ರಾನ್ ಸಿವಿಲ್ ನ್ಯಾಯಾ ಧೀಶರಾಗಿ ಆಯ್ಕೆಯಾಗಿದ್ದಾರೆ.



ವಿರಾಜಪೇಟೆ ಪಟ್ಟಣದ ದಖ್ಖನಿ ಮೊಹಲ್ಲದಲ್ಲಿರುವ ಮೌಂಟನ್ ವ್ಯೂ ಶಾಲೆಯ ಸ್ಥಾಪಕರಾದ ದಿ.ಸಯ್ಯದ್ ನಜೀರ್ ಅಹ್ಮದ್ ಮತ್ತು ಸೈಯದಾ ನಿಖತ್ ಅಸ್ಮ ಅವರ ಪುತ್ರಿ ಸೈಯದಾ ಕಾಶ್ಮೀರ ಸಿಮ್ರಾನ್ ಹೈಕೋರ್ಟ್ ನಡೆಸಿದ ಸ್ಪರ್ಧಾತ್ಮಕ ಪರಿಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲಿಯೇ 30ನೇ ರ್‍ಯಾಂಕ್ ಗಳಿಸಿ ನ್ಯಾಯಾಧೀಶರ ಹುದ್ದೆಗೆ ನೇಮಕವಾಗಿದ್ದಾರೆ ಇವರು ಮೈಸೂರಿನ ವಿದ್ಯಾವಿಕಾಸ ಕಾಲೇಜಿನಲ್ಲಿ ಬಿಬಿಎ ಎಲ್‌ಎಲ್‌ಬಿ ಕಾನೂನು ಪದವಿ ಪಡೆದುಕೊಂಡು ಎರಡು ವರ್ಷದ ಹಿಂದೆ ಹಿರಿಯ ವಕೀಲರಾದ ಐ.ಆರ್.ಪ್ರಮೋದ್ ಅವರ ಮಾರ್ಗದರ್ಶನದಲ್ಲಿ ಕಿರಿಯ ವಕೀಲರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಹೆಬ್ಬಾಲೆಯಲ್ಲಿ ವಿಜೃಂಭಣೆಯ ಹಿಂದೂ ಸಂಗಮ ಶೋಭಾಯಾತ್ರೆ



ಹೆಬ್ಬಾಲೆಯಲ್ಲಿ ಹಿಂದೂ ಸಂಗಮದ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ಕುಶಾಲನಗರ ಫೆ.20– ತಾಲೂಕು ಹಿಂದೂ ಸಂಗಮ ಆಯೋಜನಾ ಸಮಿತಿ ಮತ್ತು ಹೆಬ್ಬಾಲೆ ಮಂಡಲದ ವತಿಯಿಂದ ಶುಕ್ರವಾರ ಹೆಬ್ಬಾಲೆಯಲ್ಲಿ ಹಿಂದೂ ಸಂಗಮದ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ಹಿಂದೂ ಬಾಂಧವರು ಕೇಸರಿ ಶಲ್ಯ ಧರಿಸಿ ಬಾವುಟ ಹಿಡಿದು ಕಣಿವೆ ಶ್ರೀ ರಾಮಲಿಂಗೇಶ್ವರ ದೇವಾಲಯ ಬಳಿಯಿಂದ ಹೆಬ್ಬಾಲೆಯ ಬನಶಂಕರಿ ಸಮುದಾಯ ಭವನದವರೆಗೆ ಮೆರವಣಿಗೆಯಲ್ಲಿ ಸಾಗಿ ಬಂದರು. ಚಂಡೆವಾದ್ಯ, ವೀರಗಾಸೆ ಸಮ್ಮುಖದಲ್ಲಿ ಕಳಸ ಹೊತ್ತು ಮಹಿಳೆಯರು ಮೆರವಣಿಗೆಯಲ್ಲಿ ಭಾಗಿಯಾಗಿ ಮೆರಗು ನೀಡಿದರು. ಭಾರತಾಂಬೆಯ ಭಾವಚಿತ್ರ ಹೊತ್ತ ಬೆಳ್ಳಿರಥದಲ್ಲಿ ವಿವಿಧ ವೇಷಧಾರಿಯ ಶಾಲಾ ವಿದ್ಯಾರ್ಥಿಗಳು ಗಮನ ಸೆಳೆದರು. ಮೆರವಣಿಗೆಯಲ್ಲಿ ಸಾಗಿಬಂದ ಹಿಂದೂ ಬಾಂಧವರಿಗೆ ಮಜ್ಜಿಗೆ, ತಂಪು ಪಾನಿಯ ವಿತರಣೆ ಮಾಡಲಾಯಿತು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಸುಳ್ಯದ ಡಾ.ಮನೋಜ್ ದಿಕ್ಸೂಚಿ ಭಾಷಣ ಮಾಡಿದರು. ದಿವ್ಯ ಸಾನಿಧ್ಯ ವಹಿಸಿದ್ದ ಕೊಡ್ಲಿಪೇಟೆ ಕಿರಿಕೊಡ್ಲಿ ಮಠಾಧೀಶರಾದ ಶ್ರೀ ಸದಾಶಿವ ಸ್ವಾಮೀಜಿ, ತೊರೆನೂರು ವಿರಕ್ತ ಮಠದ ಶ್ರೀ ಮಲ್ಲೇಶ ಸ್ವಾಮೀಜಿ ಆಶೀರ್ವಚನ ನೀಡಿದರು. ಜಿಪಂ ಮಾಜಿ ಸದಸ್ಯ ಶ್ರೀನಿವಾಸ್ ಮಾತನಾಡಿದರು.

ತಾಲೂಕು ಹಿಂದೂ ಸಂಗಮ ಆಯೋಜನಾ ಸಮಿತಿ ಸಂಯೋಜಕ ದೇವಿಪ್ರಸಾದ್, ಹೆಬ್ಬಾಲೆ ಗ್ರಾಪಂ ಮಾಜಿ ಅಧ್ಯಕ್ಷೆ ಅರುಣ ಕುಮಾರಿ, ಜಿಪಂ ಮಾಜಿ ಅಧ್ಯಕ್ಷ ಹೆಚ್.ಎಸ್.ಅಶೋಕ್, ಗ್ರಾಪಂ ಸದಸ್ಯರುಗಳಾದ ಮಂಜುನಾಥ್, ಪರಮೇಶ್, ಹೆಚ್.ಎಸ್. ರಘು, ಕಣಿವೆ ಶ್ರೀ ರಾಮಲಿಂಗೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಸುರೇಶ್, ನಿವೃತ್ತ ಶಿಕ್ಷಕ ಲೋಕೇಶ್, ಹೆಬ್ಬಾಲೆ ವಿದ್ಯಾವರ್ಧಕ ಸಂಘದ ಮಾಜಿ ಅಧ್ಯಕ್ಷ ಹೆಚ್.ಎಲ್. ಮಂಜುನಾಥ್ ಮುಖಂಡರಾದ ಮಂಜುಳಾ ಮಹಾದೇವ್, ಕಲ್ಪನಾ ಪ್ರಕಾಶ್, ಭಾಗ್ಯ ಪ್ರಭಾಕರ್, ಪವಿತ್ರ ನಾಗೇಶ್, ಸುರೇಶ್, ಲಕ್ಷ್ಮಿ ದಿನೇಶ್, ಯಜಮಾನ ಬಸವ ರಾಜು, ಹೆಚ್.ಟಿ.ಮಂಜುನಾಥ್, ಪುಟ್ಟಿ, ಟಿ.ಬಿ.ಜಗದೀಶ್, ಚಂದ್ರಶೇಖರ್ ಹೆರೂರು, ಭರತ್ ಮಾಚಯ್ಯ, ಹರೀಶ್, ನವನೀತ್, ಮೋಹನ್, ಮತ್ತಿತರರು ಇದ್ದರು.

ಇಂದು ವಿದ್ಯುತ್ ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮ

ಮಡಿಕೇರಿ ಫೆ.20– ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಕಾರ್ಯ ಮತ್ತು ಪಾಲನೆ ಕ್ಷೇತ್ರ ಮಟ್ಟದಲ್ಲಿ ಗ್ರಾಹಕರಿಗೆ, ಸಾರ್ವಜನಿಕರಿಗೆ, ಸಿಬ್ಬಂದಿಗಳಿಗೆ ವಿದ್ಯುತ್ ಸೇವೆಗಳ ಹಾಗೂ ವಿದ್ಯುತ್ ಸುರಕ್ಷತಾ ಅರಿವನ್ನು ಮೂಡಿಸಲು ಅರಿವು ಸಪ್ತಾಹ ಕಾರ್ಯಕ್ರಮವನ್ನು ಉಪ ವಿಭಾಗ ಮಟ್ಟದಲ್ಲಿ ಆಯೋಜಿಸಲು ನಿರ್ಧರಿಸಿದ್ದು, ಕುಶಾಲನಗರ ಉಪ ವಿಭಾಗ ವ್ಯಾಪ್ತಿಯಲ್ಲಿ ವಿದ್ಯುತ್ ಅವಘಡ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸುವ ಸಲುವಾಗಿ ಫೆ.21 ರಂದು ಬೆಳಗ್ಗೆ 11 ಗಂಟೆಗೆ ಕುಶಾಲನಗರ ಉಪ ವಿಭಾಗ ಕಚೇರಿ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸೆಸ್ಕಾಂನ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ತಿಳಿಸಿದ್ದಾರೆ.

ಶಾಸಕರಿಗೆ ಅಭಿನಂದನೆ



ರಾಜ್ಯ ಪೌರ ಸೇವಾ ನೌಕರರ ಸಂಘದ ಮಹಿಳಾ ರಾಜ್ಯಾಧ್ಯಕ್ಷೆ ಮೊಳ್ಳೆರ ಶೈಲಾ ಅಪ್ಪಣ್ಣ ಶುಕ್ರವಾರ ಶಾಸಕ ಎ ಎಸ್. ಪೊನ್ನಣ್ಣ ಅವರನ್ನು ಬೆಂಗಳೂರಿನ ಕಚೇರಿಯಲ್ಲಿ ಅಭಿನಂದಿಸಿದರು.

ಶಂಕರಿ ಮಂದಣ್ಣ ನಿಧನ



ನಾಪೋಕ್ಲು: ನೆಲಜಿ ಗ್ರಾಮದ ನಿವಾಸಿ ಮೊಣ್ಣಂಡ ದಿವಂಗತ ಸುಬ್ಬಯ್ಯರ ಪುತ್ರ ಶಂಕರಿ ಮಂದಣ್ಣ (79) ಶುಕ್ರವಾರ ನಿಧನರಾದರು. ಮೃತರು ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು.

ಅರಮನೆ ಪಾಲೆ ಸಿ ಅಕ್ಕಮ್ಮ

ನಾಪೋಕ್ಲು, ಫೆ.20– ಗ್ರಾಪಂ ಮಾಜಿ ಸದಸ್ಯೆ ಅರಮನೆ ಪಾಲೆ ಸಿ ಅಕ್ಕಮ್ಮ, (ಅಕ್ಕು 72) ಶುಕ್ರವಾರ ನಿಧನರಾದರು. ಮೃತರು ಮೂವರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು. ಇಲ್ಲಿಯ ಪಂಚಾಯಿತಿಯ ಮನವಿಯಂತೆ ಮೃತರ ಗೌರವಾರ್ಥ ಪಟ್ಟಣದ ಅಂಗಡಿಗಳನ್ನು ಮಧ್ಯಾಹ್ನ 1 ಗಂಟೆಗಳ ಕಾಲ ಬಂದ್ ಮಾಡಿ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಕೆಸ್ತೂರು ಗ್ರಂಥಾಲಯಕ್ಕೆ ಮತ್ತಷ್ಟು ಮೆರಗು



ಯಳಂದೂರು: ತಾಲೂಕಿನ ಕೆಸ್ತೂರು ಗ್ರಾಮವು ವಿನೂತನ ಚಿಂತನೆಯುಳ್ಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರಾಜ್ಯದಲ್ಲಿಯೇ ಹೆಸರುವಾಸಿಯಾಗಿದೆ.

ಕಳೆದ ಆರು ವರ್ಷಗಳ ಹಿಂದೆ ಗೌರಿ ಗಣೇಶ ಹಬ್ಬದಂದು ಗಣಪತಿಗೆ ಬ್ರೇಕ್ ಗ್ರಂಥಾಲಯಕ್ಕೆ ಸಾತ್ ಎಂಬ ಶೀರ್ಷಿಕೆ ಅಡಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗ್ರಂಥಾಲಯವನ್ನು ಪ್ರಾರಂಭ ಮಾಡಲಾಗಿತ್ತು.

ಅಂದಿನಿಂದ ಇಂದಿನವರೆಗೂ ಈ ಗ್ರಂಥಾಲಯವು ಸದಾ ಓದುಗರನ್ನು ಒಳಗೊಂಡಿದೆ. ಇದೀಗ ಮತ್ತಷ್ಟು ಮೆರಗು ಬಂದಿದೆ. ವಿದ್ಯಾರ್ಥಿಗಳು, ಯುವ ಜನರು, ನಾಗರಿಕರಿಗೆ ಓದಲು ಅಧಿಕ ಸಮಯವನ್ನು ನೀಡಲಾಗಿದೆ. ಅನೇಕ ಸಾಮಾಜಿಕ ಮತ್ತು ಸಮುದಾಯದ ವಿಚಾರಗಳನ್ನು ಚರ್ಚಿಸಲು ಮುಕ್ತ ಅವಕಾಶವನ್ನು ನೀಡುತ್ತ ಬಂದಿದೆ. ಗ್ರಾಮದಲ್ಲಿರುವ ಮಕ್ಕಳಿಂದ ಹಿಡಿದು ವಿಚಾರವಂತರು ಕೂಡ ಈ ಗ್ರಂಥಾಲಯಕ್ಕೆ ಆಗಮಿಸುತ್ತಿದ್ದಾರೆ. ಈ ಗ್ರಂಥಾಲಯದ ಸಭಾಂಗಣವನ್ನು ಭೀಮಸದನ ಎಂಬ ನಾಮಾಕಿಂತ ಮಾಡಲಾಗಿದೆ ಈ ಸಂದರ್ಭದಲ್ಲಿ ತಾಲೂಕು ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿಯ ಅಧ್ಯಕ್ಷರು ಸಿದ್ದರಾಜು, ಯಜಮಾನರಾದ ಸಿದ್ದರಾಜು, ಬಸವರಾಜು ಮುಖಂಡರಾದ ಚಿನ್ನಸ್ವಾಮಿ, ಶಿವು, ರಾಜೇಶ್ ಹಾಗೂ ಸಚಿನ್ ಬಿ, ಮಹೇಂದ್ರ ಹಾಜರಿದ್ದರು.

ಒಳ ಮೀಸಲಾತಿ ವಿರೋಧಿಸಿ ಸತ್ತೇಗಾಲದಲ್ಲಿ ಬೈಕ್ ರ್‍ಯಾಲಿ



ಸತ್ತೇಗಾಲದಲ್ಲಿ ಒಳ ಮೀಸಲಾತಿಯನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಕೊಳ್ಳೇಗಾಲ: ಕೊಳ್ಳೇಗಾಲ ಪಟ್ಟಣದಲ್ಲಿ ಒಳ ಮೀಸಲಾತಿಗೆ ತೀವ್ರ ವಿರೋಧ ವ್ಯಕ್ತಪಡಿಸಿ ತಾಲೂಕಿನ ಸತ್ತೇಗಾಲ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಸಂಘ ಹಾಗೂ ವಿವಿಧ ಸಂಘಟನೆಗಳ ಒಕ್ಕೂಟದ ಪರಿಶಿಷ್ಟ ಜಾತಿ ಬಲಗೈ ಸಮಾಜದ ಮುಖಂಡರು ರ್‍ಯಾಲಿ ಮೂಲಕ ಪ್ರತಿಭಟನೆ ನಡೆಸಿದರು.

ಈ ವೇಳೆ ಸಾಹಿತಿ ಶಂಕನಪುರ ಮಹದೇವ್ ಮಾತನಾಡಿ, ಒಳಮೀಸಲಾತಿಯ ಪ್ರವರ್ಗ ಎ,ಬಿ,ಸಿ ಮಸೂದೆಯನ್ನು ಹಿಂಪಡೆಯದೆ ಹೋದರೆ ಬಲಗೈ ಸಮುದಾಯದವರು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಸಚಿವರಾದ ಜಿ.ಪರಮೇಶ್ವರ್, ಹೆಚ್.ಸಿ. ಮಹದೇವಪ್ಪ ಪ್ರಿಯಾಂಕ್ ಖರ್ಗೆ ವಿರುದ್ಧ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದಕ್ಕೂ ಮುನ್ನ ಸತ್ತೇಗಾಲದಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಸೋಮಣ್ಣ ಅವರು ಬೈಕ್ ರ್‍ಯಾಲಿಗೆ ಚಾಲನೆ ನೀಡಿದರು.

ಈ ವೇಳೆ ಹನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಕುಂದ ವರ್ಮ ಮಾತನಾಡಿ ಬಿ ವರ್ಗಕ್ಕೆ ಸರ್ಕಾರಿ ಉದ್ಯೋಗ, ಶಿಕ್ಷಣದಲ್ಲಿ ಬಹಳ ಹೊಡೆತ ಬೀಳಲಿದೆ ಇದರಿಂದ ಭಾರೀ ಅನ್ಯಾಯವಾಗಲಿದ್ದು, ಸಮುದಾಯದ ಸಚಿವರು, ಶಾಸಕರು ಇದರ ಬಗ್ಗೆ ಯಾಕೆ ಮಾತನಾಡುತ್ತಿಲ್ಲ. ಇದೇ ರೀತಿ ಮುಂದುವರಿದರೆ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಚಳುವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು. ಬಳಿಕ ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸತ್ತೇಗಾಲ ಗ್ರಾಮದ ಮುಖಂಡ ಸಿದ್ದರಾಜು, ಶಾಂತರಾಜು, ಸತ್ತೇಗಾಲ ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲೇಶ್, ಪುಟ್ಟಸ್ವಾಮಿ, ರಾಜಶೇಖರ್, ನಾರಾಯಣ ಸ್ವಾಮಿ, ಬೆಂಕಿ ಮಹದೇವ, ಮುಕುಂದ ವರ್ಮ, ಶಿವಶಂಕರ್, ಬಸವಣ್ಣ, ಭಾಸ್ಕರ್, ಜಯರಾಜು, ಶಿವಕುಮಾರ್, ಯುವಕ ಅಧ್ಯಕ್ಷ ಅವಿನಾಶ್, ಮಾಜಿ ಅಧ್ಯಕ್ಷ ಲಿಂಗರಾಜು, ವಿನು, ಮುಖಂಡರು ಶಂಕನಪುರ ಮಹದೇವ, ನಟರಾಜು, ಸನತ್ ಕುಮಾರ್, ಡಾ.ಅಂಬೇಡ್ಕರ್ ಪ್ರತಿಮೆ ನಿರ್ಮಾತೃ ಓಲೆ ಮಹದೇವ, ಮಹಿಳಾ ಸಂಘಟನೆಯ ಶಿವಮ್ಮ, ಪುಟ್ಟಮಾದಯ್ಯ, ಅಣಗಳ್ಳಿ ಬಸವರಾಜು, ಶೇಖರ್ ಬುದ್ಧ, ಚಿನ್ನಸ್ವಾಮಿ ಇನ್ನಿತರಿದ್ದರು.

ಉರುಳಿಗೆ ಹುಲಿ ಬಲಿ ಪ್ರಕರಣ: ಆರೋಪಿ ಬಂಧನ

ಜಿಂಕೆ ಭೇಟೆಗೆ ಹಾಕಿದ್ದ ಉರುಳಿಗೆ ಸಿಲುಕಿ ಹುಲಿ ಸಾವು




ಚಾಮರಾಜನಗರ: ಉರುಳಿಗೆ ಸಿಲುಕಿ ಗುಂಡಾಲ್ ಜಲಾಶಯದಲ್ಲಿ ಹುಲಿ ಮೃತಪಟ್ಟ ಪ್ರಕರಣ ಸಂಬಂಧ ಓರ್ವ ಆರೋಪಿಯೊಬ್ಬನನ್ನು ಬಿಆರ್‌ಟಿ ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕೊಂಗರಹಳ್ಳಿಯ ನಿವಾಸಿ ಕುಮಾರ್ (35) ಬಂಧಿತ ಆರೋಪಿ. ಫೆ. 15ರಂದು ಸುಮಾರು 6 ವರ್ಷದ ಗುಂಡು ಹುಲಿ ಮೃತಪಟ್ಟು ಅದರ ದೇಹ ಗುಂಡಾಲ್ ಜಲಾಶಯದಲ್ಲಿ ತೇಲಾಡುತ್ತಿತ್ತು. ವಿಷಯ ತಿಳಿದು ಸ್ಥಳಕ್ಕೆ ಬಂದ ಅಧಿಕಾರಿಗಳು ಹುಲಿಯ ದೇಹದ ಮರಣೋತ್ತರ ಪರೀಕ್ಷೆ ನಡೆಸಿದಾಗ ಬೇಟೆಗಾರರು ಅರಣ್ಯ ಪ್ರದೇಶದಲ್ಲಿ ಕಾಡು ಪ್ರಾಣಿಗಳಿಗೆ ಹಾಕಿದ್ದ ಉರುಳಿಗೆ ಹುಲಿ ಸಿಲುಕಿ ಮೃತಪಟ್ಟಿರುವುದು ಖಾತರಿಯಾಯಿತು.

ಈ ಸಂಬಂಧ ಅರಣ್ಯ ಪ್ರದೇಶದಲ್ಲಿ ಉರುಳು ಹಾಕಿರುವ ಬಗ್ಗೆ ಎರಡು ಶ್ವಾನ ದಳಗಳಿಂದ ಕೂಂಬಿಂಗ್ ನಡೆಸಿದರೂ ಉರುಳು ಸಿಗಲಿಲ್ಲ. ತನಿಖೆ ಮುಂದುವರಿಸಿ ಕೊಂಗರಹಳ್ಳಿ ಗ್ರಾಮದ ಸೋಮಣ್ಣನ ಮಗ ಕುಮಾರ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಜಿಂಕೆ ಭೇಟೆಯಾಡಲು ಉರುಳು ಹಾಕಿದ್ದೆ ಎಂದು ತನಿಖೆಯಲ್ಲಿ ಒಪ್ಪಿಕೊಂಡಿದ್ದಾನೆ ಎಂದು ಬಿಆರ್‌ಟಿ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಆರೋಪಿ ಕುಮಾರನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ತನಿಖೆಯನ್ನು ಮುಂದುವರಿಸಲಾಗಿದೆ ಎಂದು ಬಿಆರ್‌ಟಿ ಎಸಿಎಫ್ ಮಂಜುನಾಥ್ ಹೇಳಿದರು.

ಒಂದು ಲಕ್ಷ ಮನೆಗಳಲ್ಲಿ ಮನೆಗೊಂದು ಗ್ರಂಥಾಲಯ



'ಮನೆಗೊಂದು ಗ್ರಂಥಾಲಯ' ಕರಪತ್ರವನ್ನು ಗಣ್ಯರು ಬಿಡುಗಡೆಗೊಳಿಸಿದರು.

ಚಾಮರಾಜನಗರ, ಫೆ.20– ಪುಸ್ತಕ ಎಂಬುದು ಸಂಸ್ಕೃತಿಯಾಗಿ ಮನೆ ಮನೆಯ ಜ್ಞಾನದ ಸಂಪತ್ತಾಗಿ ಅಸ್ತಿತ್ವ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಕನಿಷ್ಠ 1 ಲಕ್ಷ ಮನೆಗಳಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆಯನ್ನು ಜಾರಿಗೆ ತಂದಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಅವರು ತಿಳಿಸಿದರು.

ನಗರದ ರೋಟರಿ ಭವನದ ಸಭಾಂಗಣದಲ್ಲಿಂದು ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ರೋಟರಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆ 'ಮನೆಗೊಂದು ಗ್ರಂಥಾಲಯ' ಕರಪತ್ರ ಬಿಡುಗಡೆ ಹಾಗೂ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರಿಗೆ ನೇಮಕಾತಿ ಪತ್ರ ವಿತರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮನೆಗೊಂದು ಗ್ರಂಥಾಲಯವು ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಅಸ್ತಿತ್ವಕ್ಕೆ ತರುವ ಗುರಿಯೊಂದಿಗೆ ಕಾರ್ಯೋನ್ಮುಖರಾಗಿದ್ದೇವೆ. ಇದಕ್ಕೆ ಬೇಕಾಗುವ ಪುಸ್ತಕಗಳ ಖರೀದಿಯಿಂದ ಪುಸ್ತಕ ಪ್ರಕಾಶಕರಿಗೆ, ಪುಸ್ತಕ ವ್ಯಾಪಾರಿಗಳಿಗೆ, ಕಾಗದ ಮಾರಾಟಗಾರರಿಗೆ, ವಿತರಕರಿಗೆ ಹೀಗೆ ಇಡೀ ಪುಸ್ತಕ ಉದ್ಯಮ ವರ್ಷಪೂರ್ತಿ ಕ್ರಿಯಾಶೀಲವಾಗಿರುತ್ತದೆ ಎಂದರು.

ಮನೆಗಳಲ್ಲಿ ಸ್ಥಾಪನೆಯಾದ ಗ್ರಂಥಾಲಯಗಳ ಬೆಳವಣಿಗೆ ಹಾಗೂ ಇದರ ವಾರಸುದಾರರನ್ನು ಗೌರವಿಸುವ ಹಾಗೂ ಉತ್ತೇಜಿಸುವ ಸಲುವಾಗಿ ಪ್ರಾಧಿಕಾರ ರಾಜ್ಯದ 4 ಕಂದಾಯ ವಿಭಾಗಗಳಿಗೂ ನಾಲ್ವರು ವಿದ್ವಾಂಸರ ಹೆಸರಿನಲ್ಲಿ ನಾಲ್ಕು ಪ್ರಶಸ್ತಿಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ನಂಜನಗೂಡು ತಿರುಮಲಾಂಬ, ಹಾ.ಮಾ.ನಾಯಕ, ಪಿ.ಆರ್. ತಿಪ್ಪೇಸ್ವಾಮಿ, ಗಳಗನಾಥ ಅವರ ಹೆಸರಿನಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ ಎಂದು ಅಧ್ಯಕ್ಷರು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಾಹಿತಿಗಳು, ದೀನಬಂಧು ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಗಳಾದ ಪ್ರೊ. ಜಿ.ಎಸ್. ಜಯದೇವ ಅವರು ಬದುಕು, ಜೀವನದ ಮೇಲೆ ಪರಿಣಾಮಕಾರಿಯಾಗಿ ಪ್ರಭಾವ ಬೀರುವ ಶಕ್ತಿ ಪುಸ್ತಕಗಳಿಗಿದೆ. ಅಸಾಧಾರಣ ಬದಲಾವಣೆಗೆ ಕಾರಣವಾಗಿರುವ ಪುಸ್ತಕಗಳ ಬಗ್ಗೆ ಪ್ರೀತಿ ಇರಬೇಕು. ವಿಶೇಷವಾಗಿ ವಿದ್ಯಾರ್ಥಿಗಳು ಪುಸ್ತಕದ ಬಗ್ಗೆ ಒಲವು, ಅಭಿರುಚಿ ಹೊಂದಬೇಕು ಎಂದು ಸಲಹೆ ನೀಡಿದರು.

ಜೆ.ಎಸ್.ಎಸ್. ಮಹಿಳಾ ಕಾಲೇಜಿನ ಪ್ರಾಂಶುಪಾಲರದ ಡಾ.ಎನ್. ಮಹದೇವಸ್ವಾಮಿ, ರೋಟರಿ ಸಂಸ್ಥೆ ಅಧ್ಯಕ್ಷರಾದ ಕಾಗಲವಾಡಿ ಚಂದ್ರು, ಮನೆಗೊಂದು ಗ್ರಂಥಾಲಯ ಜಾಗೃತಿ ಸಮಿತಿಯ ಸಂಚಾಲಕರಾದ ಸಿ.ಎಂ.ನರಸಿಂಹಮೂರ್ತಿ, ಸದಸ್ಯರಾದ ಮೂಕಳ್ಳಿ ಬಸವಣ್ಣ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಅಕ್ರಮ ಮದ್ಯ ಮಾರಾಟ ಆರೋಪಿ ಬಂಧನ

ಕೊಳ್ಳೇಗಾಲ, ಫೆ.20– ತಾಲೂಕಿನ ಶಿವನಸಮುದ್ರ ಗ್ರಾಮದ ಮಧ್ಯರಂಗನಾಥ ದೇವಸ್ಥಾನದ ಬಳಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಓರ್ವನನ್ನು ಬಂಧಿಸಿ, ಒಂದು ಸಾವಿರ ರೂ ಮೌಲ್ಯದ ಮಧ್ಯವನ್ನು ಜಪ್ತಿ ಮಾಡಲಾಗಿದೆ.

ಶಿವನಸಮುದ್ರ ಗ್ರಾಮದ ಕೆಂಪರಾಜು (51) ಎಂಬಾತನನ್ನು ಬಂಧಿಸಿ, ಈತನಿಂದ 10 ಪೌಚ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈತ ತನ್ನ ಮನೆಯ ಮುಂದೆ ಇರುವ ಸಾರ್ವಜನಿಕರ ಸ್ಥಳದಲ್ಲಿ ಮದ್ಯ ಮಾರಾಟ ಮಾಡುತ್ತಿರುವಾಗ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿ, ಮದ್ಯವನ್ನು ಜಪ್ತಿ ಮಾಡಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪತ್ರಕರ್ತರ ಗೃಹ ನಿರ್ಮಾಣ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚಾಮರಾಜನಗರ: ತಾಲೂಕು ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಈ.ಮಂಜುನಾಥ್ ಹಾಗೂ ಉಪಾಧ್ಯಕ್ಷರಾಗಿ ವೀರಭದ್ರಪ್ಪ ಅವಿರೋಧವಾಗಿ ಆಯ್ಕೆಯಾದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಚುನಾವಣೆ ನಡೆದು ಸಂಘದ ಅಧ್ಯಕ್ಷ ಸ್ಥಾನಕ್ಕೆ ಎಂ.ಈ.ಮಂಜುನಾಥ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ವೀರಭದ್ರಪ್ಪ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾದ ಪದ್ಮನಾಭ ಅವರು ಅವಿರೋಧ ಆಯ್ಕೆ ಘೋಷಿಸಿದರು.

ಚುನಾವಣೆಯಲ್ಲಿ ಸಂಘದ ನಿರ್ದೇಶಕರಾದ ಆರ್.ಎಂ.ಲಿಂಗಪ್ಪ, ಸಿ.ಮಹೇಂದ್ರ, ವೀರಭದ್ರ ನಾಯಕ, ಕಾಗಲವಾಡಿ ಬಸವಣ್ಣ, ಆರ್.ರಾಜೇಂದ್ರ, ವೈ.ಕೆ.ಮೋಳೆ ಬಸವರಾಜು, ಹೊಸೂರು ರಾಜು, ರಾಮ ಸಮುದ್ರ ಬಾಬು, ಎಂ.ಜಿ.ಶ್ರೀಕಾಂತ್ ಪಾಲ್ಗೊಂಡಿದ್ದರು. ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ, ನಮ್ಮ ಸಂಘವು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸಂಪೂರ್ಣ ಸಹಕಾರ ನೀಡಲಿದೆ. ಪತ್ರಕರ್ತರಿಗೆ ನಿವೇಶನ ಕೊಡಿಸಲು ನೂತನ ಪದಾಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಗೋವಿಂದವಾಡಿ ಗ್ರಾಪಂ ಪಿಡಿಒ ಮುಂದುವರಿಸಲು ಒತ್ತಾಯ



ಈ ಹಿಂದಿನ ಪಿಡಿಓ ಮುಂದುವರೆಸುವಂತೆ ಕೋರಿ ಗ್ರಾಮಸ್ಥರಿಂದ ಮನವಿ ಸಲ್ಲಿಕೆ.

ಚಾಮರಾಜನಗರ: ತಾಲೂಕಿನ ಹರವೆ ಹೋಬಳಿಯ ಗೋವಿಂದವಾಡಿ (ಕಲ್ಪುರ) ಗ್ರಾಪಂ ಪ್ರಭಾರ ಪಿಡಿಒ ಶಿವಕುಮಾರ್ ಅವರನ್ನು ಮುಂದುವರಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಜಿಪಂ ಸಿಇಒಗೆ ಮನವಿ ಸಲ್ಲಿಸಿದರು. ಪಂಚಾಯಿತಿ ವ್ಯಾಪ್ತಿಯಲ್ಲಿ ಸೋಲಾರ್ ಪ್ಲಾಂಟ್‌ಗೆ ಇ–ಸ್ವತ್ತು ನೀಡಲು ಸಾಮಾನ್ಯ ಸಭೆಯ ಅಜೆಂಡಾದಲ್ಲಿ ಇಡದೇ ಹಾಗೂ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾ ಧ್ಯಕ್ಷರು, ಸದಸ್ಯರುಗಳ ಗಮನಕ್ಕೂ ತಾರದೇ ಏಕಾಏಕಿಯಾಗಿ ಕಾನೂನು ಬಾಹಿರವಾಗಿ ಹಿಂದಿನ ಪಿಡಿಒ ಪಿ.ಗಿರೀಶ್ ಅವರು ಇ–ಸ್ವತ್ತು ನೀಡಿದ್ದಾರೆ ಎಂದು ಆರೋಪಿಸಿದರು.

ಗ್ರಾಮದಲ್ಲಿ ಕುಡಿಯುವ ನೀರು ನೈರ್ಮಲ್ಯದ ಕೊರತೆ ಇದ್ದರು ಯಾವುದೇ ಅಭಿವೃದ್ಧಿ ಕೆಲಸ ಮಾಡದೇ ಇರುವ ಪಿ.ಡಿ.ಓ. ಪಿ.ಗಿರೀಶ್ ರವರ ವಿರುದ್ಧ ತಾವು ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಆರೋಗ್ಯದ ನೆಪವೊಡ್ಡಿ ಮೂರು ತಿಂಗಳ ರಜೆ ನೀಡಿದ್ದು ಗಿರೀಶ್ ಅವರನ್ನು ಬೇರೆಡೆ ವರ್ಗಾವಣೆ ಮಾಡದೇ ಮುಂದುವರಿಸಿದ್ದಲ್ಲಿ ಪ್ರತಿಭಟನೆ ನಡೆಸಲಾಗುವುದು. ಆದ್ದರಿಂದ ಹಾಲಿ ಪ್ರಭಾರ ಪಿಡಿಒ ಶಿವಕುಮಾರ್ ಅವರನ್ನೇ ಮುಂದುವರಿಸಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಶ್ರೀಕಂಠಪ್ಪ ನಿಧನ



ಬೇಗೂರು(ಗುಂಡ್ಲುಪೇಟೆ): ಸಮೀಪದ ಹಾಲಹಳ್ಳಿ ಗ್ರಾಮದ ನಿವಾಸಿ ಶ್ರೀಕಂಠಪ್ಪ (80) ಗುರುವಾರ ರಾತ್ರಿ ನಿಧನರಾದರು ದಿವಂಗತರು ಪತ್ನಿ, ಪುತ್ರಿ, ಮಿಲಿಟರಿ ಸೇವೆಯಲ್ಲಿರುವ ಪುತ್ರ, ಹಾಗೂ ಸಹೋದರ ಸಹೋದರಿಯರು ಸೊಸೆ, ಮೊಮ್ಮಕ್ಕಳನ್ನು ಬಿಟ್ಟು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮ ಹಾಲಹಳ್ಳಿ ಗ್ರಾಮದ ತೋಟದಲ್ಲಿ ಶುಕ್ರವಾರ ನಡೆಯಿತು

ನಾಳೆ 'ಅಂಬಲಿ' ಕೃತಿ ಲೋಕಾರ್ಪಣೆ

ಮೈಸೂರು,ಫೆ.20(ಜಿಎ)–ತಾವು ರಚಿಸಿರುವ ಆತ್ಮಕಥನ 'ಅಂಬಲಿ' ಕೃತಿ ಲೋಕಾರ್ಪಣೆ ಸಮಾರಂಭ ಫೆ.22 ರಂದು ಬೆಳಗ್ಗೆ 10.30ಕ್ಕೆ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಡಾ. ಹೆಬ್ಬಾಲೆ ಕೆ. ನಾಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಉದ್ಘಾಟಿಸುವರು. ಮಡ್ಡಿಕೆರೆ ಗೋಪಾಲ್ ಕೃತಿ ಬಿಡುಗಡೆಗೊಳಿಸಲಿದ್ದಾರೆ. ಡಾ.ಹೆಚ್.ಲಕ್ಷ್ಮಿನಾರಾಯಣಸ್ವಾಮಿ ಕೃತಿ ಕುರಿತು ಮಾತನಾಡುವರು. ಮಾಜಿ ಮೇಯರ್ ಪುರುಷೋತ್ತಮ್ ಅಧ್ಯಕ್ಷತೆ ವಹಿಸುವರು. ಡಾ.ಎಸ್. ಮಂಗಳ ಮೂರ್ತಿ, ಸತೀಶ್ ಜವರೇಗೌಡ, ಕುಮಾರಸ್ವಾಮಿ, ಎಂ.ಕೆ.ಶ್ರೀಧರ್, ಕೆ.ಎನ್.ಚಂದ್ರಶೇಖರ್, ಪುಟ್ಟೇಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಎಲ್ಲಾ ಸಮುದಾಯಗಳ ನಡುವೆ ತಾವು ಬೆಳೆದಿದ್ದು, ಅವರ ನೋವು, ನಲಿವು ಮೊದಲಾದವನ್ನು ಕೃತಿ ಒಳಗೊಂಡಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಈ ಕೃತಿ ಮಹತ್ವ ಪಡೆದಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಸವಣ್ಣ, ಕೆ.ಎನ್. ಚಂದ್ರಶೇಖರ್, ಎಸ್.ರವಿಕುಮಾರ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು


ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಪರಿಸರ ಪ್ರೇಮಿಗಳು, ಫ್ಯಾಕ್ಟರಿ ನೌಕರರ ವಿರೋಧ: ಕ್ರೀಡಾ ಪ್ರೇಮಿಗಳು, ಸಾರ್ವಜನಿಕರ ಒತ್ತಾಯದ ನಡುವೆ

ಸಿಲ್ಕ್ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಅಧಿಕೃತ ಚಾಲನೆ



ಸಿಲ್ಕ್ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಹಿನ್ನೆಲೆಯಲ್ಲಿ ರೇಷ್ಮೆ ಇಲಾಖೆಯಿಂದ ಕ್ರೀಡಾ ಇಲಾಖೆಗೆ ನೀಡಲಾಗಿರುವ ಭೂಮಿಯ ಹಕ್ಕು ಪತ್ರವನ್ನು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಕ್ರೀಡಾ ಇಲಾಖೆಯ ಅಧಿಕಾರಿಗಳಿಗೆ ಹಸ್ತಾಂತರಿಸಿದರು.

ತಿ.ನರಸೀಪುರ, ಫೆ.20– ಪರಿಸರ ಪ್ರೇಮಿಗಳು ಹಾಗೂ ಫ್ಯಾಕ್ಟರಿ ನೌಕರರ ವಿರೋಧ, ಕ್ರೀಡಾ ಪ್ರೇಮಿಗಳು ಹಾಗೂ ಸಾರ್ವಜನಿಕರ ಒತ್ತಾಯದ ನಡುವೆ ಪಟ್ಟಣದ ಸಿಲ್ಕ್ ಫ್ಯಾಕ್ಟರಿ ಆವರಣದಲ್ಲಿ ಶುಕ್ರವಾರ ಕ್ರೀಡಾಂಗಣ ನಿರ್ಮಾಣ ಕಾರ್ಯಕ್ಕೆ ಅಧಿಕೃತವಾಗಿ ಚಾಲನೆ ದೊರೆಯಿತು.

ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಅವರಿಗೆ ಕಾರ್ಖಾನೆ ಆವರಣದ 5 ಎಕರೆ ಭೂಮಿ ಹಕ್ಕು ಪತ್ರವನ್ನು ಹಸ್ತಾಂತರಿಸಿದರು.

ರೇಷ್ಮೆ ಇಲಾಖೆಯಿಂದ ಕ್ರೀಡಾ ಇಲಾಖೆಗೆ 5 ಎಕರೆ ಭೂಮಿ ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ ಅಧಿಕೃತವಾಗಿ ಕ್ರೀಡಾಂಗಣ ಕಾಮಗಾರಿ ಪ್ರಕ್ರಿಯೆ ನಾಳೆಯಿಂದಲೇ ಆರಂಭವಾಗಲಿದೆ ಎಂಬ ಸೂಚನೆಯನ್ನು ಅಧಿಕಾರಿಗಳು ನೀಡಿದ್ದಾರೆ.

ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದರಿಂದ ಮರಗಳು, ಪ್ರಾಣಿ ಪಕ್ಷಿಗಳು ಹಾಗೂ ಪರಿಸರಕ್ಕೆ ಹಾನಿಯಾಗಲಿದ್ದು, ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಕೈ ಬಿಡುವಂತೆ ಪರಿಸರವಾದಿಗಳು ಒತ್ತಾಯಿಸಿದ್ದರೆ, ಮತ್ತೊಂದೆಡೆ ತಾಪಂ ಮಾಜಿ ಉಪಾಧ್ಯಕ್ಷ ಡಾ.ಮರಯ್ಯ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಂಗಣ ನಿರ್ಮಾಣಕ್ಕೆ 10 ಕೋಟಿ ಬಿಡುಗಡೆ ಮಾಡಿದ್ದು ಕೂಡಲೇ ಕಾಮಗಾರಿ ಆರಂಭಿಸಬೇಕೆಂದು ಪತ್ರಿಕಾಗೋಷ್ಠಿಯಲ್ಲಿ ನಿನ್ನೆಯಷ್ಟೆ ಒತ್ತಾಯಿಸಿದ್ದರು.

ಪರ–ವಿರೋಧದ ನಡುವೆ ಅಂತಿಮವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಕಂದಾಯ ಇಲಾಖೆ ರೇಷ್ಮೆ ಇಲಾಖೆಯ 5 ಎಕರೆ ಜಮೀನನ್ನು ಹಸ್ತಾಂತರ ಮಾಡಿರುವುದರಿಂದ ಎಲ್ಲಾ ಗೊಂದಲಕ್ಕೂ ಪರಿಹಾರ ದೊರೆತು ಕ್ರೀಡಾಂಗಣ ನಿರ್ಮಾಣ ಖಚಿತವಾಗಿದ್ದು, ನಾಳೆಯಿಂದಲೇ ಹದ್ದು ಬಸ್ತಾಗಿರುವ ಭೂಮಿಗೆ ಕಾಂಪೌಂಡ್ ನಿರ್ಮಾಣ ಕಾರ್ಯ ಆರಂಭವಾಗಲಿದೆ.

ಶೀಘ್ರವೇ ಕಾಮಗಾರಿ ಆರಂಭ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಮಾತನಾಡಿ, ಸರ್ಕಾರದಿಂದ ಕ್ರೀಡಾ ಇಲಾಖೆಗೆ ಮಂಜೂರಾಗಿರುವ 5 ಎಕರೆ

ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಸಿಲ್ಕ್ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ಕ್ರೀಡಾ ಇಲಾಖೆಗೆ ಸರ್ಕಾರದಿಂದ ಹಸ್ತಾಂತರವಾಗಿದ್ದ ಜಮೀನನ್ನು ಹದ್ದುಬಸ್ತು ಮಾಡಿ ಗುರುತು ಹಾಕುವ ಮೂಲಕ ಕಾಮಗಾರಿ ಆರಂಭಿಸಲು ಅನುವು ಮಾಡಿ ಕೊಡಲಾಗಿದೆ. ಕಂದಾಯ ಇಲಾಖೆ ಸರ್ವೇಯರ್‌ರಿಂದ ಸರ್ವೇ ಮಾಡಿಸಿ 5 ಎಕರೆ ಜಮೀನನ್ನು ಆರ್‌ಟಿಸಿ ಮಾಡಿ ಕೊಡಲಾಗಿದೆ. ಹಾಗಾಗಿ ರೇಷ್ಮೆ ಇಲಾಖೆಯಿಂದ ಕ್ರೀಡಾ ಇಲಾಖೆಗೆ ವರ್ಗವಾಗಿರುವ ಜಾಗದಲ್ಲಿ ಕ್ರೀಡಾ ಇಲಾಖೆಯವರು ಕಾಮಗಾರಿ ಆರಂಭಿಸಲಿದ್ದಾರೆ. - ಟಿ.ಜೆ.ಸುರೇಶಾಚಾರ್, ತಹಸೀಲ್ದಾರ್.

ಜಾಗದ ಹಸ್ತಾಂತರ ಪ್ರಕ್ರಿಯೆ ಮುಗಿಸಿದ್ದೇವೆ. ಉದ್ದೇಶಿತ ಕಾಮಗಾರಿಯನ್ನು 6 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಎರಡ್ಮೂರು ದಿನದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ. ತಹಸೀಲ್ದಾರ್ ಅವರು ಕ್ರೀಡಾಂಗಣ ನಿರ್ಮಾಣಕ್ಕೆ ಎಲ್ಲಾ ರೀತಿಯ ಸಹಕಾರ, ಸಲಹೆ ನೀಡುತ್ತಿದ್ದಾರೆ. ಕ್ರೀಡಾಂಗಣ ನಿರ್ಮಾಣ ಸಂಬಂಧ ಮುಂದಿನ 15 ದಿನಗಳಲ್ಲಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಿದ್ದೇವೆ. 2024–25ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಅನುದಾನ ಘೋಷಣೆ ಮಾಡಿರುವುದರಿಂದ ಪ್ರಸಕ್ತ ಹಣಕಾಸು ವರ್ಷದಲ್ಲೇ ಕಾಮಗಾರಿ ಆರಂಭಿಸಿ ತ್ವರಿತವಾಗಿ ಕ್ರೀಡಾಂಗಣ ನಿರ್ಮಿಸುತ್ತೇವೆ ಎಂದರು.

ಕ್ರೀಡಾಂಗಣದಿಂದ ಪರಿಸರಕ್ಕೆ ಧಕ್ಕೆಯಾಗಲಿದೆ ಎಂಬ ಪರಿಸರವಾದಿಗಳ ಆರೋಪಕ್ಕೆ ಉತ್ತರಿಸಿದ ಅವರು, ಕ್ರೀಡಾಂಗಣ ನಿರ್ಮಿಸಬೇಕಾದರೆ ಎಲ್ಲಾ ಅಂಶಗಳನ್ನು ಕ್ರೋಢೀಕರಣ ಮಾಡುತ್ತೇವೆ. ಇಲ್ಲಿರುವ ಪರಿಸರ ಗಮನಿಸಿದಾಗ ಮರಗಳ ಮಧ್ಯೆ ಸಾಕಷ್ಟು ಜಾಗವಿದೆ. ಕ್ರೀಡಾಂಗಣ ನಿರ್ಮಾಣ ಮಾಡುವುದೆಂದರೆ ಮರಗಳನ್ನು ಕಡಿಯುವುದಲ್ಲ. ಎಷ್ಟು ಸಾಧ್ಯವೋ ಅಷ್ಟು ಮರಗಳನ್ನು ಉಳಿಸಿಕೊಂಡು ಕ್ರೀಡಾ ಅಂಕಣ ನಿರ್ಮಿಸಲಾಗುತ್ತದೆ ಎಂದರು.

ಕ್ರೀಡಾಂಗಣ ಕಾಮಗಾರಿಗೆ ಅಡ್ಡಿಪಡಿಸಬೇಡಿ: ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ಮಾತನಾಡಿ, ಕ್ರೀಡಾಂಗಣದಿಂದ ಇಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ತೊಂದರೆಯಾಗುವುದಿಲ್ಲ. ಹೇಳಿಕೆ ಮಾತು ಕೇಳಿ ಯಾರೂ ಗಲಾಟೆ ಮಾಡಿಕೊಳ್ಳಬೇಡಿ. ಒಂದು ವೇಳೆ ಅಂತಹ ಪರಿಸ್ಥಿತಿ ಎದುರಾದರೆ ನಾವೇ ಮುಖ್ಯಮಂತ್ರಿ, ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿ ನಿಮ್ಮನ್ನು ಉಳಿಸಿಕೊಳ್ಳುವ ಕೆಲಸ ಮಾಡುತ್ತೇವೆ. ಹಾಗಾಗಿ ಕಾರ್ಮಿಕರು ಏಕಾಏಕಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗೆ ಅಡ್ಡಿ ಪಡಿಸದೇ ಸಹಕಾರ ನೀಡಬೇಕು. ತಾಲೂಕಿಗೆ ಉತ್ತಮ ಕ್ರೀಡಾಂಗಣದ ಅವಶ್ಯಕತೆ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ತಾಲೂಕಿಗೆ ಕ್ರೀಡಾಂಗಣ ನಿರ್ಮಿಸಲು ಅನುದಾನ ನೀಡಿರುವುದು ನಮ್ಮ ಅದೃಷ್ಟ ಎಂದು ಭಾವಿಸಬೇಕು. ಕಾರ್ಮಿಕರು ಕಾಮಗಾರಿಗೆ ತೊಂದರೆ ಕೊಡದೇ ಸಹಕಾರ ನೀಡುವ ಮೂಲಕ ತಾಲೂಕಿನಲ್ಲಿ ಮತ್ತಷ್ಟು ಕ್ರೀಡಾಪಟುಗಳು ದೇಶ ವಿದೇಶಗಳಲ್ಲಿ ಕೀರ್ತಿ ಪತಾಕೆ ಹಾರಿಸಲು ಸಹಕಾರ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಎಇಇ ಜಯಪ್ರಕಾಶ್, ತಾಲೂಕು ಭೂ ಮಾಪಕ ಉಮೇಶ್, ಕಂದಾಯಾಧಿಕಾರಿ ಮಹೇಂದ್ರ, ಕೆಡಿಪಿ ಸದಸ್ಯ ದಿವಾಕರ್, ಯಜಮಾನ್ ಚಿಕ್ಕಲಿಂಗಯ್ಯ, ಸಿಪಿಐ ಧನಂಜಯ್, ಸಬ್ ಇನ್ಸ್‌ಪೆಕ್ಟರ್ ಧೂಳ್ ಶೆಟ್ಟಿ, ಎಎಸ್‌ಐ ಚೆಲುವರಾಜು, ಪೇದೆ ಗಳಾದ ಮಹೇಶ್, ಶಂಕರ್ ಹಾಜರಿದ್ದರು.

ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಮನವಿ ಸಲ್ಲಿಕೆ



ಕ್ರೀಡಾಂಗಣ ನಿರ್ಮಾಣ ಮಾಡಬಾರದೆಂದು ಕಾರ್ಖಾನೆಯ ಕಾರ್ಮಿಕರು ಒತ್ತಾಯಿಸಿದರು.

ತಿ.ನರಸೀಪುರ: ಒಂದೆಡೆ ಕ್ರೀಡಾಂಗಣ ನಿರ್ಮಿಸಲು ಕಂದಾಯ ಇಲಾಖೆ, ಕ್ರೀಡಾ ಇಲಾಖೆಗೆ ಭೂಮಿ ಹಕ್ಕು ಪತ್ರ ವಿತರಿಸುವ ಪ್ರಕ್ರಿಯೆ ಪೂರ್ಣಗೊಳಿಸಿ ಕ್ರೀಡಾಂಗಣ ನಿರ್ಮಾಣಕ್ಕೆ ಗ್ರೀನ್ ಸಿಗ್ನಲ್ ನೀಡಿದರೆ, ಮತ್ತೊಂದೆಡೆ ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿ ಕಾರ್ಮಿಕರು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮಹಿಳಾ ಕಾರ್ಮಿಕರು ಮಾತನಾಡಿ, ಸರ್ಕಾರ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಗುರುತಿಸುವಲ್ಲಿ ಎಡವಿದೆ. 5 ಎಕರೆಯಲ್ಲಿ ಯಾವ ಕ್ರೀಡಾಂಗಣ ನಿರ್ಮಾಣ ಮಾಡಲು ಸಾಧ್ಯ. ಕನಿಷ್ಟ 10–12 ಎಕರೆಯಾದರೂ ಬೇಕು. ಅಲ್ಲದೇ ಬಾಯ್ಲರ್‌ನಲ್ಲಿ ಕೆಲಸ ಮಾಡಿ ಸುಸ್ತಾಗಿ ಬರುವ ನಮಗೆ ವಿಶ್ರಾಂತಿಗಾಗಿ ಉತ್ತಮ ಗಾಳಿ, ಬೆಳಕು ಇರುವ ಪ್ರದೇಶದ ಅವಶ್ಯಕತೆ ಇದೆ. ಒಂದು ಕಾರ್ಖಾನೆ ಮಾಡಿದರೆ ಅಲ್ಲಿ ಶೇ.33ರಷ್ಟು ಗ್ರೀನ್ ಝೋನ್ ಇರಬೇಕಾಗುತ್ತದೆ. ಈಗ ಸರ್ಕಾರದವರು ಕ್ರೀಡಾಂಗಣ ಮಾಡಲೊರಟಿರುವ ಜಾಗದಲ್ಲಿ ನೂರಾರು ಮರಗಳಿವೆ. ಅವುಗಳನ್ನು ಕತ್ತರಿಸಿ ಕ್ರೀಡಾಂಗಣ ನಿರ್ಮಿಸಿದರೆ ಕಾರ್ಮಿಕರಿಗೆ ಉತ್ತಮವಾದ ಗಾಳಿ, ಬೆಳಕು ಸಿಗುವುದು ಕಷ್ಟ. ತಾಲೂಕಿಗೆ ಕ್ರೀಡಾಂಗಣ ಬೇಕೇಬೇಕು ಎಂಬುದು ನಮ್ಮ ಒತ್ತಾಯ ಕೂಡ. ಆದರೆ ಬೇರೆ ಜಾಗದಲ್ಲಿ ನಿರ್ಮಿಸಲಿ. ಕಾಡು ಬಸವೇಶ್ವರ ದೇವಸ್ಥಾನದ ಬಳಿ 26 ಎಕರೆ ಜಾಗ ಇದೆ. ಆಲಗೂಡು ಕೆರೆ ಸಹ ಕ್ರೀಡಾಂಗಣಕ್ಕೆ ಸೂಕ್ತವಾಗಿದೆ. ಅದನ್ನು ಬಿಟ್ಟು ಕಾರ್ಮಿಕರು ಕೆಲಸ ಮಾಡುವ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಿ ತೊಂದರೆ ಕೊಡುವುದು ಎಷ್ಟು ಸರಿ ಎಂದು ಅಳಲು ತೋಡಿಕೊಂಡರು.

ಸರ್ವಜ್ಞನ ತ್ರಿಪದಿಗಳು ಸರ್ವ ಕಾಲಕ್ಕೂ ಅನ್ವಯ

ತಹಸೀಲ್ದಾರ್ ಶ್ರೀನಿವಾಸ್



ಕೋಟೆಯಲ್ಲಿ ಸರ್ವಜ್ಞ ಜಯಂತಿ ನಡೆಯಿತು.

ಹೆಚ್.ಡಿ.ಕೋಟೆ, ಫೆ.20– ಸರ್ವಜ್ಞರು ಸರ್ವಕಾಲಕ್ಕೂ ಅನ್ವಯವಾಗುವ ತ್ರಿಪದಿಗಳನ್ನು ರಚಿಸುವ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕೆಲಸ ಮಾಡಿದರು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಸಂತ ಕವಿ ಸರ್ವಜ್ಞ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಸರ್ವಜ್ಞ ಸಮಾಜದಲ್ಲಿನ ಅಂಕು ಡೊಂಕು, ಮೂಢ ನಂಬಿಕೆ, ಹಳೆಯ ಸಂಪ್ರದಾಯಗಳು ಮತ್ತು ಕಟ್ಟುಪಾಡುಗಳ ಕುರಿತು ತಮ್ಮ ತ್ರಿಪದಿಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ಅಲ್ಲದೇ ಜನಸಾಮಾನ್ಯರಿಗೂ ಅರ್ಥವಾಗುವ ರೀತಿ ವಚನಗಳನ್ನು ರಚಿಸಿದರು. ಕವಿ ಸರ್ವಜ್ಞ ಒಂದು ಸಮಾಜ ಅಥವಾ ಸಮುದಾಯಕ್ಕೆ ಸೀಮಿತರಲ್ಲ. ಸರ್ವ ಜನರಿಗೂ ಅವರು ಉತ್ತಮ ಸಂದೇಶ ನೀಡಿದರು. ಕುಂಬಾರ ಸಮಾಜದಿಂದ ಭವನ ನಿರ್ಮಿಸಲು ನಿವೇಶನ ಕೋರಿ ಮನವಿ ನೀಡಿದ್ದು, ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ತರಲಾಗುವುದು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಜನರ ಆಡುಭಾಷೆಯಲ್ಲಿ ತ್ರಿಪದಿಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ಶ್ರೇಷ್ಠ ದಾರ್ಶನಿಕ ಸರ್ವಜ್ಞ ಎಂದರು.

ತಾಲೂಕು ಕುಂಬಾರ ಸಮಾಜದ ಅಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷ ನಾರಾಯಣಶೆಟ್ಟಿ, ಕಾರ್ಯದರ್ಶಿ ಧರ್ಮೇಂದ್ರ ಕುಮಾರ್, ಸದಸ್ಯರಾದ ಸಣ್ಣರಾಮಶೆಟ್ಟಿ, ಸಂಜೀವ್ ಕುಮಾರ್, ಆನಂದ್ ಕುಮಾರ್, ರಮೇಶ್, ಹನುಮಂತ, ರಂಗಶೆಟ್ಟಿ, ವಿ.ಗೋವಿಂದ ಶೆಟ್ಟಿ, ಗೋಪಾಲರಾಜು, ಸಿದ್ದರಾಜು, ಗೋಪಾಲ ಶೆಟ್ಟಿ ಇದ್ದರು.

ನಾಡು ಕಂಡ ಶ್ರೇಷ್ಠ ತ್ರಿಪದಿ ಕವಿ ಸರ್ವಜ್ಞ: ಬಣ್ಣನೆ



ನಂಜನಗೂಡಿನಲ್ಲಿ ಸರ್ವಜ್ಞ ಜಯಂತಿ ನಡೆಯಿತು.

ನಂಜನಗೂಡು, ಫೆ.20– ನಾಡು ಕಂಡ ಶ್ರೇಷ್ಠ ತ್ರಿಪದಿ ಕವಿ ಸರ್ವಜ್ಞ ಅವರು ತಮ್ಮ ತ್ರಿಪದಿಗಳ ಮೂಲಕ ಜನರಲ್ಲಿ ಅರಿವು ಮೂಡಿಸಿ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಪ್ರಯತ್ನಿಸಿದ ಶ್ರೇಷ್ಠ ದಾರ್ಶನಿಕ ಎಂದು ಮುಖ್ಯ ಭಾಷಣಕಾರ, ಸರ್ಕಾರಿ ಅಭಿಯೋಜಕ ವಕೀಲ ರಾಜಣ್ಣ ಬಣ್ಣಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಸರ್ವಜ್ಞ ಜಯಂತಿಯಲ್ಲಿ ಮಾತನಾಡಿದ ಅವರು, ಸರ್ವಜ್ಞರು ತಮ್ಮ ಲೌಕಿಕ ಜೀವನ ತ್ಯಾಗ ಮಾಡಿ, ತ್ರಿಪದಿಗಳ ಮೂಲಕ ಸಮಾಜದಲ್ಲಿದ್ದ ಮೂಢನಂಬಿಕೆ, ಶೋಷಣೆಯನ್ನು ಕಟುವಾಗಿ ಟೀಕಿಸಿ ಮಾನವೀಯ ಮೌಲ್ಯಗಳನ್ನು ಇಡೀ ಜಗತ್ತಿಗೆ ಸಾರಿದರು. ಸರ್ವಜ್ಞನ ತ್ರಿಪದಿಗಳು ನಮ್ಮ ಸಮಾಜಕ್ಕೆ ದಿವ್ಯ ಔಷಧವಾಗಿದೆ. ಅವರ ಸಾಹಿತ್ಯಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ ಎಂದರು.

ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ಜನರ ನಡುವೆ ಬದುಕಿದ್ದ ಕವಿ ಸರ್ವಜ್ಞರು ಜನರಿಗೆ ಅರ್ಥವಾಗುವ ಹಾಡು ಭಾಷೆಯಲ್ಲಿ ತ್ರಿಪದಿಗಳನ್ನು ರಚಿಸಿ, ತಮ್ಮ 3 ಸಾಲಿನ ತ್ರಿಪದಿಯಲ್ಲಿ ಮಹಾಕಾವ್ಯ, ಮಹಾಗ್ರಂಥಗಳ ಸಾರವನ್ನು ಹಿಡಿದಿಟ್ಟಿದ್ದಾರೆ. ಅವರ ಸಾಹಿತ್ಯದ ಸಾರವು ಸಮಾಜದ ಎಲ್ಲಾ ವರ್ಗಗಳಿಗೆ ಸಾಮಾಜಿಕ ಸಮಾನತೆ ಒದಗಿಸುತ್ತದೆ. ಕುಂಬಾರ ಸಮಾಜವು ಸಮಾಜದ ಮುಖ್ಯವಾಹಿನಿಗೆ ಬರಲು ಶಿಕ್ಷಣ ಪ್ರಮುಖ ಮದ್ದು. ಆದ್ದರಿಂದ ಎಲ್ಲರೂ ನಿಮ್ಮ ಮಕ್ಕಳಿಗೆ ಶಿಕ್ಷಣ ಕಲಿಸಿ ಎಂದರು.

ಕುಂಬಾರ ಸಂಘದ ಶಿವಣ್ಣ ಮಾತನಾಡಿ, ಸರ್ವಜ್ಞ ಜಯಂತಿಯನ್ನು ತಾಲೂಕು ಆಡಳಿತದಿಂದ ಸರಳವಾಗಿ ಆಚರಿಸಲಾಗುತ್ತಿದೆ. ಮಾ.8ರಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸೇರಿದಂತೆ ಅದ್ಧೂರಿಯಾಗಿ ಕಾರ್ಯಕ್ರಮ ಆಚರಿಸಲಾಗುವುದು ಎಂದರು.

ಇದೇ ವೇಳೆ ಕುಲ ಕಸುಬಿನಲ್ಲಿ ತೊಡಗಿಸಿಕೊಂಡಿರುವ ಕೂಸಣ್ಣಶೆಟ್ಟಿ ಮತ್ತು ಶ್ರೀನಿವಾಸ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಉಪ ತಹಸೀಲ್ದಾರ್ ರಾಜು, ವಿರೂಪಾಕ್ಷ, ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ಕುಂಬಾರ ಸಂಘದ ತಾಲೂಕು ಅಧ್ಯಕ್ಷ ಮರಿಶೆಟ್ಟಿ, ಕಾರ್ಯದರ್ಶಿ ಪ್ರಕಾಶ್, ಮುಖಂಡರಾದ ಎಸ್.ಕುಮಾರ್, ಜೆ.ರಾಜಣ್ಣ, ತಿಮ್ಮರಾಮು, ಮಹದೇವ ಶೆಟ್ಟಿ, ಹೆಚ್.ಎನ್.ಪ್ರಕಾಶ್, ರಾಮಶೆಟ್ಟಿ, ಭೈರೇಶ್, ಬಸವಶೆಟ್ಟಿ, ನಿಂಗರಾಜು, ವೆಂಕಟೇಶ್, ರೇವಣ್ಣ, ಮಧುಕುಮಾರ್ ಸೇರಿದಂತೆ ಇತರರಿದ್ದರು.

ನಗರಸಭೆ ಅಧಿಕಾರಿಗಳಿಂದ ಮುಖ್ಯರಸ್ತೆ ಒತ್ತುವರಿ ತೆರವು



ನಗರಸಭೆ ಅಧಿಕಾರಿಗಳು ರಸ್ತೆ ಒತ್ತುವರಿ ತೆರವುಗೊಳಿಸಿದರು

ನಂಜನಗೂಡು, ಫೆ.20– ನಗರದ ದೇವಿರಮ್ಮನಹಳ್ಳಿ ವೃತ್ತದ ಬಳಿ ಖಾಸಗಿಯವರು ಒತ್ತುವರಿ ಮಾಡಿಕೊಂಡಿದ್ದ ಹುರ ಮುಖ್ಯ ರಸ್ತೆಯನ್ನು ಆಯುಕ್ತ ಬಸವರಾಜು ನೇತೃತ್ವದಲ್ಲಿ ನಗರಸಭೆ ಅಧಿಕಾರಿಗಳು ತೆರವುಗೊಳಿಸಿದರು.

ನಗರದ ದೇವಿರಮ್ಮನಹಳ್ಳಿ ವೃತ್ತದ ನಂದಿ ಕನ್ವೆನ್ಷನ್ ಕಲ್ಯಾಣ ಮಂಟಪದ ಬಳಿ ಖಾಸಗಿಯವರು ಮುಖ್ಯ ರಸ್ತೆಯನ್ನು ತಮ್ಮ ಜಾಗವೆಂದು ತಂತಿಬೇಲಿ ನಿರ್ಮಿಸಿಕೊಂಡು ಒತ್ತುವರಿ ಮಾಡಿಕೊಂಡಿದ್ದರು. ಈ ಸಂಬಂಧ ಸಾರ್ವಜನಿಕರು ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಒತ್ತುವರಿ ರಸ್ತೆ ತೆರವುಗೊಳಿಸುವಂತೆ ನಗರಸಭೆಗೆ ಪತ್ರ ಬರೆದಿದ್ದರು. ಅದರಂತೆ ನಗರಸಭೆ ಆಯುಕ್ತ ಬಸವರಾಜು ಹಾಗೂ ಅಧಿಕಾರಿಗಳ ತಂಡ ರಸ್ತೆ ಮಧ್ಯ ನಿರ್ಮಿಸಿಕೊಂಡಿದ್ದ ತಂತಿ ಬೇಲಿಯನ್ನು ತೆರವುಗೊಳಿಸಿದರು.

ನಗರಸಭೆ ಆಯುಕ್ತ ಬಸವರಾಜು ಮಾತನಾಡಿ, ಖಾಸಗಿ ವ್ಯಕ್ತಿಗಳು ಯಾವುದೇ ಸರ್ವೇ ನಡೆಸದೆ ಹುರ ಮುಖ್ಯ ರಸ್ತೆಯನ್ನು ತಮ್ಮ ಜಾಗ ಎಂದು ಒತ್ತುವರಿ ಮಾಡಿಕೊಂಡು ತಂತಿ ಬೇಲಿ ನಿರ್ಮಿಸಿ ಕೊಂಡಿದ್ದರು. ಒತ್ತುವರಿ ತೆರವು ಮಾಡುವಂತೆ ಸಾರ್ವಜನಿಕರು ದೂರು ನೀಡಿದ್ದರು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ನಗರಸಭೆಗೆ ಪತ್ರ ಬರೆದು ರಸ್ತೆ ಅಂಚಿನಿಂದ 6ಮೀ ವರೆಗೆ ಒತ್ತುವರಿ ತೆರವು ಮಾಡುವಂತೆ ಇಲಾಖೆಯ ಪತ್ರದ ಆದೇಶದಂತೆ ಖಾಸಗಿ ವ್ಯಕ್ತಿಗಳಿಗೆ ರಸ್ತೆ ತೆರವು ಮಾಡುವಂತೆ ಕಾಲಾವಕಾಶ ನೀಡಲಾಗಿತ್ತು. ಆದರೆ ಖಾಸಗಿ ವ್ಯಕ್ತಿಗಳು ತೆರವುಗೊಳಿಸದ ಹಿನ್ನೆಲೆಯಲ್ಲಿ ರಸ್ತೆ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದರು.

ಈ ವೇಳೆ ನಗರಸಭೆ ಎಇಇ ಮಹೇಶ್, ಎಇ ಸುಮಂತ್, ಆರೋಗ್ಯಾಧಿಕಾರಿ ಆದರ್ಶ್, ಮಹೇಶ್ ಸೇರಿದಂತೆ ನಗರಸಭೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




ಬಿಲ್ಲಯ್ಯಸ್ವಾಮಿ ದೇವಾಲಯ ಲೋಕಾರ್ಪಣೆ

ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಕಳೆದ 25 ವರ್ಷಗಳಿಂದ ಪಾಳು ಬಿದ್ದಿದ್ದ ಬಿಲ್ಲಯ್ಯಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ, ಶುಕ್ರವಾರ ಲೋಕಾರ್ಪಣೆಗೊಳಿಸಲಾಯಿತು. ಈ ವೇಳೆ ದೇವಾಲಯ ಸಮಿತಿ ಸದಸ್ಯರು, ಜಯಪುರ, ಮಾವಿನಹಳ್ಳಿ ಮತ್ತು ಬರಡನಪುರ ಗ್ರಾಮಸ್ಥರು ಇದ್ದರು.

ಕೇಂದ್ರ ಸರ್ಕಾರ ರೈತರ ಹಿತ ಕಾಪಾಡಲು ಮುಂದಾಗಬೇಕು

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್



ಕಟ್ಟೆಮಳಲವಾಡಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು.

ಹುಣಸೂರು, ಫೆ.20– ತಂಬಾಕು ಬೆಳೆಗಾರರ ಹಿತ ಕಾಪಾಡಲು ಕೇಂದ್ರ ಸರ್ಕಾರ ಮುಂದಾಗಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿದೆ ಎಂದು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಗೆ ಶುಕ್ರವಾರ ಭೇಟಿ ನೀಡಿ ರೈತರು, ಅಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿ, ದೇಶದಲ್ಲೇ ಮೈಸೂರು ಭಾಗದ ತಂಬಾಕು ಉತ್ತಮ ಗುಣಮಟ್ಟದಿಂದ ಕೂಡಿದೆ. ಆದರೆ ಇಂದು ತಂಬಾಕು ಬೆಳೆಗಾರರು ತಾವು ಬೆಳೆದ ಬೆಳೆಗೆ ಉತ್ತಮ ದರ ಸಿಗದೆ ಸಂಕಷ್ಟದಲ್ಲಿದ್ದಾರೆ. ಮಂಡಳಿ ಅಧಿಕಾರಿಗಳು ಖರೀದಿದಾರರಿಗೆ ಬೆಳೆಯ ಖರ್ಚು–ವೆಚ್ಚದ ಬಗ್ಗೆ ಸರಿಯಾದ ಮಾಹಿತಿ ನೀಡಿ ಉತ್ತಮ ದರ ನೀಡಲು ಕ್ರಮ ವಹಿಸಬೇಕು. ಅಲ್ಲದೆ ಕಳೆದ ಮೂರ್‍ನಾಲ್ಕು ದಿನಗಳಿಂದ ರೈತರು ಮಾರುಕಟ್ಟೆಯಲ್ಲಿ ಹೋರಾಟ ಮಾಡುತ್ತಿರುವ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರಿಗೆ ಮಾಹಿತಿ ನೀಡಿದ್ದೇನೆ ಎಂದ ಅವರು ತಂಬಾಕು ಬೆಳೆಗಾರರ ಹಿತ ಕಾಪಾಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಈ ಭಾಗದ ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಸಂಸದ ಯದುವೀರ್ ಅವರು ಒಂದು ದಿನವೂ ಚಕಾರ ಎತ್ತಲಿಲ್ಲ. 1 ಕೆಜಿ ತಂಬಾಕು ಬೆಳೆಯಲು ರೈತನಿಗೆ ಕನಿಷ್ಠ 280 ರೂ. ವೆಚ್ಚವಾಗುತ್ತಿದೆ. ಆದರೆ 260 ರೂ.ಗೆ ಮಾರಾಟ ಮಾಡುವ ಸನ್ನಿವೇಶ ಬಂದಿದೆ. ಈ ಹಿಂದೆ ತಂಬಾಕಿನ ಮೇಲೆ ಶೇ.28 ರಷ್ಟು ಇದ್ದ ಜಿಎಸ್‌ಟಿ ಇದೀಗ 40ರಷ್ಟಾಗಿದೆ. ತಂಬಾಕು ಮಾರಾಟ ಮತ್ತು ದರ ನಿಗದಿ ಮಾಡುವ ಅಧಿಕಾರ ಸಂಪೂರ್ಣ ಕೇಂದ್ರ ಸರ್ಕಾರದ ಹೊಣೆಯಾಗಿದೆ. ಕೆಲ ಅಧಿಕಾರಿಗಳು ಕಂಪನಿಗಳ ಜೊತೆ ಸೇರಿಕೊಂಡು ರೈತರಿಗೆ ಮೋಸ ಮತ್ತು ಅನ್ಯಾಯ ಮಾಡುತ್ತಿದ್ದಾರೆ. ಈ ವಿಚಾರವನ್ನು ತಿಂಗಳ ಹಿಂದೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು ತಂಬಾಕು ಮಂಡಳಿ ಅಧಿಕಾರಿಗಳಿಗೆ ಪತ್ರದ ಮೂಲಕ ಎಚ್ಚರಿಕೆ ನೀಡಿದ್ದರೂ ಕೇಳುತ್ತಿಲ್ಲ. ಆದ್ದರಿಂದ ರೈತರು ಕಂಗಾಲಾಗಿ ಎರಡು ದಿನಗಳಿಂದ ಮಾರುಕಟ್ಟೆ ಬಂದ್ ಮಾಡಿದ್ದು ನಾವು ಕೂಡ ತಂಬಾಕು ರೈತರ ಹೋರಾಟಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು.

ಇದೇ ವೇಳೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಸಿಎಂ ಸಿದ್ದರಾಮಯ್ಯ ಅವರಿಗೆ ಕರೆ ಮಾಡಿ ತಂಬಾಕು ಬೆಳೆಗಾರರು ನಡೆಸುತ್ತಿರುವ ಪ್ರತಿಭಟನೆ ಬಗ್ಗೆ ಮಾಹಿತಿ ನೀಡಿದರು.

ವಚನ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಅಪಾರ

ಬಸವ ತತ್ವ ಸಮಾವೇಶದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಕಾರ್ಯಕ್ರಮವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಬೆಟ್ಟದಪುರ, ಫೆ.20– ಮಹಾನ್ ಮಾನವತಾವಾದಿ ಬಸವಣ್ಣನವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಅನುಸರಿಸಬೇಕು ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕು ರಾವಂದೂರು ಗ್ರಾಮದ ಮುರುಘ ಮಠದಿಂದ ನಡೆದ ಶರಣು ಸಂಸ್ಕೃತಿ ಉತ್ಸವ ಹಾಗೂ ಬಸವ ತತ್ವ ಸಮಾವೇಶ ಮತ್ತು ಜಯದೇವ ಸಮುದಾಯ ಭವನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ವಚನ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಅಪಾರವಾಗಿದ್ದು, ಅವರ ತತ್ವಾದರ್ಶ ಹಾಗೂ ನಮ್ಮ ಸಂಸ್ಕೃತಿಯನ್ನು ಮುಖ್ಯವಾಗಿ ವಿದೇಶಿಗರು ಅನುಸರಿಸುತ್ತಾ ಬಂದಿದ್ದಾರೆ. ಆದರೆ ನಮ್ಮವರು ವಿದೇಶಿ ಸಂಸ್ಕೃತಿ ಅನುಸರಿಸುತ್ತಿರುವುದು ಶೋಚನೀಯ ಸಂಗತಿ ಎಂದ ಅವರು ಮನೆಯಲ್ಲಿ ತಂದೆ ತಾಯಂದಿರು ಮಕ್ಕಳಿಗೆ ಬಸವಣ್ಣನವರ ತತ್ವ ಆದರ್ಶಗಳ ಬಗ್ಗೆ ಅರಿವು ಮೂಡಿಸಬೇಕು. 12ನೇ ಶತಮಾನದಲ್ಲಿದ್ದ ಅನುಭವ ಮಂಟಪವೇ ಹಿಂದಿನ ಸಂಸತ್ ಭವನವಾಗಿದೆ. ಬಸವಣ್ಣನವರ ವಿಚಾರಧಾರೆಗಳು ಹಿಂದಿನ ಸಮಾಜಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು.

ಗ್ರಾಮೀಣ ಮಟ್ಟದಲ್ಲಿ ಶರಣರ ಬಗ್ಗೆ ಹೆಚ್ಚು ಪ್ರಚಾರ ಮಾಡುವ ಮೂಲಕ ಹಾಗೂ ಮನೆ ಮನೆಗೆ ತೆರಳಿ ಬಸವಣ್ಣನವರ ತತ್ವಾದರ್ಶಗಳ ಬಗ್ಗೆ ಅರಿವು ಮೂಡಿಸುವಲ್ಲಿ ರಾವಂದೂರು ಶ್ರೀಗಳ ಕೊಡುಗೆ ಪ್ರಮುಖವಾಗಿದೆ. ಗ್ರಾಮೀಣ ಭಾಗದಲ್ಲಿ ಜಿಲ್ಲಾ ಮಟ್ಟಕ್ಕಿಂತಲೂ ಹೆಚ್ಚಾಗಿ ಶರಣರ ವಿಚಾರಧಾರೆಗಳನ್ನು ಜಯದೇವ ಜಗದ್ಗುರು ಹೆಸರಿನಲ್ಲಿ ನಿರ್ಮಿಸಿರುವುದು ಸಂತೋಷದ ಸಂಗತಿ ಎಂದರು.


ರಾವಂದೂರು ಮುರುಘ ಮಠದ ಮೋಕ್ಷಪತಿ ಸ್ವಾಮೀಜಿ ಮಾತನಾಡಿ, ಎಲ್ಲಾ ಭಕ್ತರ ಸಹಕಾರದಿಂದ ಈ ಸಮುದಾಯ ಭವನ ನಿರ್ಮಿಸಲಾಗಿದೆ. ಬಸವಣ್ಣನ ತತ್ವ ಆದರ್ಶಗಳು ಎಲ್ಲರಿಗೂ ದಾರಿದೀಪವಾಗಬೇಕು. ಈ ನಿಟ್ಟಿನಲ್ಲಿ ಬಸವಣ್ಣನವರ ಅನುಯಾಯಿಗಳಾದ ನಾವು ಸಮಾಜಮುಖಿಯಾಗಿ ಕೆಲಸ ಮಾಡುವಲ್ಲಿ ಮುಂದಾಗಬೇಕು. ಗ್ರಾಮೀಣ ಜನರಿಗೆ ದುಶ್ಚಟಗಳ ಬಗ್ಗೆ ಅರಿವು ಮೂಡಿಸಬೇಕು. ಉತ್ತಮ ಸಮಾಜದ ನಿರ್ಮಾಣಕ್ಕೆ ಸ್ವಾಮೀಜಿಯವರ ಹಾಗೂ ಸಾರ್ವಜನಿಕರ ಸಹಕಾರ ಬಹಳ ಮುಖ್ಯ ಎಂದು ತಿಳಿಸಿದರು.

ಹೊಳಲ್ಕೆರೆ ತಾಲೂಕು ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಮಂಜುನಾಥ್ ಮಾತನಾಡಿದರು. ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು, ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಅರಕೆರೆಯ ಸಿದ್ದೇಶ್ವರ ಸ್ವಾಮೀಜಿ, ಮಂಡ್ಯದ ಬಸವರಾಜ ಸ್ವಾಮೀಜಿ, ಇಮ್ಮಡಿ ಮುರುಘ ಸ್ವಾಮೀಜಿ, ಬಸವಲಿಂಗ ದೇಶಿಕೇಂದ್ರ ಸ್ವಾಮೀಜಿ, ಸರ್ಪಭೂಷಣ ಸ್ವಾಮೀಜಿ ಹಾಗೂ ವಿವಿಧ ಧಾರ್ಮಿಕ ಕೇಂದ್ರದ ಮಠಾಧೀಶರು, ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಪರಮೇಶ್, ಜಿಪಂ ಮಾಜಿ ಸದಸ್ಯ ಆರ್.ಎಸ್. ಚಿಕ್ಕವೀರಪ್ಪ, ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಆರ್.ಎಸ್.ಕುಮಾರ ವಿಜಯ, ಡಾ.ಸತೀಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಬಿಜೆಪಿ ಮುಖಂಡ ಆರ್.ಟಿ.ಸತೀಶ್, ಆರ್.ಆರ್.ಶಶಿಧರ್, ಬಸವ ಬಳಗದ ಅಧ್ಯಕ್ಷ ಆರ್.ಎಸ್.ವಿಜಯಕುಮಾರ್, ಮೈಸೂರು ಬಸವ ಬಳಗ ಒಕ್ಕೂಟದ ಅಧ್ಯಕ್ಷ ಪ್ರದೀಪ್ ಕುಮಾರ್, ಸುರೇಶ್ ಸೇರಿದಂತೆ ಇತರರಿದ್ದರು.

ವಾರದ ಅಂತರದಲ್ಲಿ ತಂದೆ–ಮಗ ಸಾವು





ಹನಗೋಡು, ಫೆ.20– ವಾರದ ಅಂತರದಲ್ಲಿ ತಂದೆ–ಮಗ ಸಾವನ್ನಪ್ಪಿರುವ ಮನ ಕಲಕುವ ಘಟನೆ ಹನಗೋಡು ಹೋಬಳಿಯ ಕೆ.ಜೆ.ಹಬ್ಬನಕುಪ್ಪೆಯಲ್ಲಿ ನಡೆದಿದೆ.

ನಾಗರಹೊಳೆ ಉದ್ಯಾನದಂಚಿನ ಹನಗೋಡು ಹೋಬಳಿಯ ಕೆ.ಜೆ.ಹಬ್ಬನಕುಪ್ಪೆಯ ಮೂಕಳಮಾಡ ಕುಟುಂಬದ ಎಂ.ಕೆ.ಮೊಣ್ಣಪ್ಪನವರು ಅನಾರೋಗ್ಯದಿಂದ ಫೆ.13ರಂದು ಸಾವನ್ನಪ್ಪಿದ್ದರು. ಇವರ ತಿಥಿ ಕಾರ್ಯ ಶನಿವಾರ ನಡೆಯಬೇಕಿತ್ತು. ಆದರೆ ವಿಧಿಯಾಟವೇ ಬೇರೆಯಾಗಿತ್ತು. ಬುಧವಾರ ರಾತ್ರಿ ಮೊಣ್ಣಪ್ಪರ ಹಿರಿಯ ಪುತ್ರ ಎಂ.ಎಂ. ಪೊನ್ನಪ್ಪ(52) ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಗುರುವಾರ ಸ್ವಗ್ರಾಮ ಕೆ.ಜೆ.ಹಬ್ಬನಕುಪ್ಪೆಯಲ್ಲಿ ಅಂತ್ಯಕ್ರಿಯೆ ನಡೆಯಿತು. ತಂದೆ–ಮಗನನ್ನು ಕಳೆದುಕೊಂಡ ಕುಟುಂಬ ದುಃಖ ದಲ್ಲಿ ಮುಳುಗಿದೆ. ತಂದೆ ತಿಥಿ ಕಾರ್ಯ ವನ್ನು ಮುಂದೆ ನಿಂತು ಮಾಡಬೇಕಾದ ಹಿರಿಯ ಪುತ್ರ ಸಾವಿಗೀಡಾಗಿರುವುದು ಕುಟುಂಬಕ್ಕೆ ಆಘಾತ ಉಂಟು ಮಾಡಿದೆ.

ಪಿ.ಚಿಕ್ಕನಾಯಕ ನಿಧನ



ಹೆಚ್.ಡಿ.ಕೋಟೆ, ಫೆ.20– ತಾಲೂಕಿನ ತುಂಬಸೋಗೆ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ಪಿ.ಚಿಕ್ಕನಾಯಕ(86) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾವೇರಿ ಸೇರಿದಂತೆ ವಿವಿಧ ನದಿ ಭಾಗದಲ್ಲಿ ಅಕ್ರಮ ಮರಳು ಮಾಫಿಯಾ ತಡೆಯುವಲ್ಲಿ ಸರ್ಕಾರ ವಿಫಲ!

● ಸಿಬಿಐ ಇಲ್ಲವೆ ಎಸ್‌ಐಟಿ ತನಿಖೆಗೆ ಹೈಕೋರ್ಟ್ ಚಿಂತನೆ ● ತನ್ನ ಮೇಲ್ವಿಚಾರಣೆಯಲ್ಲೇ ತನಿಖೆ ಉದ್ದೇಶ ● ಶಾಸಕರಿಗೆ ಮರಳು ಮಾಫಿಯಾ ಬೆದರಿಕೆ; ಗಂಭೀರವಾಗಿ ಪರಿಗಣಿಸಿದ ಕೋರ್ಟ್



ಬೆಂಗಳೂರು, ಫೆ. 20(ಕೆಎಂಶಿ)– ಕಾವೇರಿ, ಕೃಷ್ಣ ಸೇರಿದಂತೆ ರಾಜ್ಯಾದ್ಯಂತ ನದಿ ಪಾತ್ರಗಳಲ್ಲಿ ನಡೆಯುತ್ತಿರುವ ಅಕ್ರಮ ಮರಳು ಮಾಫಿಯಾ ಹತ್ತಿಕ್ಕಲು ಸಿಬಿಐ ಇಲ್ಲವೇ ವಿಶೇಷ ತನಿಖಾ ದಳದಿಂದ ತನಿಖೆ ನಡೆಸಲು ರಾಜ್ಯ ಹೈಕೋರ್ಟ್ ಮುಂದಾಗಿದೆ.

ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ಅಗತ್ಯವಿದೆ ಎಂದು ನ್ಯಾಯಪೀಠ ಹೇಳಿದೆ.

ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಪೀಠ, ಈ ವಿಚಾರದಲ್ಲಿ ಸ್ವಯಂಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿದೆ.

ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರನ್ನು ಒಳಗೊಂಡ ವಿಭಾಗೀಯ ಪೀಠ, ಅಕ್ರಮ ಮರಳು ಗಣಿಗಾರಿಕೆ ತಡೆಯುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದಿದ್ದು, ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿ, ಮುಂದಿನ ವಿಚಾರಣೆಯನ್ನು ಏಪ್ರಿಲ್ 7ಕ್ಕೆ ಮುಂದೂಡಿದೆ.

ಮಾಧ್ಯಮಗಳಲ್ಲಿನ ವರದಿ ಆಧರಿಸಿ ಸ್ವಯಂ ಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡ ವಿಭಾಗೀಯ ಪೀಠ, ಅಕ್ರಮ ಮರಳು ಗಣಿಗಾರಿಕೆ ತಡೆಯುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ತರಾಟೆಗೆ ತೆಗೆದುಕೊಂಡಿತು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿ, ಅಕ್ರಮ ಮರಳು ಗಣಿಗಾರಿಕೆಯಲ್ಲಿ ರಾಜಕೀಯ ಪಕ್ಷಗಳ ಪ್ರಭಾವೀ ವ್ಯಕ್ತಿಗಳು ಭಾಗಿಯಾಗಿದ್ದಾರೆ ಎಂದು ತಿಳಿಸಿದ್ದಾರೆ.

ಸಚಿವರೇ ಮರಳು ಮಾಫಿಯಾ ವಿರುದ್ಧ ಕ್ರಮ ಕೈಗೊಳ್ಳಲು ಅಸಹಾಯಕತೆ ವ್ಯಕ್ತಪಡಿಸಿದರೆ, ಸರ್ಕಾರದಿಂದ ಅಕ್ರಮ ಚಟುವಟಿಕೆ ನಿಯಂತ್ರಣವಾಗಲಿದೆ ಎಂಬ ನಂಬಿಕೆ ನಮಗಿಲ್ಲ.

ಮರಳು ತೆಗೆಯಲು ಟೆಂಡರ್‌ಗಳನ್ನು ಆಹ್ವಾನಿಸಿದ್ದರೂ, ಅವುಗಳನ್ನು ತೆರೆಯಲು ಸಾಧ್ಯವಾಗಿಲ್ಲ ಎಂದು ಮಾಧ್ಯಮಗಳು ಉಲ್ಲೇಖಿಸಿವೆ. ಅಕ್ರಮ ಗಣಿಗಾರಿಕೆಯಲ್ಲಿ ಭಾರೀ ಮೊತ್ತ ಕೈಬದಲಾವಣೆ ಆಗಿದ್ದು, ಇದರಲ್ಲಿ ದೊಡ್ಡ ತಿಮಿಂಗಿಲಗಳು ಭಾಗಿ ಆಗಿರುವುದರಿಂದ ಗಣಿಗಾರಿಕೆಯನ್ನು ಕ್ರಮಬದ್ಧಗೊಳಿಸಲು ಸಾಧ್ಯವಾಗಿಲ್ಲ.

ಮಾಫಿಯಾಗೆ ಕಡಿವಾಣ ಹಾಕಿ, ರೈತರ ಕೃಷಿ ಭೂಮಿಯನ್ನು ಉಳಿಸಬೇಕಾದ ಜವಾಬ್ದಾರಿ ಇದೆ. ಇದಕ್ಕಾಗಿ ಕೇಂದ್ರ ತನಿಖಾ ಸಂಸ್ಥೆ ಇಲ್ಲವೇ ವಿಶೇಷ ತನಿಖಾದಳದಿಂದ ತನಿಖೆ ನಡೆಸುವ ಅಗತ್ಯವಿದೆ.

ರಾಜ್ಯ ಸರ್ಕಾರ ಎಸ್‌ಐಟಿ ರಚನೆ ಮಾಡಿದ್ದರೂ ಅದರಿಂದ ಯಾವುದೇ ಪ್ರಯೋಜನ ಆಗಿಲ್ಲ ಎಂಬುದನ್ನು ಮನಗಂಡು ನ್ಯಾಯಾಲಯದ ಮೇಲ್ವಿಚಾರಣೆಯಲ್ಲೇ ತನಿಖೆ ಅಗತ್ಯವಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ವಿಚಾರದಲ್ಲಿ ಸಾವು–ನೋವು ಆಗಿದೆ, ಮರಳು ಸಾಗಣೆಯಿಂದ ರಸ್ತೆಗಳು ಹಾಳಾಗಿ ಅಪಘಾತಗಳು ಸಂಭವಿಸಿವೆ. ಎಲ್ಲಕ್ಕೂ ಮಿಗಿಲಾಗಿ ಬೆಳೆಗಳ ಮೇಲೆ ಧೂಳು ತುಂಬಿ ರೈತರಿಗೆ ದೊಡ್ಡ ಪ್ರಮಾಣದಲ್ಲಿ ಹಾನಿ ಆಗುತ್ತಿದೆ.

ರಾಯಚೂರು ಜಿಲ್ಲೆಯ ಶಾಸಕಿ ಕರೆಮ್ಮ ಜಿ. ನಾಯಕ್ ಅವರ ಕ್ಷೇತ್ರದಲ್ಲಿನ ಅಕ್ರಮ ಮರಳುಗಾರಿಕೆ ವಿಷಯ ಪ್ರಸ್ತಾಪಿಸಿದ್ದಕ್ಕೆ ಮಾಫಿಯಾದಿಂದ ಜೀವ ಬೆದರಿಕೆ ಬಂದ ವರದಿಗಳನ್ನೂ ಗಮನಿಸಿದ್ದೇವೆ.

ಜಲ ಮೂಲ ಉಳಿಸಿ ನದಿಗಳ ಸಂರಕ್ಷಣೆಗೆ ಮತ್ತು ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗದಂತೆ ಹಾಗೂ ಅಪಘಾತಗಳನ್ನು ತಪ್ಪಿಸಲು ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಲೇಬೇಕಿದೆ ಎಂದು ಹೈಕೋರ್ಟ್ ಹೇಳಿದೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಭಾರತಿ ಟೀಚರ್ –1 ಪ್ರದರ್ಶನ (ಕ), ಗಿಲ್ಲಿ –3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	**(ದೂ: 2422871)**
ರಕ್ಕಸ ಪುರದೊಳ್ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವತಿ (ತ)	4 ಪ್ರದರ್ಶನಗಳು
ಸಂಗಂ	
ಸೆಕೆಂಡ್ ಕೇಸ್ ಆಫ್ ಸೀತಾರಾಂ (ಕ) + ಆಲ್ಫಾ (ಕ)	2+2 ಪ್ರದರ್ಶನಗಳು
ಲಿಡೋ	
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಿಷ್ಠ (ಕ)	4 ಪ್ರದರ್ಶನಗಳು

ವಿಶೇಷ ಪೂಜೆ



ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿಗಳಾದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಬೇಗ ಗುಣಮುಖರಾಗಲೆಂದು ಹಾರೈಸಿ ಚಾಮುಂಡಿ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಮೈಸೂರು ತಾಲೂಕು ನಾಯಕ ಸಂಘದ ಅಧ್ಯಕ್ಷ ಉದ್ಬೂರು ಎನ್.ಮಹದೇವಸ್ವಾಮಿ, ಮುಖಂಡರಾದ ಟೆನ್ನಿಸ್ ಗೋಪಿ, ಕಡಕೊಳ ಕುಮಾರಸ್ವಾಮಿ, ವೈ.ಪಿ. ಜಗದೀಶ್ ಮೂರ್ತಿ, ಕ್ಯಾತಮಾರನಹಳ್ಳಿ ವೆಂಕಟೇಶ್, ಸುದೀಶ್ ನಾಯಕ್, ಸೋಮೇಶ್ವರಪುರ ರುಗಸ್ವಾಮಿ, ಮರಂಕಯ್ಯ, ಜಯಪುರ ರಂಗಸ್ವಾಮಿ, ಉದ್ಬೂರು ಶುಕ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಉಚಿತ ನೇತ್ರ ತಪಾಸಣಾ ಶಿಬಿರ

ಮೈಸೂರು,ಫೆ.20(ಜಿಎ)–ರೋಟರಿ ಜಯಪ್ರಕಾಶ ನಗರ, ರೋಟರಿ ಜಯಪ್ರಕಾಶ ನಗರ ಚಾರಿಟಬಲ್ ಟ್ರಸ್ಟ್, ಸ್ನೇಹ ನಿಧಿ ಪತ್ತಿನ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಫೆ.22 ರಂದು ಜೆಪಿ ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಸಾರ್ವಜನಿಕರಿಗೆ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಹಕಾರ ಸಂಘದ ಅಧ್ಯಕ್ಷ ಚಲುವಯ್ಯ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ ಬೆಳಗ್ಗೆ 8 ರಿಂದ ಮಧ್ಯಾಹ್ನ 12.30 ರವರೆಗೆ ಉಚಿತ ತಪಾಸಣೆ ನಡೆಯಲಿದೆ. ಈ ವೇಳೆ ಕಣ್ಣಿನ ಪೊರೆ, ಗ್ಲಾಕೋಮಾ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಜು ಬರುವುದು, ಹತ್ತಿರ ಮತ್ತು ದೂರ ದೃಷ್ಟಿ ಮೊದಲಾದ ಸಮಸ್ಯೆಯುಳ್ಳವರಿಗೆ ತಪಾಸಣೆ ನಡೆಸಿ, ಅಗತ್ಯವಿದ್ದಲ್ಲಿ ಆಸ್ಪತ್ರೆಗೆ ಕರೆದೊಯ್ದು ಉಚಿತವಾಗಿ ಶಸ್ತ್ರ ಚಿಕಿತ್ಸೆ ನೆರವೇರಿಸಲಾಗುವುದು. ಇದುವರೆಗೆ ಈ ರೀತಿಯ ಶಿಬಿರಗಳಲ್ಲಿ ಸುಮಾರು 142 ಮಂದಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳ ಜನರು ಮಾತ್ರವಲ್ಲದೆ, ದೂರದ ಊರುಗಳಿಂದಲೂ ಬಂದು ಪ್ರಯೋಜನ ಪಡೆಯುತ್ತಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9448413274 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಮೋದ್ ಚಂದರ್ ಉಪಸ್ಥಿತರಿದ್ದರು.

ಅನ್ನ ಸಂತರ್ಪಣೆ



ಮೈಸೂರಿನ ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಅನ್ನ ಸಂತರ್ಪಣೆಗೆ ಶಾಸಕ ಶ್ರೀವತ್ಸ ಚಾಲನೆ ನೀಡಿ, ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು. ಈ ವೇಳೆ ನಾಗರಿಕ ವೇದಿಕೆ ಅಧ್ಯಕ್ಷ ಶ್ರೀರಂಗಯ್ಯ, ಕಾರ್ಯದರ್ಶಿ ಬಿ.ಶ್ರೀಕಾಂತ್, ಜೆ.ಲೋಕೇಶ್, ಶೈಲೇಂದ್ರ, ಮುರಾರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು ಹಾಜರಿದ್ದರು.

ಶಿಶು ಮರಣ ಶೂನ್ಯಕ್ಕಿಳಿಸುವ ನಿಟ್ಟಿನಲ್ಲಿ ಚಿಕಿತ್ಸಾ ಕ್ರಮಕ್ಕೆ ಡಿಸಿ ಸೂಚನೆ



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಮಟ್ಟದ ಶಿಶು ಮರಣ ಪರಿಶೋಧನಾ ಸಮಿತಿಯ ತಜ್ಞ ಸದಸ್ಯರೊಂದಿಗೆ ಶುಕ್ರವಾರ ಸಭೆ ನಡೆಸಿದರು.

ಮೈಸೂರು, ಫೆ.20(ಎಂಕೆ)– ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣವನ್ನು ಶೂನ್ಯಕ್ಕಿಳಿಸುವ ನಿಟ್ಟಿನಲ್ಲಿ ಸಮುದಾಯ ಮಟ್ಟದ ಆರೋಗ್ಯ ಕೇಂದ್ರ ನಿಯಮಾನುಸಾರ ಚಿಕಿತ್ಸಾ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸೂಚಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಶಿಶು ಮರಣ ಪರಿಶೋಧನಾ ಸಮಿತಿಯ ತಜ್ಞ ಸದಸ್ಯರೊಂದಿಗೆ ಶುಕ್ರವಾರ ಸಭೆ ನಡೆಸಿದ ಅವರು, ಜಿಲ್ಲೆಯಲ್ಲಿ ಶೇ.11 ರಷ್ಟು ಶಿಶು ಪ್ರಮಾಣವಿದ್ದು, ಶೂನ್ಯಕ್ಕಿಳಿ ಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸುವಂತೆ ಸಲಹೆ ನೀಡಿದರು.

ಸಮುದಾಯ ಮಟ್ಟದಲ್ಲಿ ಕ್ಷೇತ್ರ ಭೇಟಿ ನೀಡಿ ಅಗತ್ಯ ಸಲಹೆಗಳನ್ನು ನೀಡುವುದು, ಹೆಚ್ಚುವರಿ ಹೆರಿಗೆ ಕೊಠಡಿ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿ ನಿರ್ಮಾಣ ಹಾಗೂ ಎಸ್‌ಎನ್‌ಸಿಯು ಘಟಕಕ್ಕೆ ಬೇಬಿ ವಾರ್ಮರ್ ಉಪಕರಣ ಖರೀದಿಸಲು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಚೆಲುವಾಂಬ ಆಸ್ಪತ್ರೆಯ ಮಕ್ಕಳ ತಜ್ಞ ವೈದ್ಯರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅಡಿಯಲ್ಲಿ ಬರುವ ಎಲ್ಲಾ ತಜ್ಞ ವೈದ್ಯರು ಪಿಹೆಚ್‌ಸಿಓ, ಹೆಚ್‌ಐಓ ಮತ್ತು ಆಶಾ ಕಾರ್ಯಕರ್ತೆಯರು ಆದ್ಯತೆ ಮೇರೆಗೆ ಕ್ಷೇತ್ರ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಪರಿಶೀಲನೆ: ಸಭೆಯ ನಂತರ ಚೆಲುವಾಂಬ ಆಸ್ಪತ್ರೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ವಾರ್ಡ್‌ಗಳು, ಶೌಚಾಲಯ ಹಾಗೂ ಇನ್ನಿತರೆ ಸೌಲಭ್ಯ ನೀಡುತ್ತಿರುವ ಪರಿಶೀಲನೆ ನಡೆಸಿದರಲ್ಲದೆ ಒಳರೋಗಿಗಳಿಗೆ ಚಿಕಿತ್ಸೆ ಹಾಗೂ ಸೌಲಭ್ಯದಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದರು.

ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ದಾಕ್ಷಾಯಣಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಹಮದ್ ಸಿರಾಜ್ ಅಹಮದ್ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಉಚಿತ ಮಾದರಿ ಪರೀಕ್ಷಾ ಅಭಿಯಾನ

ಮೈಸೂರು, ಫೆ.20– ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಶನ್ ಸಹಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಎಎಸ್,ಐಎಎಸ್ ಅಕಾಡೆಮಿ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳಿಗೆ 'ಸ್ಪರ್ಧಾ ಅಭಿಯಾನ್ 2026' ಎಂಬ ಉಚಿತ ಮಾದರಿ ಪರೀಕ್ಷಾ ಅಭಿಯಾನವನ್ನು ಫೆ.21 ರಿಂದ ಮೈಸೂರಿನ ವಿಜಯನಗರದ 2ನೇ ಹಂತದ ಜನರಲ್ ತಿಮ್ಮಯ್ಯ ರಸ್ತೆಯಲ್ಲಿರುವ ಕೃಷಿಕ್ ಭವನದಲ್ಲಿ ಆಯೋಜಿಸಲಾಗಿದೆ. ಐಎಎಸ್, ಕೆಎಎಸ್, ಕೆಪಿಎಸ್‌ಸಿ, ಪಿಎಸ್‌ಐ, ಪೊಲೀಸ್, ಕೆಇಎ, ಬ್ಯಾಂಕಿಂಗ್, ಎಸ್‌ಎಸ್‌ಸಿ, ರೈಲ್ವೇ ಹಾಗೂ ಇತರ ಸರ್ಕಾರಿ ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳಿಗೆ ಉಚಿತ ಮಾದರಿ ಪರೀಕ್ಷೆಗಳನ್ನು ಪ್ರತಿ ಶನಿವಾರದಂದು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ನಡೆಸಲಾಗುತ್ತದೆ. ಅಭಿಯಾನಕ್ಕೆ ಬರುವ ಆಸಕ್ತ ಅಭ್ಯರ್ಥಿಗಳು ಮೊಬೈಲ್ ಸಂಖ್ಯೆ 9686221564, 8296031570 ಮೂಲಕ ನೋಂದಣಿ ಮಾಡಿಕೊಳ್ಳಬೇಕು ಎಂದು ಕೃಷಿಕ್ ಸರ್ವೋದಯ ಫೌಂಡೇಶನ್ ಕಾರ್ಯದರ್ಶಿ ಎಚ್.ಕಿಶೋರ್ ಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ಸದಸ್ಯರು

ಮೈಸೂರು, ಫೆ.20(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮುಂದಿನ 5 ವರ್ಷದ ಅವಧಿಯ ಆಡಳಿತ ಮಂಡಳಿಗೆ ಅವಿರೋಧವಾಗಿ ಆಯ್ಕೆಯಾದ 13 ಮಂದಿ ಸದಸ್ಯರು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಫೆ.22ರಂದು ಚುನಾವಣೆ ನಡೆಯಬೇಕಾಗಿತ್ತು ಆದರೆ, ಚುನಾವಣಾ ಕಣದಲ್ಲಿ ಕೇವಲ 13 ಮಂದಿ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಎಲ್ಲಾ ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದೆ ಎಂದು ಚುನಾವಣಾಧಿಕಾರಿ ಘೋಷಿಸಿದ್ದಾರೆ. ಆರ್.ಕೆಂಪರಾಜು, ಎ.ಎಸ್.ಗುರುಸ್ವಾಮಿ, ಚನ್ನಪ್ಪ, ಎ.ಎಸ್.ಚನ್ನಬಸಪ್ಪ, ಟಿ.ಎಲ್. ನಾಗರಾಜು, ಎನ್.ನಾಗೇಂದ್ರಮೂರ್ತಿ, ಎಂ.ನಂಜುಂಡಪ್ಪ, ವಾಟಾಳ್ ಬಿ.ಆನಂದ, ಸುಬ್ಬಪ್ಪ ಷಣ್ಮುಖ, ಎಂ.ಎಂ.ಸ್ವಾಮಿ, ಡಾ.ಬಿ. ಪಿ.ಮಂಜುಳ, ಸಿ.ಎಂ.ನಾಗಜ್ಯೋತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೈಸೂರಿನ ಕೆ.ಆರ್.ವೃತ್ತದಲ್ಲಿ ಆಂಬುಲೆನ್ಸ್‌ಗೆ ಹಾದಿ ಮಾಡಿಕೊಡದ ವಾಹನ ಸವಾರರ ಅಮಾನವೀಯ ನಡೆ!

● ತುರ್ತು ಸೇವಾ ವಾಹನ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ಪೇಚಾಡುವುದು ದಿನನಿತ್ಯದ ಗೋಳು

● ರೋಗಿಯ ಗೋಲ್ಡನ್ ಅವರ್ ಮಹತ್ವ ಅರಿಯದ ಜನರ ಅನಾಗರಿಕ ವರ್ತನೆ



ಮೈಸೂರಿನ ಕೆ.ಆರ್.ವೃತ್ತದಲ್ಲಿ ಗುರುವಾರ ಬೆಳಿಗ್ಗೆ ಮತ್ತು ಮಧ್ಯಾಹ್ನ ಸಿಗ್ನಲ್ ಲೈಟ್ ಟ್ರಾಫಿಕ್‌ನಲ್ಲಿ ಸಿಲುಕಿರುವ ಆಂಬುಲೆನ್ಸ್.

ಮೈಸೂರು, ಫೆ.20(ಬಿಎಲ್‌ಯು)– ಸಾವು ಬದುಕಿನ ನಡುವೆ ಹೋರಾಡುವ ರೋಗಿಗಳನ್ನು ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯುವ ಆಂಬುಲೆನ್ಸ್ ಸಂಚಾರಕ್ಕೆ ಸಂಚಕಾರ ಎದುರಾಗಿದೆ. ರೋಗಿಯ ಉಳಿಸಲು ಪ್ರತಿ ಸೆಕೆಂಡ್ ಗೋಲ್ಡನ್ ಅವರ್ ಆಗಿರುತ್ತದೆ. ಇದರ ಮಹತ್ವ ಅರಿತ ಆಂಬುಲೆನ್ಸ್ ಚಾಲಕ ಸೈರನ್ ಹಾಕಿ ಅತೀ ವೇಗದಲ್ಲಿ ಚಾಲನೆ ಮಾಡುತ್ತಿರುತ್ತಾರೆ. ಆದರೆ ಸಿಗ್ನಲ್ ಲೈಟ್‌ಗಳಲ್ಲಿ ವಾಹನ ಸವಾರರು ಆಂಬುಲೆನ್ಸ್‌ಗಳಿಗೆ ದಾರಿ ಬಿಡುವುದಿರಲಿ, ಪರಿಸ್ಥಿತಿ ಅರಿಯದ ಮೂಢರಂತೆ ವರ್ತಿಸುತ್ತಿದ್ದಾರೆ.

ಆಂಬುಲೆನ್ಸ್ ಸೈರನ್ ಹಾಕಿದ್ದರೂ, ಹಾರ್ನ್ ಮಾಡಿದರೂ ತಮಗೆ ಏನು ಸಂಬಂಧವಿಲ್ಲ ಎಂಬಂತೆ ನಿಂತಲ್ಲೇ ನಿಂತಿರುತ್ತಾರೆ. ಮೈಸೂರಿನ ಕೆ.ಆರ್. ವೃತ್ತದಲ್ಲಿ ಇದು ನಿತ್ಯದ ಗೋಳಾಗಿದೆ.

ಆಂಬುಲೆನ್ಸ್‌ಗಳು ಜನರ ಜೀವ ಉಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಅಪಘಾತ, ಹೃದಯಾಘಾತ, ತೀವ್ರ ಅನಾರೋಗ್ಯದಿಂದ ನರಳುವ ರೋಗಿಯನ್ನು ಶೀಘ್ರ ಆಸ್ಪತ್ರೆಗೆ ದಾಖಲಿಸಿ, ಸಕಾಲಿಕ ಚಿಕಿತ್ಸೆ ನೀಡದಿದ್ದರೆ ರೋಗಿ ಪ್ರಾಣ ಪಕ್ಷಿಯೇ ಹಾರಿ ಹೋಗುತ್ತದೆ. ಹಾಗಾಗಿ ಒಂದೊಂದು ಸೆಕೆಂಡ್ ಕೂಡ ರೋಗಿ ಪಾಲಿಗೆ ಅತ್ಯಂತ ಅಮೂಲ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆಂಬುಲೆನ್ಸ್‌ಗಳಿಗೆ ಸಂಚಾರ ನಿಯಮಗಳು ಅಡ್ಡಿ ಬರುವುದಿಲ್ಲ. ರೋಗಿಯನ್ನು ಶೀಘ್ರ ಆಸ್ಪತ್ರೆಗೆ ದಾಖಲಿಸುವುದು ಚಾಲಕನ ಧ್ಯೇಯವಾಗಿರುತ್ತದೆ.

ಆದರೆ ಬಹಳಷ್ಟು ಜನರಿಗೆ ಆಂಬುಲೆನ್ಸ್‌ಗಳ ಮಹತ್ವವೇ ತಿಳಿದಿಲ್ಲ. ಸೈರನ್ ನೊಂದಿಗೆ ವೇಗವಾಗಿ ಹೋಗುವ ಆಂಬುಲೆನ್ಸ್‌ಗಳನ್ನು ಸಾಮಾನ್ಯ ವಾಹನಗಳೆಂದು ಪರಿಗಣಿಸಿದ್ದಾರೆ. ಈ ಕಾರಣದಿಂದ ಆಂಬುಲೆನ್ಸ್‌ಗೆ ದಾರಿ ಬಿಡದೆ ಬೇಜವಾಬ್ದಾರಿ ಮೆರೆಯುತ್ತಿದ್ದಾರೆ. ಸೈರನ್ ಬಾರಿಸುತ್ತಿರುವುದು ಕೇಳಿಸಿಯೂ ಕೇಳದಂತೆ ವಾಹನದಲ್ಲೇ ಕುಳಿತಿರುತ್ತಾರೆ.

ಮೈಸೂರಿನ ಕೆ.ಆರ್.ವೃತ್ತದ ಸಿಗ್ನಲ್ ಲೈಟ್‌ನಲ್ಲಿ ಇದು ಪ್ರತಿ ದಿನದ ಗೋಳಾಗಿದೆ. ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಗೆ ರೋಗಿಯನ್ನು ಕರೆದೊಯ್ಯುವ ಆಂಬುಲೆನ್ಸ್‌ಗಳಿಗೆ ದಾರಿಯನ್ನೆ ಬಿಡುವುದಿಲ್ಲ. ಎಷ್ಟೆ ಸೈರನ್ ಹಾಕಿ, ಹಾರ್ನ್ ಮಾಡಿದರೂ ಪ್ರಯೋಜನವಿಲ್ಲ.

ಕೆ.ಆರ್.ವೃತ್ತದಲ್ಲಿ ಇಂದು ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಬಾರಿ ಈ ಘಟನೆ ನಡೆಯಿತು. ರೋಗಿಯನ್ನು ತುರ್ತಾಗಿ ಕರೆದೊಯ್ಯುವ ಆಂಬುಲೆನ್ಸ್‌ಗೆ ದಾರಿ ಬಿಡಲಿಲ್ಲ ಸೈರನ್ ಹಾಕಿ,ಹಾರ್ನ್ ಮಾಡಿದರೂ ಏನು ಪ್ರಯೋಜನವಾಗಲಿಲ್ಲ. ಆಂಬುಲೆನ್ಸ್ ಚಾಲಕ ಕೂಗಿ, ಕೂಗಿ ಮುಂದೆ ಹೋಗುವಂತೆ ಹೇಳಿದರೂ ಉದ್ದಕ್ಕೂ ನಿಂತಿದ್ದ ಕಾರು, ಆಟೋ, ಬೈಕ್, ಸ್ಕೂಟರ್ ಇನ್ನಿತರೆ ವಾಹನಗಳ ಚಾಲಕರು ಅತ್ತಿತ್ತ ಕದಲಲಿಲ್ಲ.

ಆಂಬುಲೆನ್ಸ್‌ಗೆ ದಾರಿ ಬಿಡಿ ಎಂದು ಕೆಲವರು ಕೂಗಿ ಹೇಳಿದರೂ ಪ್ರಯೋಜನವಾಗಲಿಲ್ಲ. ಸಿಗ್ನಲ್ ಲೈಟ್‌ನಲ್ಲಿ ಹಸಿರು ದೀಪ ಬಂದ ನಂತರವೇ ಮುಂದೆ ಸಾಗಿದರು. ಹಾಗಾಗಿ ಆಂಬುಲೆನ್ಸ್ ನಿಂತಲ್ಲೆ ನಿಂತಿತ್ತು. ಎಲ್ಲಾ ವಾಹನಗಳು ಮುಂದೆ ಹೋದ ನಂತರ ಆಂಬುಲೆನ್ಸ್ ಚಾಲಕ ಆಸ್ಪತ್ರೆಯತ್ತ ಸಾಗಬೇಕಾಯಿತು.

ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಹೃದಯಾಘಾತವಾದಾಗ ಇದೇ ಪರಿಸ್ಥಿತಿ ಎದುರಾಯಿತು. ಪುನೀತ್ ಅವರನ್ನು ಕರೆದೊಯ್ಯುವ ಆಂಬುಲೆನ್ಸ್ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿತ್ತು. ಪ್ರಾಯಶಃ ಗೋಲ್ಡನ್ ಅವರ್‌ನಲ್ಲಿ ಪುನೀತ್ ಆಸ್ಪತ್ರೆಗೆ ಹೋಗಿದ್ದರೆ ಬದುಕುಳಿಯುತ್ತಿದ್ದರು ಅನ್ನಿಸುತ್ತದೆ. ಹಾಗಾಗಿ ಆಂಬುಲೆನ್ಸ್‌ಗಳ ಮಹತ್ವ ತಿಳಿದು, ಇನ್ನು ಮುಂದಾದರೂ ಹಾದಿ ಮಾಡಿಕೊಡಬೇಕಿದೆ.

ಪೊಲೀಸರ ದಂಡಾಸ್ತ್ರದ ಭಯ

ಸಿಗ್ನಲ್ ಜಂಪ್ ಮಾಡಿದರೆ ಸಂಚಾರಿ ಪೊಲೀಸರು ದಂಡ ವಿಧಿಸುತ್ತಾರೆ ಎಂಬ ಕಾರಣದಿಂದ ಬಹಳಷ್ಟು ವಾಹನ ಸವಾರರು ಹಿಂದೆ ಆಂಬುಲೆನ್ಸ್ ಬಂದರೂ ದಾರಿ ಬಿಡುವುದಿಲ್ಲ.

ಈ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು. ಇಲ್ಲದಿದ್ದರೆ ಇಂತಹ ಘಟನೆಗಳು ಮರುಕಳುಹಿಸುತ್ತವೆ. ಇದರಿಂದ ತುರ್ತು ಚಿಕಿತ್ಸೆ ದೊರೆಯದೆ ಎಷ್ಟೋ ಜನರು ಸಾವನ್ನಪ್ಪುತ್ತಾರೆ.

ಪೊಲೀಸರಿಂದ ಪರಿಹಾರ ಸಾಧ್ಯ

ಸಿಗ್ನಲ್ ಲೈಟ್‌ನಲ್ಲಿ ಹೀಗೆ ಆಂಬುಲೆನ್ಸ್‌ಗಳು ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದಾಗ ಸಂಚಾರಿ ಪೊಲೀಸರು ದಾರಿ ಮಾಡಿಕೊಡುವ ಜವಾಬ್ದಾರಿ ಹೊತ್ತಿರುತ್ತಾರೆ. ಆದರೆ ಇಂದು ಎತ್ತ ನೋಡಿದರೂ ಸಂಚಾರಿ ಪೊಲೀಸರೇ ಕಾಣಲಿಲ್ಲ.

ಕೆ.ಆರ್.ವೃತ್ತದಲ್ಲಿ ಬೆಳಿಗ್ಗೆಯಿಂದ ರಾತ್ರಿವರೆಗೆ ಸಂಚಾರಿ ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. ಆದರೆ ಪೊಲೀಸರು ಇರದಿದ್ದರಿಂದ ಆಂಬುಲೆನ್ಸ್ ಕೆಲವು ನಿಮಿಷ ನಿಂತಲ್ಲೇ ನಿಲ್ಲಬೇಕಾಯಿತು.

ಹಿರಿಯ ಪೊಲೀಸ್ ಅಧಿಕಾರಿಗಳು ಆಂಬುಲೆನ್ಸ್‌ಗಳಿಗೆ ಆಗುತ್ತಿರುವ ಅಡೆತಡೆ ನಿವಾರಣೆಗೆ ಇನ್ನು ಮುಂದಾದರೂ ಕೆ.ಆರ್.ವೃತ್ತದಲ್ಲಿ ಸಂಚಾರಿ ಪೊಲೀಸರನ್ನು ನಿಯೋಜಿಸಬೇಕು. ಏನಾದರೂ ಆಂಬುಲೆನ್ಸ್‌ಗಳು ಹೀಗೆ ಸಿಗ್ನಲ್‌ನಲ್ಲಿ ಸಿಲುಕಿದರೆ ದಾರಿ ಮಾಡಿಕೊಡುವಂತೆ ಸಂಚಾರಿ ಪೊಲೀಸರಿಗೆ ಸೂಚನೆ ನೀಡಬೇಕು.

ಕೇರಳ ಚುನಾವಣೆ ಹಿನ್ನೆಲೆಯಲ್ಲಿ

ಅಕ್ರಮಕ್ಕೆ ಅವಕಾಶವಾಗದಂತೆ ಗಡಿಯಲ್ಲಿ ಕಟ್ಟೆಚ್ಚರ

ಐಜಿಪಿ ಬೋರಲಿಂಗಯ್ಯ ನೇತೃತ್ವದಲ್ಲಿ ಉಭಯ ರಾಜ್ಯದ ಪೊಲೀಸ್ ಅಧಿಕಾರಿಗಳ ಸಭೆ



ಕೇರಳ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಅಕ್ರಮ ತಡೆಗೆ ಮೈಸೂರಿನ ದಕ್ಷಿಣ ವಲಯ ಕಚೇರಿಯಲ್ಲಿ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅವರು ಉಭಯ ರಾಜ್ಯಗಳ ಗಡಿ ಜಿಲ್ಲೆಯ ಎಸ್ಪಿಗಳೊಂದಿಗೆ ಅಂತರ ರಾಜ್ಯ ಗಡಿ ಸಮನ್ವಯ ಸಭೆ ನಡೆಸಿದರು

ಮೈಸೂರು, ಫೆ.20(ಎಂಟಿವೈ)– ಕೇರಳ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ತಡೆಗೆ ಅಲ್ಲಿನ ಪೊಲೀಸರು ಸಹಕಾರ ಕೋರಿಕೆ ಹಿನ್ನೆಲೆಯಲ್ಲಿ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಕರ್ನಾಟಕ ಮತ್ತು ಕೇರಳ ಗಡಿ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪರಸ್ಪರ ಸಹಕಾರದೊಂದಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮೈಸೂರಿನ ಐಜಿಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಕೇರಳದ ಗಡಿ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಗಳು, ಚುನಾವಣಾ ಅಕ್ರಮ ತಡೆಗಟ್ಟಲು ಗಡಿ ಜಿಲ್ಲೆಯ ಪೊಲೀಸರ ಸಹಕಾರ ಬೇಕಾಗಿದೆ. ಕೇರಳದಲ್ಲಿ ಮತದಾರರಿಗೆ ಆಮಿಷವೊಡ್ಡಲು, ವಿವಿಧ ವಸ್ತುಗಳನ್ನು ಕರ್ನಾಟಕದ ಗಡಿ ಮೂಲಕ ಅಕ್ರಮವಾಗಿ ಸಾಗಿಸುವ ಅನುಮಾನವಿದೆ. ಅಲ್ಲದೆ, ಮದ್ಯ ಸರಬರಾಜು ಶಂಕೆಯಿದೆ. ಈ ಹಿನ್ನೆಲೆಯಲ್ಲಿ ಗಡಿ ಜಿಲ್ಲೆಯ ಪೊಲೀಸ್ ಕಟ್ಟುನಿಟ್ಟಿನ ತಪಾಸಣೆಗೆ ಕ್ರಮ ಕೈಗೊಂಡು ಕೇರಳ ಪೊಲೀಸರಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅವರು ಕೇರಳ ಗಡಿಯಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗುವುದು. ಅಕ್ರಮಕ್ಕೆ ಸಾಗಿಸುವ ವಸ್ತುಗಳ ಮೇಲೆ ನಿಗಾ ಇಡಲಾಗುವುದು. ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಮಾಡಿ, ಕೇರಳ ಪೊಲೀಸರಿಗೆ ಸಹಕಾರ ನೀಡಲು ಕರ್ನಾಟಕ ಪೊಲೀಸರು ಬದ್ಧರಾಗಿದ್ದಾರೆ ಎಂದು ಭರವಸೆ ನೀಡಿದರು.

ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಬಾವಲಿ ಚೆಕ್‌ಪೋಸ್ಟ್ ಬಳಿ ಕಪಿಲಾ ನದಿಯನ್ನು ದಾಟಿಕೊಂಡು ಕೇರಳಕ್ಕೆ ಬಂದು ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಇದರ ಬಗ್ಗೆ ಗಮನ ಹರಿಸುವಂತೆ ಕೇರಳ ಪೊಲೀಸರು ಕೋರಿದರು. ಇದಕ್ಕೆ ಪ್ರಕ್ರಿಯಿಸಿದ ಐಜಿಪಿ, ಕಪಿಲಾ ನದಿಯಲ್ಲಿ ಬೋಟ್ ಮೂಲಕ ಗಸ್ತು ನಡೆಸಿ, ನದಿ ದಾಟಿ ಬರುವವರ ಮೇಲೆ ನಿಗಾ ಇಡುವಂತೆ ಮೈಸೂರು ಪೊಲೀಸರಿಗೆ ಸೂಚನೆ ನೀಡಿದ್ದಾರೆ

ಚೆಕ್‌ಪೋಸ್ಟ್‌ನಲ್ಲಿ ಕಟ್ಟೆಚ್ಚರ: ಮೈಸೂರು ಜಿಲ್ಲಾ ವ್ಯಾಪ್ತಿಗೆ ಕೇರಳ ಗಡಿ ಬಾವಲಿ ಚೆಕ್‌ಪೋಸ್ಟ್, ಚಾಮರಾಜನಗರ ಜಿಲ್ಲಾ ವ್ಯಾಪ್ತಿಗೆ ಗುಂಡ್ಲುಪೇಟೆ ತಾಲೂಕಿನ ಮೂಲೆಹೊಳೆ–ಮದ್ದೂರು ಚೆಕ್‌ಪೋಸ್ಟ್, ಕೊಡಗು ಜಿಲ್ಲಾ ವ್ಯಾಪ್ತಿಗೆ ಕುಟ್ಟ, ಮಾಕುಟ್ಟ ಹಾಗೂ ಕರಿಕೆ ಚೆಕ್‌ಪೋಸ್ಟ್ ಬರಲಿದೆ. ಈ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲೂ ಆಯಾ ಜಿಲ್ಲೆಯ ಪೊಲೀಸರು ಕೇರಳಕ್ಕೆ ಹೋಗುವ ವಾಹನಗಳನ್ನು ತಪಾಸಣೆ ಮಾಡುವಂತೆ ಐಜಿಪಿ ಸೂಚಿಸಿದರು.

ದಕ್ಷಿಣ ವಲಯ ಕಚೇರಿಯಲ್ಲಿ ನಡೆದ ಅಂತರ ರಾಜ್ಯ ಗಡಿ ಸಮನ್ವಯ ಸಭೆಯಲ್ಲಿ ಮೈಸೂರು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕೊಡಗು ಎಸ್ಪಿ ಆರ್.ಎನ್. ಬಿಂದುಮಣಿ, ಕೇರಳ ರಾಜ್ಯದ ಕೆಎನ್‌ಆರ್ ವಲಯದ ಡಿಐಜಿ ಯತೀಶ್ ಚಂದ್ರ, ಎಸ್ಪಿ ಅನುಜ್‌ಪಲ್ಲಿವಲ್, ವೈಯನಾಡ್ ಎಸ್ಪಿ ಅರುಣ್ ಕೆ ಪವಿತ್ರನ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

WANTED
BILL WRITER
Basic Computer knowledge, retired personal preferred
Ladies can also apply
Time: 11 AM - 7 PM
Contact in person only:
BOPYS RESTAURANT
Near Aishwarya Petrol Bunk, Hunsur Road, Mysore.

S.V.E.I. SCHOOL
1ನೇ ಮೇನ್, 4ನೇ ಹಂತ ವಿಜಯನಗರ (ಬೆಳವಾಡಿ), ಮೈಸೂರು-570018.
ಡ್ರೈವರ್ಸ್ ಬೇಕಾಗಿದ್ದಾರೆ
HPV ಲೈಸೆನ್ಸ್ ಹಾಗೂ Minimum 5 Year Experience ಹೊಂದಿರಬೇಕು
7899571827/9972737913

WANTED IMMEDIATELY
1) B.E / Diploma Engineers
2) Accountant / Account Assistant (Fresher / Experienced / Retired)
3) Field Officer/ Field Executive / Supervisor
4) Office Assistant / Office Executive
5) Data Entry Operator (Experience in Kannada Notary typing)
6) LLB Trainee
Work Location:
#20, 1st Floor, Buddhamarga, Siddhartha Layout, Opp. New DC Office, Mysore
9481232316

ಸೈಟು ಮಾರಾಟಕ್ಕಿದೆ
(DC Conversion)
ಭೋಗಾದಿ ಪಟ್ಟಣ ಪಂಚಾಯಿತಿ 'E' ಖಾತೆ
30x60 South Facing
20x40 West Facing
Near Christ Public School, Aishwarya Royal Layout, Bogadi, Mysore.
Mob: 9986501159 9686573798

G9 projects Designing your Dreams · Vee2 Developers
SHOURYA LAYOUT
20×30 MUDA Approved Sites
31 Lakhs
Adjoining vijayanagar 4th stage, Mysore
8088-707-707

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಶಿವಕುಮಾರ್ ಬಿನ್ ಮಹದೇವು, ನಂ. 1540, ಟೆಂಟ್ ಎದುರುಗಡೆ, ಕ್ಯಾತಮಾರನಹಳ್ಳಿ, ನರಸಿಂಹರಾಜ ಮೊಹಲ್ಲಾ, ಮೈಸೂರು 570019 ಇವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು (1) ಶ್ರೀ ರಂಗಸ್ವಾಮಿ ಬಿನ್ ಶ್ರೀ ಶ್ರೀನಿವಾಸ, ಮನೆ ನಂ. 740:ಎ, ರಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು (2) ಶ್ರೀ ನಾರಾಯಣ್ ಬಿನ್ ಶ್ರೀ ಶ್ರೀನಿವಾಸ, ಗ್ರಾಮಪಂಚಾಯ್ತಿ ಹಿಂಭಾಗ, 4ನೇ ಕ್ರಾಸ್, ರಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು (3) ಶ್ರೀ ಚೆಲುವನಾರಾಯಣ ಸ್ವಾಮಿ ಬಿನ್ ಶ್ರೀ ಶ್ರೀನಿವಾಸ, ನಂ. 740, ರಮ್ಮನಹಳ್ಳಿ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು ಇವರಿಂದ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಸದರಿ ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮೇಲೆ ಈ ಮೇಲ್ಕಂಡವರನ್ನು ಬಿಟ್ಟರೆ ಬೇರೆ ಯಾರಾದರೂ ಸದರಿ ಸ್ವತ್ತಿನ ಮೇಲೆ ಕ್ರಯ, ದಾನ, ಭೋಗ್ಯ, ಹಕ್ಕು ಖುಲಾಸೆ, ಬದಲಾವಣೆ, ಬೇರೆ ಯಾವ ಟ್ರಸ್ಟ್ ಇತರೆಗಳಿಗೆ ಸ್ವಾಧೀನತೆ, ಕೋರ್ಟ್ ಅಟ್ಯಾಚ್‌ಮೆಂಟ್, ಜಾಮೀನು ಇತರೆ ವಗೈರೆಗಳಿಗೆ ಒಳಪಟ್ಟಿದ್ದರೆ, ಹಾಗೂ ಇದರ ಮೇಲೆ ಬೇರೆ ಯಾರಿಗಾದರೂ ಹಕ್ಕು ವಗೈರೆ ಇದ್ದರೆ ಹಾಗೂ ಈ ಸದರಿ ಸ್ವತ್ತಿನ ಮೇಲೆ ಯಾವುದೇ ತಂಟೆ ತಕರಾರುಗಳು ಇದ್ದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬಂದು ತಮ್ಮ ಅಹವಾಲನ್ನು ಹಾಗೂ ತಂಟೆ ತಕರಾರಿನ ಅರ್ಜಿಯನ್ನು ಸಲ್ಲಿಸಬಹುದು. ಸದರಿ ಸ್ವತ್ತಿನ ಮೇಲೆ ನಿಮ್ಮಗಳ ಅಥವಾ ಯಾರಾದರೂ ಸಾರ್ವಜನಿಕರಾಗಲೀ, ಇದಕ್ಕೆ ಸಂಬಂಧಪಟ್ಟವರಾಗಲೀ ತಮ್ಮ ತಕರಾರುಗಳನ್ನು ಈ ಪ್ರಕಟಣೆಯನ್ನು ಪ್ರಕಟಿಸಿದ 15 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳಾಗಲೀ ಇತರೆ ಅಹವಾಲುಗಳು ನಿಗದಿತ ಸಮಯದಲ್ಲಿ ಸಲ್ಲಿಸದೇ ಇದ್ದಲ್ಲಿ ಅವುಗಳನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಕ್ಯಾತಮಾರನಹಳ್ಳಿ, ರಾಮಮಂದಿರ ಬೀದಿಯಲ್ಲಿರುವ ಕಾರ್ಪೋರೇಷನ್ ಸ್ವತ್ತಿನ ಸಂಖ್ಯೆ : 58-2-209-T 5492598054937043, ವಾರ್ಡ್ ನಂಬರ್ 58, ಸ್ವತ್ತಿನ ಹಳೆ ಸಂಖ್ಯೆ : ನಂಬರ್ 1591, ಎನ್-45/1 ಮತ್ತು 1591/1, ಎನ್-45-2 ನಿರ್ಧರಣಾ ಸಂಖ್ಯೆ : ನಂಬರ್ 1591, ಎನ್-45/1 ಮತ್ತು 1591/1, ಎನ್-45/2, ರಂತೆ ಪೂರ್ವ ಪಶ್ಚಿಮ :7.00 ಮೀಟರ್‌ಗಳು, ಉತ್ತರದಕ್ಷಿಣ:11.30 ಮೀಟರ್‌ಗಳು ಒಟ್ಟು 79.10 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂಧಿ : ಪೂರ್ವಕ್ಕೆ :ರಸ್ತೆ, ಪಶ್ಚಿಮಕ್ಕೆ :ಗಲ್ಲಿ, ಉತ್ತರಕ್ಕೆ : ಖಾಸಗಿಯವರ ಸ್ವತ್ತು ದಕ್ಷಿಣಕ್ಕೆ :ಖಾಸಗಿಯವರ ಸ್ವತ್ತು

ಸಹಿ/- ಅಭಿನಂದನ್.ಹೆಚ್., ವಕೀಲರು,
ನಂ990, 1ನೇ ಮಹಡಿ, ಇ & ಎಫ್ ಬ್ಲಾಕ್, ಪಂಚಮಂತ್ರ ರಸ್ತೆ,
ಕುವೆಂಪುನಗರ, ಮೈಸೂರು-570023
ಮೊ:9964426903
Date: 19-02-2026



10 am to 8 pm · Open All Days · Master / Visa Card Accepted
INNERWEAR · LEISUREWEAR · ACTIVEWEAR · KIDSWEAR · SOCKS
Venue In Mysore
JLB Road — The Institution Of Engineers (Auditorium Hall), Jhansi Lakshmibai Road - 5
Org. by: Surya Agency Pvt Ltd.

DISCOVER ANDAMAN
4 to 6 Nights
PORT BLAIR • NEIL • HAVELOCK
Best Rates & Customised Itinerary
CASCADE TRAVELS Call: 99452 75336 / 94480 75336

JOCKEY
WE ARE HIRING!
✓ STORE MANAGER
Contact : 9611586233
P.27,12th Cross Road, Siddharthanagar Layout, Mysuru - 570011

LOANS HUB
ALL LOANS UNDER ONE ROOF
- Business Loans
- Housing Loans
- Mortgage Loans
- Balance Transfer & Top up

TRUSTED SERVICE
NO SERVICE CHARGES
SRI SAI FINANCIAL SERVICES
Railway Gate Road KG Koppal Mysore
Contact :
88844 47314 / 88844 47318

Exchange your old sofa set to brand new sofa set. Also repair done.
Mob: 9591012944

FOR RENT
Independent House
3BHK Duplex VEG ONLY
Rajarajeshwari Nagar
BEML Layout Mysuru
CONTACT
7022251741

WANTED ACCOUNTANT
Minimum 5 Years Experience in Accounting. Proficiency in Tally, GST Filling, Store Operations and Bank Reconciliation Required.
Salary : 25,000per Month. Age: Below 40 years. Location Mysuru.
Interested candidates may contact
98884 84988

RENT APPARTMENT
3BHK
VASTHU
Lalithamahal Road
9448060597


HYUNDAI CRETA CAR FOR SALE
Company Executive Driven, Single Handed TOP END, Fully Loaded With 10.3" Screen, 360 degree Camera, new battery, tyre, Diesel car 2016 model, Silver Colour, in Excellent Condition for Sale
@ 8.75 lakh
9886241739

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಸವಿನೆನಪು



ಬಿ.ಎಂ. ದೀಪಕ್ B.E. Civil Engineer
ಪೇಟೆ ಬೀದಿ, ಬೆಟ್ಟದಪುರ
ಇಂದಿಗೆ ನೀನು ನಮ್ಮನ್ನು ಅಗಲಿ ಒಂದು ವರ್ಷ
ಕಂದ ನಿನ್ನ ಮರೆಯಲಾಗದೆ ಸದಾ ನಿನ್ನ ನೆನಪಿನ ದುಃಖದಲ್ಲಿ
ತಂದೆ ಬಿ.ಪಿ. ಮಂಜು, ತಾಯಿ ಕೆ.ವಿ.ಶೋಭ, ತಂಗಿ ಬಿ.ಎಂ. ಪೂಜಾ, ಚಿಕ್ಕಪ್ಪ ಬಿ.ಪಿ. ಲೋಕೇಶ್, ತಾತ, ಅಜ್ಜಿ, ಹಾಗೂ ಅನುರಾಧ ಹರೀಶ್, ಆಶಾ ಮಧು, ಪಲ್ಲವಿ ಶೇಖರ್, ಆತ್ಮೀಯ ಸ್ನೇಹಿತ ರಾಜೇಶ್(ಮೈಸೂರು) ಹಾಗೂ ಕುಟುಂಬಸ್ಥರು ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಂ.ಬಿ. ವಿಜಯಕುಮಾರ್
ನಿಧನ : 12-02-2026

ದಿ|| ಜಯಮ್ಮ ಮತ್ತು ದಿ|| ಬೋರಯ್ಯನವರ ಕುಟುಂಬ ಶ್ರೀಮತಿ ಕೆ.ವನಜ (ನಂ 399, ಹೆಬ್ಬಾಳು, 1ನೇ ಹಂತ, ಮೈಸೂರು-16) ಇವರು ಮಾಡುವ ವಿಜ್ಞಾಪನೆಗಳು ನನ್ನ ಪೂಜ್ಯ ಪತಿಯವರಾದ ಎಂ.ಬಿ.ವಿಜಯಕುಮಾರ್ ಇವರು ದಿನಾಂಕ: 12-02-2026ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 22-02-2026ನೇ ಭಾನುವಾರ ಬೆಳಗ್ಗೆ 11 ಗಂಟೆಗೆ ಮೃತರ ಸ್ವಗೃಹ ನಂ 399, ಹೆಬ್ಬಾಳು, 1ನೇ ಹಂತ, ಮೈಸೂರು-16 ಇಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಭೋಜನ: ಮಧ್ಯಾಹ್ನ 12.00ಕ್ಕೆ

ದುಃಖತಪ್ತರು
ಕೆ.ವನಜ, ಮಗ ರವಿಕಿರಣ್, ಸೊಸೆ ವಿದ್ಯಾಶ್ರೀ, ಮಗಳು ರಂಜಿತ, ಅಳಿಯ ಸುದರ್ಶನ್, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

SITE FOR SALE
60x40
South Face
Rupanagar
9742421313

ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಕೆಳಗೆ ಎ. ಬಿ ಮತ್ತು ಸಿ ಷೆಡ್ಯೂಲ್‌ಗಳಲ್ಲಿ ವಿವರಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಅವುಗಳ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ. ಮಾದಹಳ್ಳಿ ಗ್ರಾಮದ ವಾಸಿ ಲೇಟ್. ಚನ್ನವೀರಯ್ಯರವರ ಮಕ್ಕಳು (1) ಎಂ.ಸಿ. ಮಹದೇವಪ್ಪ, (2) ಸಿ.ಮಲ್ಲೇಸ್ವಾಮಿ @ ಸಿ.ಮಲ್ಲೇಶ್ ಹಾಗೂ (3) ಸಿ.ನಾಗರಾಜು ಅವರುಗಳ ಸಂಪೂರ್ಣ ಹಕ್ಕು, ಮಾಲೀಕತ್ವಕ್ಕೊಳಪಟ್ಟ ಹಾಗೂ ಯಾವುದೇ ಋಣಭಾರಗಳಿಲ್ಲದ ಷೆಡ್ಯೂಲ್ ಸ್ವತ್ತುಗಳನ್ನು ಸದರಿ (1) ಎಂ.ಸಿ. ಮಹದೇವಪ್ಪ (ಎ ಷೆಡ್ಯೂಲ್ ಸ್ವತ್ತು), (2) ಸಿ.ಮಲ್ಲೇಸ್ವಾಮಿ @ ಸಿ.ಮಲ್ಲೇಶ್ (1ಬಿ ಷೆಡ್ಯೂಲ್ ಪ್ವತ್ತು) ಹಾಗೂ (3) ಸಿ.ನಾಗರಾಜು (ಸಿ ಷೆಡ್ಯೂಲ್ ಸ್ವತ್ತು) ರವರಿಂದ ಕ್ರಯಕ್ಕೆ ಪಡೆಯಲು ಹೊರಟಿರುತ್ತಾರೆ. ಸದರಿ ಸ್ವತ್ತುಗಳ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು ಬಾಧ್ಯತೆ ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಸದರಿ ಹಕ್ಕು ಬಾಧ್ಯತೆ, ಆಕ್ಷೇಪಣೆಗಳನ್ನು ಪುಷ್ಟೀಕರಿಸುವಂತಹ ಸೂಕ್ತ ದಾಖಲಾತಿಗಳೊಂದಿಗೆ ಈ ನೋಟೀಸು ಪ್ರಕಟವಾದ 7 (ಏಳು) ದಿನಗಳ ಒಳಗೆ ಕೆಳಕಂಡ ವಕೀಲರ ಕಚೇರಿಗೆ ಸಲ್ಲಿಸತಕ್ಕದ್ದು, ನಂತರ ಬರುವ ಆಕ್ಷೇಪಣೆಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಶೃತಪಡಿಸಿರುತ್ತದೆ.

"ಎ" ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮದ ಸರ್ವೆ ನಂ. 119/1 ರ ವಿಸ್ತೀರ್ಣ 38 ಗುಂಟೆ ಎಂ.ಸಿ. ಮಹದೇವಪ್ಪ ರವರಿಗೆ ಸೇರಿದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ವಿಭೂತಿ ಸುರೇಶ್ ರವರ ಜಮೀನ, ಪಶ್ಚಿಮಕ್ಕೆ: ಗುರುಸ್ವಾಮಿ ರವರ ಜಮೀನು, ಉತ್ತರಕ್ಕೆ: ಕೂಡನಹಳ್ಳಿ ಬಸವರಾಜು ರವರ ಜಮೀನು, ದಕ್ಷಿಣಕ್ಕೆ: ಮಲ್ಲೇಸ್ವಾಮಿ ಸಿ ರವರ ಜಮೀನು,

"ಬಿ" ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ. ಮಾದಹಳ್ಳಿ ಗ್ರಾಮದ ಸರ್ವೆ ನಂ. 119/4 ರ ವಿಸ್ತೀರ್ಣ 38 ಗುಂಟೆ ಸಿ. ಮಲ್ಲೇಸ್ವಾಮಿ @ ಸಿ.ಮಲ್ಲೇಶ್ ರವರಿಗೆ ಸೇರಿದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ವಿಭೂತಿ ಸುರೇಶ್ ರವರ ಜಮೀನು, ಪಶ್ಚಿಮಕ್ಕೆ ಕೆಂಡಗಣ್ಣ ರವರ ಜಮೀನು, ಉತ್ತರಕ್ಕೆ: ಎಂ.ಸಿ ಮಹದೇವಪ್ಪ ರವರ ಜಮೀನು, ದಕ್ಷಿಣಕ್ಕೆ: ಸಿ.ನಾಗರಾಜು ರವರ ಜಮೀನು,

"ಸಿ" ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು. ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮದ ಸರ್ವೆ ನಂ. 119/5 ರ ವಿಸ್ತೀರ್ಣ 39 ಗುಂಟೆ ಸಿ. ನಾಗರಾಜು ರವರಿಗೆ ಸೇರಿದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ವಿಭೂತಿ ಸುರೇಶ್ ರವರ ಜಮೀನು, ಪಶ್ಚಿಮಕ್ಕೆ: ಕೆಂಡಗಣ್ಣ ರವರ ಜಮೀನು, ಉತ್ತರಕ್ಕೆ: ಸಿ. ಮಲ್ಲೇಸ್ವಾಮಿ @ ಸಿ. ಮಲ್ಲೇಶ್ ರವರ ಜಮೀನು, ದಕ್ಷಿಣಕ್ಕೆ : ಮಹದೇವಪ್ಪ ರವರ ಜಮೀನು.

Sd/- SOMANNA. M.E., B.Com., LL.B
Advocate & Notary, #11, 1st Floor, 3rd Main, 9th Cross,
Kamakshi Hospital Road, Saraswathipuram,
Mysore - 570009, Enrol. No: KAR 270/00
DATE: 20-02-2026 mob: 9341933392

ಕರ್ನಾಟಕ ಸರ್ಕಾರ
ಸಹಾಯಕ ನಿರ್ದೇಶಕರು(ಗ್ರೇಡ್-2)ರವರ ಕಛೇರಿ,
ಸಮಾಜ ಕಲ್ಯಾಣ ಇಲಾಖೆ, ಕೃಷ್ಣರಾಜನಗರ ತಾಲ್ಲೂಕು
7ನೇ ರಸ್ತೆ, ಪಾಂಡುರಂಗ ದೇವಸ್ಥಾನದ ರಸ್ತೆ, ಕೆ.ಆರ್.ನಗರ.
ಪೋನ್ ನಂ.08223-264049
ಇ-ಮೇಲ್ ವಿಳಾಸ: tswokrnagara@gmail.com
ಸಂಖ್ಯೆ:ಸನಿ/ಸಕಇ/ಕಾ.ಬಾ/ಸಿಆರ್/2025-26 ದಿನಾಂಕ: 18.02.2026

ಟೆಂಡರ್ ಪ್ರಕಟಣೆ

ಕೆ.ಆರ್.ನಗರ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್-2) ರವರಿಗೆ ಆಡಳಿತ ಹಿತದೃಷ್ಟಿಯಿಂದ ಪ್ರವಾಸ ಮಾಡಲು ಟಾಟಾ ಇಂಡಿಗೋ/ ಬೊಲೇರೋ/ಮಾರುತಿ ಸಿಫ್ಟ್ ಡಿಸೈರ್/ಟಯೋಟ/ಎಟಿಯಎಸ್ ಇತರೆ ವಾಹನವನ್ನು (ವ್ಯಾನ್ ಹೊರತುಪಡಿಸಿ) ಮಾಸಿಕ ಬಾಡಿಗೆ ಆಧಾರದ ಮೇಲೆ ಒದಗಿಸಲು ಅಧೀಕೃತ ಟ್ರಾವೆಲ್ ಏಜೆನ್ಸಿ /ಮಾಲೀಕರುಗಳಿಂದ "ದ್ವಿ ಲಕೋಟೆ" ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳವರು ಟೆಂಡರ್ ಷರತ್ತಿಗೊಳಪಟ್ಟು ದಿ:20.03.2026ರ ಸಂಜೆ 5.30 ರೊಳಗೆ ಕಛೇರಿಯಲ್ಲಿ ಟೆಂಡರ್ ಅರ್ಜಿಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ದಿ: 23.03.2026ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ. ಟೆಂಡರ್ ಇಟ್ಟಿರುವ ಮೊತ್ತ ರೂ.4.20 ಲಕ್ಷ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿರುತ್ತದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 1) 08223-264049 2) 9731805937

ಸಹಿ/- ಸಹಾಯಕ ನಿರ್ದೇಶಕರು (ಗ್ರೇಡ್-2),
ಸಮಾಜ ಕಲ್ಯಾಣ ಇಲಾಖೆ, ಕೆ.ಆರ್.ನಗರ ತಾಲ್ಲೂಕು
DIPR/DDMYS/1691/KSMCA/959/2025-26

ನಗೆ ಉತ್ಸವ



ವೀಕೆಂಡ್ ಬಂತು, ಟೆನ್ಷನ್ ಬಿಡಿ!
ನಮ್ಮ ನೆಚ್ಚಿನ ಕಲಾವಿದರು ಬರ್ತಿದ್ದಾರೆ, ನಿಮ್ಮನ್ನ ಬಿದ್ದು ಬಿದ್ದು ನಗಿಸೋಕೆ.
ಸರ್ವರಿಗೂ ಸುಸ್ವಾಗತ
ನಾದ ಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು
22 ಫೆಬ್ರವರಿ 2026 • ಬೆಳಿಗ್ಗೆ 10 ಕ್ಕೆ

HOUSE FOR SALE
As Per Your Requirement Architect Designed.

AT MYSURU	*AT HUNSUR*
Near Vajamangala, Bannur Road.	Near KSRTC Bus Depot.
20x30 30.5 Lakhs	20x30 24 Lakhs
20x40 34 Lakhs	20x40 24.6 Lakhs
30x40 54 Lakhs	30x40 29 Lakhs.
Near St. Joseph School.	Contact
20x40 - 44 Lakhs	
30x50 - 82 Lakhs	

8123387555 / 7259348777

ನಂ.561ನೇ, ಸೋಮವಾರಪೇಟೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಸೋಮವಾರಪೇಟೆ.

ಸಿ.ಕೆ.ಸುಬ್ಬಯ್ಯ ರಸ್ತೆ, ಸೋಮವಾರಪೇಟೆ, ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ-571236.
E-mail-mcs1965ltd@gmail.com ದೂ: 9902291052.

ಈ ಕೆಳಕಂಡ ಖಾಲಿ ಹುದ್ದೆಗಳಿಗೆ ಅರ್ಜಿ ಅಹ್ವಾನ.

ಕ್ರಸಂ	ಹುದ್ದೆಯ ಹೆಸರು	ಸಾಮಾನ್ಯ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವೇತನ ಶ್ರೇಣಿ
1	2	3	4	5	6
1	ದ್ವಿತೀಯ ದರ್ಜೆ ಗುಮಾಸ್ತರು.	2	2 ಹುದ್ದೆ	1.ದ್ವಿತೀಯ ಪಿ.ಯು.ಸಿ ಯಲ್ಲಿ ಉತ್ತೀರ್ಣರಾಗಿರಬೇಕು. 2. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. ಮತ್ತು 3.ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಜ್ಞಾನವಿರಬೇಕು. 4.ಸಹಕಾರ ವಿಷಯದಲ್ಲಿ ತತ್ಸಮಾನ ವಿದ್ಯಾರ್ಹತೆ ಪಡೆದವರಿಗೆ ಅಥವಾ ಡಿ.ಸಿ.ಎಂ. (ಜಿ.ಡಿ.ಸಿ.) ತರಭೇತಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.	21400-500-22400-550-24600-600-27000-650-29600-750-32600-850-36000-950-39800-1100-42000

ಮೇಲ್ಕಂಡ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೆಳಗೆ ನಮೂದಿಸಿದ ನಿಬಂಧನೆಗಳಿಗೆ ಪೂರಕವಾದ ದೃಢೀಕೃತ ದಾಖಲೆಗಳ ಪ್ರತಿಯೊಂದಿಗೆ ದಿನಾಂಕ: 06-03-2026 ರ ಗುರುವಾರ ದಿವಸ ಸಂಜೆ 4.00 ಗಂಟೆಯ ಒಳಗಾಗಿ ಸಂಘದ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ತದನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ:06-03-2026.

ಅರ್ಜಿ ನಮೂನೆ ಪಡೆಯುವ ಸ್ಥಳ ಮತ್ತು ಅರ್ಜಿ ಸಲ್ಲಿಸುವ ಸ್ಥಳ: ನಂ.561ನೇ ,ಸೋಮವಾರಪೇಟೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಸೋಮವಾರಪೇಟೆ. ಸಿ.ಕೆ.ಸುಬ್ಬಯ್ಯ ರಸ್ತೆ, ಸೋಮವಾರಪೇಟೆ ತಾಲೂಕು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ (ಸಾರ್ವತ್ರಿಕ ರಜೆ ದಿನಗಳನ್ನು ಹಾಗೂ ಭಾನುವಾರಗಳನ್ನು ಹೊರತುಪಡಿಸಿ)

ಕ್ರಮ ಸಂಖ್ಯೆ (1) ರ- ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

1.ಅಭ್ಯರ್ಥಿಯ ಸ್ವ ಕೈ-ಬರಹದಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಅಭ್ಯರ್ಥಿಯ ಇತ್ತೀಚಿನ ಎರಡು ಭಾವಚಿತ್ರ, ಪೂರ್ಣ ವಿಳಾಸದ ಆಧಾರ್ ಪ್ರತಿ ಮತ್ತು ವೈಯಕ್ತಿಕ ವಿವರ(**Bio-data**) ವನ್ನು ಸಲ್ಲಿಸತಕ್ಕದ್ದು. 2.ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ಅಂಕಪಟ್ಟಿಗಳ ದೃಢೀಕೃತ ನಕಲು ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. 3. ಎಸ್.ಎಸ್.ಎಲ್.ಸಿ ಅಥವಾ ಇದಕ್ಕೆ ಸರಿಸಮಾನವಾದ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನವನ್ನು ಮಾಡಿರತಕ್ಕದ್ದು. 4. ಅಭ್ಯರ್ಥಿಯು ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಸರ್ಕಾರದ ಅಂಗೀಕೃತ ಸಂಸ್ಥೆಯಿಂದ ಪಡೆದ ಪ್ರಮಾಣ ಪತ್ರ, 5. ಡಿ.ಸಿ.ಎಂ. (ಜಿ.ಡಿ.ಸಿ.) ಅಥವಾ ಸಹಕಾರ ವಿಷಯದಲ್ಲಿ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಅಂಕಪಟ್ಟಿ ಪ್ರತಿ ಲಗತ್ತಿಸಬೇಕು.

ಈ ಮೇಲಿನ ಹುದ್ದೆಗಳಿಗೆ ವಯೋಮಿತಿ: ಸಾಮಾನ್ಯ ವರ್ಗದವರಿಗೆ ಕನಿಷ್ಠ 18 ವರ್ಷ ಗರಿಷ್ಠ 35 ವರ್ಷ ಹಾಗೂ ಹಿಂದುಳಿದ ವರ್ಗದವರಿಗೆ ಕನಿಷ್ಠ 18 ವರ್ಷ ಗರಿಷ್ಠ 38 ವರ್ಷ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ಗರಿಷ್ಠ 40 ವರ್ಷಗಳು.

ಸೂಚನೆಗಳು:

1) ಭರ್ತಿ ಮಾಡಿದ ಅರ್ಜಿಯ ಲಕೋಟೆಯ ಮೇಲ್ಭಾಗದಲ್ಲಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಿದೆ ಎಂಬುದಾಗಿ ದಪ್ಪ ಅಕ್ಷರಗಳಲ್ಲಿ ಬರೆಯತಕ್ಕದ್ದು. ಯಾವುದೇ ಅಪೂರ್ಣ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. 2) ಅಭ್ಯರ್ಥಿಯು ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿ ಕುರಿತು ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪಡೆದು ಲಗತ್ತಿಸುವುದು. 3) ಖಾಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ ಅಭ್ಯರ್ಥಿಗಳನ್ನು ಅಹ್ವಾನಿಸಲಾಗುವುದು. ಸಂಘದಿಂದ ಈ ಕೆಳಕಂಡ ವಿಷಯಗಳಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಲಿಖಿತ ಪರೀಕ್ಷೆ ನಡೆಸುವ ಸ್ಥಳ ಹಾಗೂ ದಿನಾಂಕವನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು ಹಾಗೂ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಲಿಖಿತ ಪರೀಕ್ಷೆಯು ಒಟ್ಟು 200 ಅಂಕಗಳಿಗೆ ಈ ಕೆಳಕಂಡ ವಿಷಯಗಳಲ್ಲಿ ಪರೀಕ್ಷೆ ನಡೆಸಲಾಗುವುದು (1) ಕನ್ನಡ ಭಾಷೆ-50 ಅಂಕಗಳಿಗೆ (2) ಸಾಮಾನ್ಯ ಜ್ಞಾನ-25 ಅಂಕಗಳಿಗೆ (3) ಸಾಮಾನ್ಯ ಇಂಗ್ಲೀಷ್-25 ಅಂಕಗಳಿಗೆ (4) ಸಹಕಾರ ವಿಷಯ-50 ಅಂಕಗಳಿಗೆ (5)ಭಾರತ ಸಂವಿಧಾನ-25 ಅಂಕಗಳಿಗೆ (6)ಸಂಘದ ಕಾರ್ಯಚಟುವಟಿಕೆ ಮತ್ತು ಉದ್ದೇಶಗಳು-25 ಅಂಕಗಳಿಗೆ.

(ಅ)ಅಭ್ಯರ್ಥಿಗಳು ಸಂಘದಿಂದ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇ.85 ಕ್ಕೆ ನಿಗದಿಪಡಿಸಲಾಗುವುದು ಹಾಗೂ ಉಳಿದ ಶೇ.15 ಅಂಕಗಳಿಗೆ ಮೌಖಿಕ ಸಂದರ್ಶನವನ್ನು ನಿಗದಿಪಡಿಸಲಾಗುವುದು. (ಆ) ಪ್ರತಿ ಹುದ್ದೆಗೆ 1:5 ರ ಪ್ರಮಾಣದಲ್ಲಿ ಅಭ್ಯರ್ಥಿಗಳನ್ನು ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗುವುದು. (ಇ) ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನಕ್ಕೆ ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಹಾಜರಾಗುವುದು. ಸಂಘದಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ. (ಈ) ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಬಗ್ಗೆ ಪ್ರಮಾಣ ಪತ್ರ, ವಿದ್ಯಾರ್ಹತೆ, ವಯೋಮಿತಿಗೆ ಸಂಬಂಧಿಸಿದ ದೃಢೀಕೃತ ದಾಖಲಾತಿಗಳೊಂದಿಗೆ ಸಾಮಾನ್ಯ ವರ್ಗದವರು ರೂ.1,000.00 + 180.00 ಜಿ.ಎಸ್.ಟಿ, ಹಾಗೂ ಹಿಂದುಳಿದ ವರ್ಗದವರು ರೂ.750.00 + 135.00 ಜಿ.ಎಸ್.ಟಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ರೂ.500.00 + 90.00 ಜಿ.ಎಸ್.ಟಿ \ಸೇರಿದಂತೆ ಡಿ.ಡಿ, ನೆಫ್ಟ್ ಅಥವಾ ನೇರವಾಗಿ ಸಂಘಕ್ಕೆ ಪಾವತಿಸಿ, ಪಾವತಿ ಮಾಡಿರುವ ರಶೀದಿಯ ನಕಲನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಅಥವಾ ಡಿ.ಡಿಯನ್ನು ಮುಖ್ಯಕಾರ್ಯನಿರ್ವಹಕರು, ನಂ.561ನೇ ,ಸೋಮವಾರಪೇಟೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಸೋಮವಾರಪೇಟೆ.ರವರ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಮೂಲ ಪ್ರತಿಯನ್ನು ಲಗತ್ತಿಸುವುದು. (ಉ) ನೇಮಕಾತಿಯ ಅಧಿಸೂಚನೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಘದ ಕಛೇರಿಯ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ. (ಊ) ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪೈಕಿ 1:5 ರ ಪ್ರಮಾಣದಲ್ಲಿ ಮೌಖಿಕ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನದ ಸ್ಥಳ, ದಿನಾಂಕ ಮತ್ತು ಸಮಯವನ್ನು ಅಭ್ಯರ್ಥಿಗಳಿಗೆ ಅಂಚೆ ಮೂಲಕ ಹಾಗೂ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ಎಲ್ಲಾ ದಾಖಲೆಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು. (ಋ)ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಾತಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. (ಋ) ಆಯ್ಕೆಯಾಗುವ ಅಭ್ಯರ್ಥಿಗಳು ಸಂಘವು ನಿಗಧಿಪಡಿಸುವ ಭದ್ರತಾ ಠೇವಣಿ ಹಾಗೂ ಖಾತ್ರಿ ಬಾಂಡನ್ನು ಭರಿಸಲು ಬದ್ಧರಾಗಿರತಕ್ಕದ್ದು.

ಸ್ಥಳ; ಸೋಮವಾರಪೇಟೆ.
ದಿನಾಂಕ: 19-02-2026

ನೇಮಕಾತಿ ಸಮಿತಿ ಅಪ್ಪಣೆ ಮೇರೆಗೆ,
ಸಹಿ/- ಮುಖ್ಯಕಾರ್ಯನಿರ್ವಹಕರು